ಸಂಪುಟ: 06 ಸಂಚಿಕೆ: 47 ಪುಟಗಳು: 08 ಶುಕ್ರವಾರ 01 ಮೇ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**
ಕುತೂಹಲವೇ ನಮ್ಮ ಬುದ್ಧಿಗೆ ಸಂಗತಿಯನ್ನು ಮೂಲ. ಯಾವುದೇ ಒಪ್ಪಿಕೊಳ್ಳುವ ಮುನ್ನ ಪರಾಮರ್ಶಿಸುವ ರೂಢಿ ಬೆಳೆಸಿಕೊಳ್ಳೋಣ!

# ಸಚಿವರ ಸಭೆ: ಮೂರು ನಗರಗಳಲ್ಲಿ ಸುಸ್ಥಿರ ಡೇಟಾ ಪಾರ್ಕ್ ಸ್ಥಾಪನೆಗೆ ತೀರ್ಮಾನ

**500 ಮೆಗಾವ್ಯಾಟ್ ಸುಸ್ಥಿರ ಡೇಟಾ ಪಾರ್ಕ್**

• ಉದಯವಾಹಿನಿ,ಬೆಂಗಳೂರು

ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಸುಸ್ಥಿರ ಡೇಟಾ ಕೇಂದ್ರಗಳು (ಸಸ್ಟೇನಬಲ್ ಡೇಟಾ ಸೆಂಟರ್ಸ್) ಅಗತ್ಯವಿದ್ದು ಬೆಂಗಳೂರು, ಮೈಸೂರು ಮತ್ತು ಮಂಗಳೂರಿನಲ್ಲಿ ಡೇಟಾ ಪಾರ್ಕ್ ಸ್ಥಾಪಿಸಲು ಗುರುವಾರ ನಡೆದ ಸಂಬಂಧಿತ ಸಚಿವರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಇಲ್ಲಿನ ಶಕ್ತಿ ಭವನದಲ್ಲಿ ನಡೆದ ಈ ಪ್ರಾಥಮಿಕ ಸಭೆಯಲ್ಲಿ ಇಂಧನ ಸಚಿವ ಕೆ ಜೆ ಜಾರ್ಜ್, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಮತ್ತು ಐಟಿ ಸಚಿವ ಪ್ರಿಯಾಂಕ್ ಖರ್ಗೆ ಪಾಲ್ಗೊಂಡಿದ್ದರು.

ಬೆಂಗಳೂರಿನಲ್ಲಿ ಹೊಸಕೋಟೆಯ ಸಮೀಪ 500 ಮೆಗಾವ್ಯಾಟ್ ಸಾಮರ್ಥ್ಯದ ಸುಸ್ಥಿರ ಡೇಟಾ ಕೇಂದ್ರ ಪಾರ್ಕ್ ಸ್ಥಾಪಿಸಲಾಗುವುದು. ಪಾವಗಡದಿಂದ ಪೂರೈಕೆಯಾಗುವ ಸೌರ ವಿದ್ಯುತ್ ನೇರವಾಗಿ ಇಲ್ಲಿಗೆ ತಲುಪುತ್ತದೆ. ಜತೆಗೆ ಬೆಂಗಳೂರು ಜಲ ಮಂಡಳಿಯು ಎರಡು ಹಂತಗಳಲ್ಲಿ ಸಂಸ್ಕರಿಸಿದ 60 ಎಂ.ಎಲ್.ಡಿ ನೀರು ಪೂರೈಕೆಗೆ ತೊಂದರೆ ಇಲ್ಲ ಎಂದು ತಿಳಿಸಿದೆ. ಸ್ವತಃ ಉದ್ಯಮಗಳೇ ಈ ನೀರಿನ ಮೂರನೇ ಹಂತದ ಶುದ್ಧೀಕರಣ ಮಾಡಿಕೊಳ್ಳುತ್ತವೆ. ಈ ಮೂರೂ ಪಾರ್ಕುಗಳ ಒಟ್ಟು



ಸಾಮರ್ಥ್ಯ 1,000 ಮೆಗಾವ್ಯಾಟ್ ಇರಲಿದೆ ಎಂದು ಸಚಿವರು ಹೇಳಿದ್ದಾರೆ.

ಮಂಗಳೂರಿನಲ್ಲಿ ಕೂಡ ಡೇಟಾ ಪಾರ್ಕ್ ಸ್ಥಾಪನೆಗೆ ಭೂಮಿಯು ಲಭ್ಯವಿದೆ. ಅಲ್ಲಿನ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ ಕೆಐಎಡಿಬಿಗೆ ಸೇರಿದ 350 ಎಕರೆ ಇದೆ. ಮೈಸೂರಿನಲ್ಲಿ ಈ ಉದ್ದೇಶಕ್ಕೆ ಸೂಕ್ತ ಜಾಗ ಗುರುತಿಸಲಾಗುವುದು ಎಂದು ಅವರು ವಿವರಿಸಿದ್ದಾರೆ. ಈ ಪಾರ್ಕ್‌ಗಳಲ್ಲಿ ಯಾರೇ ಬಂದ ಡಾಟಾ ಸೆಂಟರ್ ಸ್ಥಾಪನೆಗೆ ಹೂಡಿಕೆ ಮಾಡಿದರೆ ಅವರಿಗೆ ವಿದ್ಯುತ್ ಮತ್ತು ನೀರು ನೀಡಲಾಗುವುದು. ಇದಕ್ಕೆ ಪೂರಕವಾದ ಸಿದ್ಧತೆ ಮಾಡಿಕೊಳ್ಳಲು ಮೂವರು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು. ಸದ್ಯದಲ್ಲೇ ಹೂಡಿಕೆದಾರರ ಜತೆಗೂ ಸಭೆ ಮಾಡಲು ಸಚಿವರು ಸಲಹೆ ನೀಡಿದರು.

ಮುಂದಿನ ಹಂತದಲ್ಲಿ ಜಲ ಸಂಪನ್ಮೂಲ ಖಾತೆಯನ್ನು ಹೊಂದಿರುವ ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರೂ ಇರುವ ಸಚಿವರ ತಂಡವನ್ನೂ ಮತ್ತು ಉನ್ನತ ಅಧಿಕಾರಿಗಳ ತಂಡವನ್ನೂ ಈ ಸಂಬಂಧ ರಚಿಸಲಾಗುವುದು. ಒಟ್ಟಿನಲ್ಲಿ ತ್ವರಿತವಾಗಿ ಈ ಡೇಟಾ ಪಾರ್ಕುಗಳನ್ನು ಸ್ಥಾಪಿಸಲಾಗುವುದು ಎಂದು ಅವರು ನುಡಿದಿದ್ದಾರೆ. ಸಭೆಯಲ್ಲಿ ಇಂಧನ ಮತ್ತು ಜಲ ಸಂಪನ್ಮೂಲ ಇಲಾಖೆ ಕಾರ್ಯದರ್ಶಿ ಗೌರವ್ ಗುಪ್ತ, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಐಟಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಂಜುಳಾ, ಕೆಎಸ್ಐಐಡಿಸಿ ವ್ಯವಸ್ಥಾಪಕ ನಿರ್ದೇಶಕಿ ಖುಷ್ಬು ಗೋಯಲ್, ಕೆಐಎಡಿಬಿ ಆಯುಕ್ತ ಡಾ.ಮಹೇಶ್, ಬೆಂಗಳೂರು ಜಲ ಮಂಡಳಿಯ ಅಧ್ಯಕ್ಷ ರಾಮಮನೋಹರ್ ಪ್ರಸಾದ್, ಐಟಿ ನಿರ್ದೇಶಕ ರಾಹುಲ್ ಸಂಕನೂರು ಭಾಗವಹಿಸಿದ್ದರು.

**ಹೊಸಕೋಟೆಯ ಸಮೀಪ ಡೇಟಾ ಪಾರ್ಕ್**

**ಬೆಂಗಳೂರಿನಲ್ಲಿ ಹೊಸಕೋಟೆಯ ಸಮೀಪ 500 ಮೆಗಾವ್ಯಾಟ್ ಸಾಮರ್ಥ್ಯದ ಸುಸ್ಥಿರ ಡೇಟಾ ಕೇಂದ್ರ ಪಾರ್ಕ್ ಸ್ಥಾಪಿಸಲಾಗುವುದು. ಪಾವಗಡದಿಂದ ಪೂರೈಕೆಯಾಗುವ ಸೌರ ವಿದ್ಯುತ್ ನೇರವಾಗಿ ಇಲ್ಲಿಗೆ ತಲುಪುತ್ತದೆ. ಜತೆಗೆ ಬೆಂಗಳೂರು ಜಲ ಮಂಡಳಿಯು ಎರಡು ಹಂತಗಳಲ್ಲಿ ಸಂಸ್ಕರಿಸಿದ 60 ಎಂ.ಎಲ್.ಡಿ ನೀರು ಪೂರೈಕೆಗೆ ತೊಂದರೆ ಇಲ್ಲ ಎಂದು ತಿಳಿಸಿದೆ.**

## ಮೇ 1ರಿಂದ ಮೋಟಾರು ವಾಹನ ತಿದ್ದುಪಡಿ ಬಿಲ್ ಜಾರಿ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಸರ್ಕಾರವು ಮೋಟಾರು ವಾಹನಗಳ ತೆರಿಗೆ ದರವನ್ನು ಕಡಿತಗೊಳಿಸಿದ್ದು, ಪರಿಷ್ಕೃತ ತೆರಿಗೆ ವಿಧೇಯಕವೂ ನಾಳೆ ಮೇ 1ರಿಂದ ಜಾರಿಗೆ ಬರಲಿದೆ. ಸಾರಿಗೆ ಇಲಾಖೆಗೆ ಈಗಾಗಲೇ ಸರ್ಕಾರ ಸೂಚನೆ ನೀಡಿದ್ದು, ಮೇ 1ರಿಂದ ಹೊಸ ದರಗಳು ಜಾರಿಯಾಗಲಿವೆ. ಈ ಕ್ರಮದಿಂದಾಗಿ ರಾಜ್ಯದಲ್ಲಿ ವಾಹನಗಳ ನೋಂದಣಿ ಪ್ರಕ್ರಿಯೆ ಚುರುಕುಗೊಳ್ಳಲಿದ್ದು, ವಾಹನ ಮಾಲೀಕರಿಗೆ ಆರ್ಥಿಕ ಹೊರೆ ತಗ್ಗಲಿದೆ ಎಂದು ನಿರೀಕ್ಷಿಸಲಾಗಿದೆ.

12ಕ್ಕಿಂತ ಹೆಚ್ಚು ಪ್ರಯಾಣಿಕರನ್ನು ಸಾಗಿಸುವ ಇಂತಹ ವಾಹನಗಳ ಪ್ರತಿ ಆಸನಕ್ಕೆ ವಿಧಿಸಲಾಗುತ್ತಿದ್ದ ತೆರಿಗೆಯಲ್ಲಿ 1,000 ರೂ. ಕಡಿತ ಮಾಡಲಾಗಿದೆ. ಈ ಹಿಂದೆ ಪ್ರತಿ ಸೀಟಿಗೆ 3,500 ಇದ್ದ ತೆರಿಗೆಯು ಈಗ 2,500 ರೂ. ಕ್ಕೆ ಇಳಿಕೆಯಾಗಲಿದೆ.ಅದೇ ರೀತಿ 4,000 ರೂ. ಇದ್ದ ತೆರಿಗೆ ದರವು 3,000 ರೂ. ಕ್ಕೆ ಇಳಿಕೆಯಾಗಲಿದೆ. ರಾಜ್ಯದಲ್ಲಿ ಹೆಚ್ಚಿನ ತೆರಿಗೆಯ ಹೊರೆಯಿಂದಾಗಿ ವಾಹನ ಮಾಲೀಕರು ತಮ್ಮ ವಾಹನಗಳನ್ನು ನೆರೆ ರಾಜ್ಯಗಳಲ್ಲಿ ನೋಂದಣಿ ಮಾಡಿಸುತ್ತಿದ್ದರು. ತಡೆಗಟ್ಟಲು ಮತ್ತು ಕರ್ನಾಟಕದಲ್ಲೇ ವಾಹನಗಳ ನೋಂದಣಿ ನಡೆಯುವಂತೆ ಮಾಡಲು ಸರ್ಕಾರವು ಕಳೆದ ವಿಧಾನಮಂಡಲ ಅಧಿವೇಶನದಲ್ಲಿ ಈ ತಿದ್ದುಪಡಿಯ ವಿಧೇಯಕವನ್ನು ಮಂಡಿಸಿತ್ತು.

## ವಾಹನ ಸವಾರರೇ ಬೆಂಗಳೂರಿನ ರಸ್ತೆಗಳಲ್ಲಿ ಸಂಚರಿಸುವ ಮುನ್ನ ಎಚ್ಚರ

• ಉದಯವಾಹಿನಿ, ಬೆಂಗಳೂರು

ಬಿಸಿಲಿನಿಂದ ಬೆಂದು ಹೋಗಿದ್ದ ಬೆಂಗಳೂರು ಜನತೆಗೆ ಕಳೆದ ರಾತ್ರಿ ವರುಣ ತಂಪೆರೆದಿದ್ದಾನೆ. ಆದರೆ ಭಾರೀ ಮಳೆಗೆ ಹಲವು ಅನಾಹುತಗಳು ಸಂಭವಿಸಿದೆ. ಭಾರೀ ಗಾಳಿ ಮತ್ತು ಗುಡುಗಿನ ಸಹಿತ ಸುರಿದ ಆಲಿಕಲ್ಲು ಮಳೆಗೆ ಪ್ರತ್ಯೇಕ ಘಟನೆಗಳಲ್ಲಿ ಒಟ್ಟು 10 ಜನರು ಬಲಿಯಾಗಿದ್ದಾರೆ. ನಗರದ ಹಲವೆಡೆ ಮರಗಳು ಧರೆಗುರುಳಿದ್ದರೆ, ಅಂಡರ್ ಪಾಸ್ ಸೇರಿದಂತೆ ತಗ್ಗು ಪ್ರದೇಶಗಳಲ್ಲಿ ನೀರು ನಿಂತು ಸಂಚಾರ ಸಮಸ್ಯೆ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

ಲೌರಿ ಅಂಡರ್‌ಪಾಸ್‌ನಲ್ಲಿ ಮಳೆ ನೀರು ನಿಂತಿರುವುದರಿಂದ ಸುಗಮ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿದ್ದು, ಮಹದೇವಪುರ ಕಡೆಗೆ ನಿಧಾನಗತಿಯ ಸಂಚಾರವಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ. ಕೆ.ಆರ್.ಸರ್ಕಲ್ ಅಂಡರ್ ಪಾಸ್‌ಕೂಡ ಜಲಾವೃತವಾಗಿದ್ದು, ಬ್ಯಾರಿಕೇಡ್ ಹಾಕಿ ಪೊಲೀಸರು ಅಂಡರ್ ಪಾಸ್ ಬಂದ್ ಮಾಡಿದ್ದಾರೆ.

## ಶಾಲಿನಿ ರಜನೀಶ್, ಮಹೇಶ್ವರರಾವ್ ವಿರುದ್ಧ ಕೇಸ್: ಗುಡುಗಿದ ಲೋಕಾಯುಕ್ತ ಏಳು ಮಂದಿಯ ಬಲಿತೆಗೆದುಕೊಂಡ ಘಟನೆ

• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿಯನ್ನು ಬೆಚ್ಚಿಬೀಳಿಸಿದ ಬೌರಿಂಗ್ ಆಸ್ಪತ್ರೆಯ ತಡೆಗೋಡೆ ಕುಸಿತದ ಭೀಕರ ದುರಂತವನ್ನು ಲೋಕಾಯುಕ್ತ ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಏಳು ಮಂದಿಯ ಬಲಿತೆಗೆದುಕೊಂಡ ಈ ಘಟನೆಗೆ ಸಂಬಂಧಿಸಿದಂತೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದೆ.


ಲೋಕಾಯುಕ್ತ ನ್ಯಾ. ಬಿ.ಎಸ್. ಪಾಟೀಲ್ ಮತ್ತು ಉಪಲೋಕಾಯುಕ್ತರು ದುರಂತ ಸಂಭವಿಸಿದ ಬೌರಿಂಗ್ ಆಸ್ಪತ್ರೆಯ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳ ವೀಕ್ಷಣೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಲೋಕಾಯುಕ್ತರು, ಅಧಿಕಾರಿಗಳ ಬೇಜವಾಬ್ದಾರಿತನದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಇದು ಅಕ್ಷರಶಃ ನಿರ್ಲಕ್ಷ್ಯದ ಪರಮಾವಧಿ. ಸಾರ್ವಜನಿಕರು ಓಡಾಡುವ ಜಾಗದಲ್ಲಿ ಇಂತಹ ಘಟನೆ ನಡೆಯಬಾರದಿತ್ತು.

ಜಿಬಿಎ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಸ್ಪಷ್ಟ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ ಎಂದು ನ್ಯಾ. ಬಿ.ಎಸ್. ಪಾಟೀಲ್ ಸಿಟ್ಟು ಹೊರಹಾಕಿದರು. ಈ ದುರಂತಕ್ಕೆ ಸಂಬಂಧಿಸಿದಂತೆ ಕೇವಲ ಕೆಳಹಂತದ ಸಿಬ್ಬಂದಿಯನ್ನಲ್ಲ, ಬದಲಿಗೆ ಆಡಳಿತ ಯಂತ್ರದ ಉನ್ನತ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲು ಲೋಕಾಯುಕ್ತ ನಿರ್ಧರಿಸಿದೆ.

## ಡಿಕೆ ಶಿವಕುಮಾರ್ ದೆಹಲಿಗೆ ತೆರಳಿ ಹೈಕಮಾಂಡ್ ಬಳಿ ಚರ್ಚಿಸಿ ಮೇ 10 ರ ಡೆಡ್‌ಲೈನ್ ಕೊಟ್ಟು ವಾಪಾಸಾದ ಬೆನ್ನಲ್ಲೇ ಸಿಎಂ ಸಿದ್ದರಾಮಯ್ಯ ಆಪ್ತರು ದೆಹಲಿಗೆ ತೆರಳಿದ್ದ ಡಿಕೆಶಿ ಬೇಡಿಕೆಗಳಿಗೆ ಚೆಕ್‌ಮೇಟ್ ಕೊಡಲು ದಲಿತ ಸಿಎಂ ಅಸ್ತ್ರಗಳನ್ನು ಪ್ರಯೋಗಿಸಿದ್ದಾರೆ. ಸಿಎಂ ಬಳಗದಿಂದ ದೆಹಲಿಯಲ್ಲಾದ ಬೆಳವಣಿಗೆಯಾಗಿದೆ.

### ಪರ್ಯಾಯ ಚಿಂತನೆಗೆ ಜೀವ

**ನಾಯಕತ್ವ ಬದಲಾವಣೆ ಅನಿವಾರ್ಯವಾದರೆ, ಪಕ್ಷದ ಸರಕಾರದ ಸ್ಥಿರತೆ ಮತ್ತು ಒಗ್ಗಟ್ಟು ಕಾಯ್ದುಕೊಂಡು ಹೋಗುವ ದೃಷ್ಟಿಯಿಂದ ತಾವೇ ನಾಯಕತ್ವ' ವಹಿಸಿ ಎಂದು ಮಹದೇವಪ್ಪ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸಲಹೆ ನೀಡುವ ಮೂಲಕ ಪರ್ಯಾಯ ಸಾಧ್ಯತೆಗಳ ಬಗ್ಗೆ ವರಿಷ್ಠರನ್ನು ಚಿಂತನೆಗೆ ಹಚ್ಚುವ ಪ್ರಯತ್ನ ಮಾಡಿದ್ದಾರೆ ಎನ್ನಲಾಗಿದೆ. ಜೂನ್‌ನಲ್ಲಿ ರಾಜ್ಯಸಭೆ ಅವಧಿಯೂ ಮುಗಿಯುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಮರಳಿದರೆ ಎಲ್ಲರಿಗೂ ಖುಷಿಯಾಗುತ್ತದೆ ಮತ್ತು ದಲಿತ ಸಮುದಾಯದ ಕೈಗೂಡಿದಂತಾಗುತ್ತದೆ ಎಂಬ ಪ್ರಸ್ತಾಪವನ್ನು ಮುಂದಿಟ್ಟಿದ್ದಾರೆ .**



# ಮತ್ತೆ ದಲಿತ ಸಿಎಂ ಅಸ್ತ್ರ

**ಡಿಕೆಶಿ ಡೆಡ್‌ಲೈನ್‌ಗೆ ಸಿಎಂ ಆಪ್ತರ ಚೆಕ್‌ಮೇಟ್**

**ನೀವೇ ಸಿಎಂ ಆಗಿಬಿಡಿ ಎಂದು ಎಐಸಿಸಿ ಅಧ್ಯಕ್ಷರಿಗೂ ಪ್ರಸ್ತಾವ**

**ಡಿಕೆಶಿ ಹೊಸ ತಂತ್ರ**

**ದಲಿತ ಸಮಾವೇಶ, ಅಹಿಂದ ಸಮಾವೇಶ ಯಾವುದೇ ಆಗುವುದಾದರೂ ಅದು ಪಕ್ಷದ ವೇದಿಕೆಯಲ್ಲೇ ಆಗಬೇಕು. ವ್ಯಕ್ತಿ ಕೇಂದ್ರಿತವಾಗಿ ಇಂತಹ ಸಮಾವೇಶಗಳು ನಡೆಯಲು ಅವಕಾಶ ಕೊಡಬಾರದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರೂ ಚೆಕ್‌ಮೇಟ್ ಇಟ್ಟಿದ್ದಾರೆ. ಈ ಬೆಳವಣಿಗೆಗಳು ಆಡಳಿತಾರೂಢ ಕಾಂಗ್ರೆಸ್‌ನಲ್ಲಿನ ರಾಜಕೀಯ ಬೆಳವಣಿಗೆಗಳನ್ನು ಬಹು ಆಯಾಮಗಳತ್ತ ಕೊಂಡೊಯ್ಯುತ್ತಿದ್ದು, ಇದೇ ಮೇ ತಿಂಗಳಲ್ಲಿ ಈ ಚಟುವಟಿಕೆಗಳು ಜೋರಾಗುವ ಸುಳಿವು ದೊರಕಿದೆ.**

• ಉದಯವಾಹಿನಿ, ಬೆಂಗಳೂರು

ನಾಯಕತ್ವ ಬದಲಾವಣೆ ವಿಚಾರದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಡೆಡ್‌ಲೈನ್‌ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಸಚಿವರು ಚೆಕ್ ಮೇಟ್ ನೀಡಲು ಮುಂದಾಗಿದ್ದು, ದಲಿತ ಸಿಎಂ ಹಕ್ಕೊತ್ತಾಯವನ್ನು ಮುನ್ನೆಲೆಗೆ ತಂದಿದ್ದಾರೆ. ಸಂಸದ ಸುನೀಲ್ ಬೋಸ್ ದಿಲ್ಲಿ ಫ್ಲಾಟ್‌ನಲ್ಲಿ ನಡೆದ ಮಹತ್ವದ ಮಾತುಕತೆ ಪವರ್ ಶೇರಿಂಗ್ ಪಾಲಿಟಿಕ್ಸ್‌ಗೆ ಹೊಸ ತಿರುವು ನೀಡುವ ನಿರೀಕ್ಷೆಯಿದೆ. ದಲಿತ ಸಿಎಂ ಕೂಗು ಈ ಹಿಂದೆಯೂ ಕೇಳಿ ಬಂದಿತ್ತು. ನಾಯಕತ್ವ ಬದಲಾವಣೆ ಚರ್ಚೆಯಾದಾಗ ದಲಿತರು ತಮ್ಮ ಹಕ್ಕೊತ್ತಾಯ ಮಂಡಿಸುತ್ತಿದ್ದಾರೆ. ಈಗ ಪುನಃ ಈ ವಿಚಾರ ಮುನ್ನೆಲೆಗೆ ಬಂದಿದೆ. ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಕೆ.ಎಚ್.ಮುನಿಯಪ್ಪ ಹಾಗೂ ಪಕ್ಷದ ಹಿರಿಯ ಮುಖಂಡ ಬಿ.ಕೆ.ಹರಿಪ್ರಸಾದ್ ಮತ್ತಿತರರು ಭಾಗವಹಿಸಿದ್ದ ಸಭೆಯಲ್ಲಿ ಒಳ ಮೀಸಲು ಸಾಧನೆ ಸಂಭ್ರಮ ಸಮಾವೇಶದ ಮೂಲಕ ದಲಿತರ ಒಗ್ಗಟ್ಟು ಪ್ರದರ್ಶನಕ್ಕೂ ಚಿಂತನೆ ನಡೆದಿದೆ. ಈ ಸಭೆಗೆ ತೆರಳಬೇಕಿದ್ದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರಿಗೆ ಕಡೆ ಕ್ಷಣದಲ್ಲಿಹೋಗಲು ಸಾಧ್ಯವಾಗಲಿಲ್ಲ. ಇದರ ನಡುವೆ ನಾಯಕತ್ವ ಬದಲಾವಣೆ ತೀರ್ಮಾನ ಅನಿವಾರ್ಯವಾದರೆ, ಆ ಅವಕಾಶ ದಲಿತರಿಗೆ ಬೇಕು ಎಂಬ ಪ್ರತ್ಯಸ್ತ್ರ ಪ್ರಯೋಗಕ್ಕೆ ತಯಾರಿಯಾಗಿದೆ ಎಂದು ತಿಳಿದು ಬಂದಿದೆ.

ಸರಕಾರಕ್ಕೆ ಮೂರು ವರ್ಷ ತುಂಬುವ ಮುನ್ನ ಮೇ 10 ರೊಳಗೆ ತಮ್ಮ ನಾಯಕತ್ವದ ಅವಕಾಶದ ಬಗ್ಗೆ ತೀರ್ಮಾನ ಹೇಳಿ ಎಂಬ ಡಿಸಿಎಂ ಡಿ.ಕೆ.ಶಿವಕುಮಾರ್ ಬಿಗಿಪಟ್ಟಿನ ಬೆನ್ನಲ್ಲೇ ದಿಲ್ಲಿಗೆ ತೆರಳಿದ್ದ ಸತೀಶ್ ಜಾರಕಿಹೊಳಿ, ಎಚ್.ಸಿ.ಮಹದೇವಪ್ಪ ಮತ್ತಿತರರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿಯಾಗಿದ್ದರು. ಬಳಿಕ ಕೆ.ಎಚ್.ಮುನಿಯಪ್ಪ ಅವರೂ ದಿಲ್ಲಿತಲುಪಿದ್ದು, ಕೆ.ಸಿ.ವೇಣುಗೋಪಾಲ್ ಅವರನ್ನೂ ಭೇಟಿಯಾದರು. ನಾಯಕತ್ವ ಬದಲಾವಣೆ ವಿಚಾರದಲ್ಲಿ ಮುಂದಡಿಯಿಡುವ ಮುನ್ನ, ನಂತರದ ಪರಿಣಾಮಗಳ ಅವಲೋಕನಕ್ಕೂ ವರಿಷ್ಠರಿಗೆ ಸಲಹೆ ಮಾಡಲಾಗಿದೆ ಎಂದು ಗೊತ್ತಾಗಿದೆ.

**1** ಸುನೀಲ್ ಬೋಸ್ ಫ್ಲಾಟ್‌ನಲ್ಲಿ ಸಿಎಂ ಆಪ್ತರ ತಂತ್ರಗಾರಿಕೆ

**2** ದಲಿತ ಸಮಾವೇಶಕ್ಕೆ ಅನುಮತಿ ಕೇಳಿದ ಮಹದೇವಪ್ಪ

**3** ಅಹಿಂದ ಸಮಾವೇಶ ಸರಣಿಗೆ ಜಾರಕಿಹೊಳಿ ಪ್ರಸ್ತಾಪ



### ದಲಿತ ಸಮಾವೇಶಕ್ಕೆ ಒಪ್ಪಿಗೆ ಕೋರಿಕೆ

**2023ರ ಚುನಾವಣಾ ಪೂರ್ವದಲ್ಲಿ ಚಿತ್ರದುರ್ಗದಲ್ಲಿ ದಲಿತ ಸಮಾವೇಶದಲ್ಲಿ ನೀಡಿದ್ದ ಭರವಸೆಯಂತೆ ಪರಿಶಿಷ್ಟ ಜಾತಿ ಒಳಮೀಸಲು ಜಾರಿ ಮಾಡಲಾಗಿದೆ. ಇದನ್ನು ಸಂಭ್ರಮಿಸಲು ರಾಜ್ಯದ ಮಧ್ಯಭಾಗದಲ್ಲಿ ಬೃಹತ್ ದಲಿತ ಸಮಾವೇಶ ನಡೆಸಬೇಕು ಮತ್ತು ಇದರಿಂದ ಪಕ್ಷದ ಮತಬ್ಯಾಂಕ್ ಗಟ್ಟಿಗೊಳಿಸಲು ಸಾಧ್ಯವಾಗುತ್ತದೆ ಎಂಬ ಪ್ರಸ್ತಾಪವನ್ನು ದಲಿತ ಸಚಿವರು ವರಿಷ್ಠರ ಮುಂದಿಟ್ಟಿದ್ದಾರೆ.**


**ಒಳ ಮೀಸಲು ಜಾರಿ ಬಳಿಕ ದಲಿತ ಸಮುದಾಯ ಒಟ್ಟುಗೂಡಿದ್ದು, ಈ ಸಮಾವೇಶದ ಮೂಲಕ ಸಮುದಾಯಕ್ಕೆ ಮುಖ್ಯಮಂತ್ರಿ ಹುದ್ದೆಯ ಹಕ್ಕೊತ್ತಾಯ ಮಂಡನೆ ಲೆಕ್ಕಾಚಾರ ನಡೆದಿದೆ. ಚಿತ್ರದುರ್ಗದಲ್ಲಿ ಬಿ.ಎಸ್.ಯಡಿಯೂರಪ್ಪ ಅವರ 50ರ ಸಾರ್ವಜನಿಕ ಬದುಕಿನ ಸಾರ್ಥಕ ಸಂಭ್ರಮ ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಸಮಾವೇಶವನ್ನು ದಾವಣಗೆರೆಯಲ್ಲಿ ನಡೆಸಬಹುದು ಎಂಬ ಪ್ರಸ್ತಾಪವಿದೆ.**

### ಅಹಿಂದಕ್ಕೆ ಜಾರಕಿಹೊಳಿ ಪಟ್ಟು

**ದಲಿತ ಸಮಾವೇಶದ ಪ್ರಸ್ತಾಪದ ಮಧ್ಯೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಅಹಿಂದ ಅಸ್ತ್ರಪ್ರಯೋಗಿಸಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಗಾದಿ ಮೇಲೆ ಕಣ್ಣಿಟ್ಟು 2028ರ ಚುನಾವಣೆಯಲ್ಲಿ ಪಕ್ಷವನ್ನು ಮುನ್ನಡೆಸಲು ಬಯಸಿರುವ ಜಾರಕಿಹೊಳಿ ಹುಬ್ಬಳ್ಳಿಯಲ್ಲಿ ಅಹಿಂದ' ಸಮಾವೇಶದ ಪ್ರಸ್ತಾಪವನ್ನು ಎಐಸಿಸಿ ವರಿಷ್ಠರ ಮುಂದಿಟ್ಟಿದ್ದಾರೆ.**

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜಕೀಯ ಔನ್ನತ್ಯ ತಂದುಕೊಟ್ಟ ಅಹಿಂದಕ್ಕೆ ನೈಜ ಉತ್ತರಾಧಿಕಾರಿಯಾಗಲು ಜಾರಕಿಹೊಳಿ ಬಯಸಿದ್ದು, ಹುಬ್ಬಳ್ಳಿಯಲ್ಲಿ ರಾಜ್ಯ ಮಟ್ಟದ ಅಹಿಂದ ಸಮಾವೇಶ ನಡೆಸುವುದು ಬಳಿಕ ವಿಭಾಗವಾರು ಈ ಸಮಾವೇಶಗಳ ಸರಣಿ ನಡೆಸಲು ಬಯಸಿದ್ದಾರೆ.**





### ಖರ್ಗೆ ಸಿಎಂ ಆದ್ರೆ ಖುಷಿ


ಎಐಸಿಸಿ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಮಂತ್ರಿಯಾದರೆ ಸಂತೋಷ ಎಂಬ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಮಲ್ಲಿಕಾರ್ಜುನಖರ್ಗೆ ಅವರ ಸಮಕಾಲಿನರು ಮುಖ್ಯಮಂತ್ರಿ ಆಗಿರುವಾಗ ಖರ್ಗೆ ಮುಖ್ಯಮಂತ್ರಿಯಾದರೆ ತಪ್ಪೇನು ಎಂದು ಪ್ರಶ್ನಿಸಿದ್ದಾರೆ. ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಲ್ಲಿಕಾಜುನಖರ್ಗೆ ಅವರ ಸಮಕಾಲೀನರಾದ ಆರ್.ಗುಂಡೂರಾವ್, ವೀರಪ್ಪ ಮೊಯ್ಲಿ ಇವರೆಲ್ಲಾ ಮುಖ್ಯಮಂತ್ರಿ ಆದರು ಖರ್ಗೆ ಅವರು ಆಗಲಿ ಎಂಬುದು ತಮ್ಮ ಆಶಯ ಹಾಗಾಗಿ ನಾನು ಖರ್ಗೆ ಮುಖ್ಯಮಂತ್ರಿ ಆದರೆ ಸಂತೋಷ ಎಂದರು

## ಉಪ ನೋಂದಣಾಧಿಕಾರಿಗಳ ವರ್ಗಾವಣೆಗೆ ಪಾರದರ್ಶಕ, ಪ್ರಭಾವವಿಲ್ಲದ, ಕೌನ್ಸೆಲಿಂಗ್ ಆಧಾರಿತ ವ್ಯವಸ್ಥೆ ಜಾರಿ: ಸಚಿವ ಕೃಷ್ಣ ಭೈರೇಗೌಡ

• ಉದಯವಾಹಿನಿ, ಬೆಂಗಳೂರು

ಎಲ್ಲಾ ಉಪ-ನೋಂದಣಾಧಿಕಾರಿಗಳ ವರ್ಗಾವಣೆಗಾಗಿ ಪಾರದರ್ಶಕ, ಪ್ರಭಾವವಿಲ್ಲದ, ಯಾರದ್ದೂ ಹಸ್ತಕ್ಷೇಪವಿಲ್ಲದ ಕೌನ್ಸೆಲಿಂಗ್ ಆಧಾರಿತ ವರ್ಗಾವಣಾ ವ್ಯವಸ್ಥೆಯನ್ನು ಜಾರಿಗೊಳಿಸಿದ್ದೇವೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದ್ದಾರೆ.

ವರ್ಗಾವಣೆ ಸಂಬಂಧ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಉಪ-ನೋಂದಣಾಧಿಕಾರಿಗಳ ವರ್ಗಾವಣೆಯನ್ನು ಹಲವು ವರ್ಷಗಳಿಂದ ತೀವ್ರ ಅನುಮಾನದಿಂದ ನೋಡಲಾಗುತ್ತಿತ್ತು. ಪ್ರಸ್ತುತ ನಮ್ಮ ಸರ್ಕಾರದಲ್ಲಿ ನಾವು ಮತ್ತು ನಗರ ನಿಗಮಗಳಲ್ಲಿನ ಎಲ್ಲಾ ಉಪ-ನೋಂದಣಾಧಿಕಾರಿಗಳ ವರ್ಗಾವಣೆಯನ್ನು ಪಾರದರ್ಶಕ, ಪ್ರಭಾವವಿಲ್ಲದ, ಯಾರದ್ದೂ ಹಸ್ತಕ್ಷೇಪವಿಲ್ಲದ ಕೌನ್ಸೆಲಿಂಗ್ ಆಧಾರಿತ ವರ್ಗಾವಣಾ ವ್ಯವಸ್ಥೆಯನ್ನು ಜಾರಿಗೊಳಿಸಿದ್ದೇವೆ



ಎಂದು ತಿಳಿಸಿದ್ದಾರೆ.

ಈ ಪ್ರಕ್ರಿಯೆಯನ್ನು ನಾವು 2 ವರ್ಷಗಳ ಹಿಂದೆಯೇ ಪ್ರಾರಂಭಿಸಿದ್ದೇವೆ.

ನಗರಗಳಲ್ಲಿ ಹೆಚ್ಚು ವರ್ಷ ಸೇವೆ ಸಲ್ಲಿಸಿದ 33 ಉಪ-ನೋಂದಣಿದಾರರನ್ನು 2024ರಲ್ಲಿ ಕಡ್ಡಾಯವಾಗಿ ವರ್ಗಾವಣೆ ಮಾಡಿ, ಕೌನ್ಸೆಲಿಂಗ್ ಮೂಲಕ ಪೋಸ್ಟಿಂಗ್ ನೀಡಲಾಗಿತ್ತು. ವರ್ಗಾವಣೆಯಿಂದ ಖಾಲಿಯಾಗಿದ್ದ ನಗರ ಭಾಗದ ಹುದ್ದೆಗಳನ್ನು ಮುಕ್ತ ಮತ್ತು ಪಾರದರ್ಶಕ ಕೌನ್ಸೆಲಿಂಗ್ ಪ್ರಕ್ರಿಯೆಯ ಮೂಲಕ ಭರ್ತಿ ಮಾಡಲಾಯಿತು. ಈ ಪಾರದರ್ಶಕ ಪ್ರಕ್ರಿಯೆಯಲ್ಲಿ ಒಟ್ಟು 90 ಅಧಿಕಾರಿಗಳನ್ನು ವರ್ಗಾಯಿಸಲಾಯಿತು ಎಂದಿದ್ದಾರೆ.

ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಅಧಿಕಾರಿಗಳಿಗೆ ಲಭ್ಯವಿರುವ ಖಾಲಿ ಹುದ್ದೆಗಳಿಗೆ ಪೋಸ್ಟಿಂಗ್ ಆಯ್ಕೆ ಮಾಡುವ ಆಯ್ಕೆಯನ್ನು ನೀಡಲಾಗುತ್ತದೆ.

ಆದ್ದರಿಂದ, ಪ್ರಭಾವ ಅಥವಾ ಹಸ್ತಕ್ಷೇಪ ಅಥವಾ ಯಾವುದೇ ಇತರ ಪರಿಗಣನೆಗಳಿಗೆ ಇಲ್ಲಿ ಯಾವುದೇ ಅವಕಾಶವಿರುವುದಿಲ್ಲ. 2024ರಲ್ಲಿ ನಾವು ಈ ವ್ಯವಸ್ಥೆಯನ್ನು ಒಮ್ಮೆ ಪ್ರಾಯೋಗಿಕವಾಗಿ ಪ್ರಾರಂಭಿಸಿದ್ದೆವು. ಈಗ, ನಾವು ಮುಂದಿನ ಪ್ರಮುಖ ಹೆಜ್ಜೆ ಇಡುತ್ತಿದ್ದೇವೆ. 2024ರಲ್ಲಿ ಒಂದು-ಬಾರಿ ಕ್ರಮವಾಗಿದ್ದನ್ನು ಈಗ ನಿಯಮಿತ ಮತ್ತು ಶಾಶ್ವತ ವ್ಯವಸ್ಥೆಯಾಗಿ ಮಾಡಲಾಗುತ್ತಿದೆ. ಇಂದಿನಿಂದ ಪ್ರತಿ ವರ್ಷ ಇದನ್ನು ಮಾಡಲಾಗುತ್ತದೆ ಎಂದು ಖಚಿತಪಡಿಸಿಕೊಳ್ಳಲು ನಾವು ತಿದ್ದುಪಡಿ ಅಥವಾ ನಿಯಮಗಳನ್ನು ತಂದಿದ್ದೇವೆ ಎಂದು ಹೇಳಿದ್ದಾರೆ.

## ಅತ್ಯಾಚಾರ ಸಂತ್ರಸ್ತೆ ಅಪಹರಣ ಪ್ರಕರಣ ರದ್ದು ಕೋರಿದ್ದ ಅರ್ಜಿ ಹಿಂಪಡೆದ ಹೆಚ್.ಡಿ.ರೇವಣ್ಣ

• ಉದಯವಾಹಿನಿ, ಬೆಂಗಳೂರು

ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತೆಯನ್ನು ಅಪಹರಿಸಿದ ಆರೋಪ ಸಂಬಂಧ ತಮ್ಮ ವಿರುದ್ಧದ ವಿಚಾರಣೆಯನ್ನು ಕಾನೂನು ರೀತಿ ಮುಂದುವರೆಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ ಶಾಸಕ ಹೆಚ್.ಡಿ. ರೇವಣ್ಣ ಅವರು ಪ್ರಕರಣ ರದ್ದು ಕೋರಿದ್ದ ಅರ್ಜಿಯನ್ನು ಹಿಂಪಡೆದುಕೊಂಡಿದ್ದಾರೆ.

ಪ್ರಕರಣ ಸಂಬಂಧ ಮೈಸೂರು ಜಿಲ್ಲೆಯ ಕೆ.ಆರ್. ಪೇಟೆ ಠಾಣೆಗೆ ಸಂತ್ರಸ್ತೆಯ ಪುತ್ರ ನೀಡಿದ್ದ ದೂರಿನ ತನಿಖೆ ನಡೆಸಿದ್ದ ಸಿಐಡಿ ಪೊಲೀಸರು, ತಮ್ಮ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಿರುವ ಆರೋಪಪಟ್ಟಿ ರದ್ದು ಕೋರಿ ಹೆಚ್.ಡಿ. ರೇವಣ್ಣ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನೀಲ್ ದತ್ ಯಾದವ್ ಅವರಿದ್ದ ನ್ಯಾಯಪೀಠ ಕಾನೂನು ರೀತಿಯಲ್ಲಿ ವಿಚಾರಣೆ ಮುಂದುವರೆಸುವಂತೆ ಆದೇಶ ನೀಡಿತ್ತು.

ಅರ್ಜಿಗೆ ಸಂಬಂಧಿಸಿದಂತೆ ವಿಚಾರಣೆ ವೇಳೆ ರೇವಣ್ಣ ಪರ ವಕೀಲರು, ವಾದ ಮಂಡನೆಗೆ ಕಾಲಾವಕಾಶ ನೀಡಬೇಕು ಎಂದು ಕೋರಿದ್ದರು.

## ಹಿಜಬ್, ಜನಿವಾರದಿಂದ ಸಮಸ್ಯೆಗೊಳಗಾದ ಪರೀಕ್ಷಾರ್ಥಿಗಳಿಗೆ ಸಿಇಟಿ ಮರುಪರೀಕ್ಷೆ

• ಉದಯವಾಹಿನಿ, ಬೆಂಗಳೂರು

ಸಿಇಟಿ ಪರೀಕ್ಷೆ ವೇಳೆ ವಸ್ತ್ರಸಂಹಿತೆಯಿಂದ ಸಮಸ್ಯೆಗೆ ಒಳಗಾದ ಪರೀಕ್ಷಾರ್ಥಿಗಳಿಗೆ ಮರು ಪರೀಕ್ಷೆ ನಡೆಸುವುದಾಗಿ ಉನ್ನತ ಶಿಕ್ಷಣ ಸಚಿವ ಎಂ.ಸಿ ಸುಧಾಕರ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾಲ್ವರು ಪರೀಕ್ಷಾರ್ಥಿಗಳಿಗೆ ಪರೀಕ್ಷಾ ಕೇಂದ್ರದಲ್ಲಿ ಸಮಸ್ಯೆ ಆಗಿದೆ. ಹಾಗಾಗಿ ಆ ವಿದ್ಯಾರ್ಥಿಗಳಿಗೆ ಮಾತ್ರ ಮರುಪರೀಕ್ಷೆ ನಡೆಸಲು ನಿರ್ಧಾರ ಮಾಡಲಾಗಿದೆ ಎಂದಿದ್ದಾರೆ.

ಜನಿವಾರ ಹಾಗೂ ಹಿಜಬ್‌ಗೆ ) ಸಂಬಂಧಿಸಿದಂತೆ ಬೆಂಗಳೂರು ಮತ್ತು ಚಿಕ್ಕಬಳ್ಳಾಪುರ ಎರಡು ಪರೀಕ್ಷಾ ಕೇಂದ್ರದಲ್ಲಿ ಗೊಂದಲ ಆಗಿತ್ತು. ಆದ್ದರಿಂದ ಪರೀಕ್ಷಾರ್ಥಿಗಳು ಮರು ಪರೀಕ್ಷೆಗೆ ಮನವಿ ಮಾಡಿದ್ದರು. ಹೀಗಾಗಿ ತೊಂದರೆಗೆ ಒಳಗಾದ ಪರೀಕ್ಷಾರ್ಥಿಗಳಿಗೆ ಮಾತ್ರ ಅನ್ವಯ ಆಗುವಂತೆ ಮರುಪರೀಕ್ಷೆ ನಡೆಸುತ್ತೇವೆ ಎಂದು ಸಚಿವರುತಿಳಿಸಿದ್ದಾರೆ.

ಅಂದಹಾಗೆ ಚಿಕ್ಕಬಳ್ಳಾಪುರ ನಗರ ಹೊರವಲಯದಲ್ಲಿರುವ ಬಿಜಿಎಸ್ ಸೈನ್ಸ್ ಆಕಾಡೆಮಿ ಕಾಲೇಜಿನಲ್ಲಿ ಘಟನೆ ನಡೆದಿದೆ. ಅಂದಹಾಗೆ ಏಪ್ರಿಲ್ 23 ರಂದು ನಡೆದ ಭೌತಶಾಸ್ತ್ರದ ಸಿಇಟಿ ಪರೀಕ್ಷೆಗೆ ಹಿಜಬ್ ಧರಿಸಿ ಹಾಜರಾಗಿದ್ದ ಅಭ್ಯರ್ಥಿಗೆ ಪರೀಕ್ಷೆ ಬರೆಯಲು ಅವಕಾಶ ನೀಡದೆ ವಾಪಸ್ ಕಳಿಸಿರುವುದಾಗಿ ಪರೀಕ್ಷಾರ್ಥಿಯ ತಂದೆ ಕೆಇಎಗೆ ಅನ್ ಲೈನ್ ಈ ಮೇಲ್ ಮೂಲಕ ದೂರು ನೀಡಿದ್ದಾರೆ. ಪರೀಕ್ಷಾರ್ಥಿಯ ತಂದೆಯ ದೂರು




ಆಧರಿಸಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ತನಿಖೆ ನಡೆಸಿ ವರದಿ ನೀಡಲು ಸೂಚನೆ ನೀಡಿತ್ತು.

ಹೀಗಾಗಿ ಚಿಕ್ಕಬಳ್ಳಾಪುರ ಜಿಲ್ಲಾಡಳಿತ ಪರೀಕ್ಷಾರ್ಥಿ ಹಾಗೂ ದೂರುದಾರ ತಂದೆಯನ್ನ ಕರೆಸಿ ವಿಚಾರಣೆ ನಡೆಸಿ ಹೇಳಿಕೆ ಪಡೆಯಲಾಗಿದೆ. ವರದಿಯನ್ನ ಕೆಇಎಗೆ ಸಲ್ಲಿಸಲಾಗುತ್ತಿದೆ. ಈ ಬಗ್ಗೆ ಚಿಕ್ಕಬಳ್ಳಾಪುರದಲ್ಲಿ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ ಎಂ.ಸಿ ಸುಧಾಕರ್, ಈ ಬಗ್ಗೆ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿಗಳು ವರದಿ ನೀಡಿದ್ದಾರೆ. ಕಳೆದ ವರ್ಷವೂ ಇಂತಹ ಘಟನೆಗಳು ನಡೆದಿತ್ತು. ಹೀಗಾಗಿ ಈ ಬಾರಿ ವಸ್ತ್ರಸಂಹಿತೆಗೆ ಆಯಾ ಕಾಲೇಜಿನವರಿಗೆ ಜವಾಬ್ದಾರಿ ನೀಡಲಾಗಿತ್ತು. ಆದ್ರೂ, ಈ ರೀತಿಯ ಪ್ರಕರಣಗಳು ಈ ವರ್ಷವೂ ಮರುಕಳಿಸಿವೆ. ಈ ಬಗ್ಗೆ ಗಮನಕ್ಕೆ ಬಂದ ಕೂಡಲೇ ಗಂಭೀರವಾಗಿ ಪರಗಣಿಸಿದ್ದು, ಬೆಂಗಳೂರಿನಲ್ಲಿ ಸೆಂಟರನ್ನೇ ಕ್ಯಾನ್ಸಲ್ ಮಾಡಲು ಜಿಲ್ಲಾಧಿಕಾರಿ ಶಿಫಾರಸ್ಸು ಮಾಡಿದ್ದಾರೆ. ಚಿಕ್ಕಬಳ್ಳಾಪುರದಲ್ಲಿ ಸರ್ಕಾರವೇ ಕ್ರಮ ಕೈಗೊಳ್ಳುವಂತೆ ವರದಿಯಲ್ಲಿ ಉಲ್ಲೇಖಿಸಿದ್ದು ಈ

### ಗ್ರೇಸ್ ಅಂಕ ಸಮಂಜಸವಲ್ಲ

**ಪರೀಕ್ಷೆ ಗೊಂದಲಕ್ಕೆ ಒಳಗಾದ ಪರೀಕ್ಷಾರ್ಥಿಗಳಿಗೆ ಗ್ರೇಸ್ ಅಂಕ ಕೊಡೋದು ಸಮಂಜಸ ಅಲ್ಲ. ಹಾಗಾಗಿ ಮರು ಪರೀಕ್ಷೆ ಮಾಡುತ್ತೇವೆ, ಈ ಬಗ್ಗೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ. ಕಳೆದ ಬಾರಿ ಕೂಡ ಗೊಂದಲ ಆಗಿತ್ತು. ಈ ಬಾರಿ ಮರು ಪರೀಕ್ಷೆ ಮಾಡೋದು ಸೂಕ್ತ ಅಂತ ನಿರ್ಧಾರ ಮಾಡಲಾಗಿದೆ ಎಂದಿದ್ದಾರೆ ಸಚಿವರು. ಸಿಇಟಿ ಪರೀಕ್ಷೆ ವೇಳೆ ಜನಿವಾರಕ್ಕೆ ಕತ್ತರಿ ಪ್ರಕರಣ ಬಹಳಷ್ಟು ವಿವಾದ ಪಡೆದುಕೊಂಡ ಬೆನ್ನಲ್ಲೇ ಹಿಜಬ್ ಧರಿಸಿ ಸಿಇಟಿ ಪರೀಕ್ಷೆಗೆ ಆಗಮಿಸಿದ್ದ ಪರೀಕ್ಷಾರ್ಥಿಗೆ ಸಿಇಟಿ ಪರೀಕ್ಷೆ ಬರೆಯಲು ನಿರಾಕರಣೆ ಮಾಡಿರುವ ಆರೋಪ ಪ್ರಕರಣ ಚಿಕ್ಕಬಳ್ಳಾಪುರದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.**

## 25 ವರ್ಷಗಳ ಬಳಿಕ ಬೆಂಗಳೂರಲ್ಲಿ ದಾಖಲೆಯ ಮಳೆ 170 ಮರಗಳು ಧರಾಶಾಹಿ, 68 ಕಡೆ ಜಲಾವೃತ

• ಉದಯವಾಹಿನಿ,ಬೆಂಗಳೂರು

ಅಬ್ಬಬ್ಬಾ.. ಸುರಿದ ಭಾರೀ ಮಳೆಗೆ ನಡೆದ ಅವಾಂತರಗಳು ಒಂದಾ.. ಎರಡಾ..? ಬೇಸಿಗೆ ಮಳೆಗೆ ಇಡೀ ಸಿಲಿಕಾನ್ ಸಿಟಿ ತೊಯ್ದು ತೊಪ್ಪೆಯಾಗಿದೆ. ಬೆಂಗಳೂರಿನ ಹಲವೆಡೆ ಮಳೆಯಿಂದಾಗಿ ಅವಾಂತರವೇ ಸೃಷ್ಟಿಯಾಗಿದೆ. ವಿಧಾನಸೌಧ, ಪೊಲೀಸ್ ಕಮಿಷನರ್ ಕಚೇರಿ, ಇನ್‌ಫೆಂಟ್ರಿ ರೋಡ್, ಲ್ಯಾವೆಲ್ಲೆ ರೋಡ್, ಶಿವಾಜಿನಗರ, ರಿಚ್‌ಮಂಡ್ ಟೌನ್, ಅವೆನ್ಯೂ ರೋಡ್ ಸುತ್ತಮುತ್ತ ಬಿರುಗಾಳಿ ಸಹಿತ ಆಲಿಕಲ್ಲು ಮಳೆಯಾಗಿದೆ. ಸುಮ್ಮನಹಳ್ಳಿ ಫ್ಲೈ ಓವರ್ ಮೇಲೆ ಸರಣಿ ಅಪಘಾತವಾಗಿದೆ.

ಕಾರು-ಲಾರಿ ಸೇರಿದಂತೆ 7-8 ವಾಹನಗಳ ಮಧ್ಯೆ ಅಪಘಾತವಾಗಿದ್ದು, ಹಲವಾರು ಗಂಭೀರ ಗಾಯಗೊಂಡು ಆಸ್ಪತ್ರೆಗೆ ದಾಖಲಿಸಲಾಗಿದೆ. ಇನ್ನೂ, ಗಾಲ್ಫ್ ರಸ್ತೆಯಲ್ಲಿ ದ್ವಿಚಕ್ರ ವಾಹನಗಳು ಮುಳುಗಡೆಯಾದ್ರೆ, ಮಲ್ಲೇಶ್ವರಂ, ಯಶವಂತಪುರದ ಬೃಹದಾಕಾರದ ಮರಗಳು ಧರೆಗುರುಳಿದ್ದು, ಕೆಲವೆಡೆ ಕಾರುಗಳೂ ಕೂಡ ಮುಳಗಡೆಯಾದ ದೃಶ್ಯಗಳು ಕಂಡುಬಂದವು. ವಿಧಾನಸೌಧದಲ್ಲಿ ವಿಪಕ್ಷ ನಾಯಕ ಆರ್ ಅಶೋಕ್ ಕೊಠಡಿಗೆ ಮಳೆ ನೀರು ನುಗ್ಗಿದೆ. ಕಿಟಕಿಯಿಂದ ಮಳೆನೀರು ನುಗ್ಗಿ ನೆಲದ ಮೇಲೆ ಹರಿದಿದೆ. ಮಳೆ ನೀರಲ್ಲಿ ದಿನಪತ್ರಿಕೆಗಳು ತೇಲಿವೆ. ಶಾಂತಿನಗರದ ರಸ್ತೆಯಲ್ಲಿ ನೀರು ನಿಂತು ವಾಹನ ಸವಾರರು ಪರದಾಡಿದ್ದಾರೆ.

ಹೌದು ಬೆಂಗಳೂರಿನಲ್ಲಿ ರಣರಕ್ಕಸ ಮಳೆಗೆ ಭಾರೀ ಅವಾಂತರ ಸೃಷ್ಟಿಯಾಗಿದೆ. ಬಿನ್ನಿಮಿಲ್ ರಸ್ತೆಯಲ್ಲಿ 30 ಅಡಿ ಉದ್ದದ ಗೋಡೆ ಕುಸಿತಗೊಂಡಿದ್ದು ಕಿರಿದಾದ ರಸ್ತೆಗೆ ಬೃಹತ್ ಗೋಡೆ ಬಿದ್ದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಆಗಿಲ್ಲ. ಮಲ್ಲೇಶ್ವರ ದ ಮಾರ್ಗೋಸಾ ರಸ್ತೆಯಲ್ಲಿ ಹತ್ತಾರು ಕಡೆ ಮರಗಳು, ಮರದ ಕೊಂಬೆಗಳು ಮುರಿದು ಬಿದ್ದಿದ್ದವು. ಹೀಗಾಗಿ ಪ್ರಮುಖ ಸಂಚಾರ ರಸ್ತೆಯಾದ ಮಾರ್ಗೋಸಾ ರಸ್ತೆ ಬಂದ್ ಆಗಿತ್ತು. ಮಳೆ, ಗಾಳಿಗೆ ಸಿಟಿ ಯೂನಿಯನ್ ಬ್ಯಾಂಕ್‌ನ ಬೃಹತ್ ನಾಮಫಲಕ ಬಿದ್ದುಹೋಗಿದೆ. 170 ಧರಾಶಾಹಿ, 68 ಕಡೆ ಜಲಾವೃತ ನಿನ್ನೆ ಸುರಿದ ಒಂದೇ ಒಂದು ಧಾರಾಕಾರ ಮಳೆಗೆ ಬೆಂಗಳೂರಿನ ಮರಗಳು ಧರೆಗುರಳಿದ್ರೆ, ಟ್ರಾಫಿಕ್ ಜಾಮ್‌ಗೆ ಜನ ಹೈರಾಣಾದ್ರು. 170 ಕ್ಕೂ ಅಧಿಕ ಮರಗಳು ಧರೆಗುರುಳಿದ್ರೆ, 408 ಮರದ ಕೊಂಬೆಗಳು ಮುರಿದು ಬಿದ್ದಿವೆ.

**ಈ ದಿನದ ದರ** ಪೆಟ್ರೋಲ್: 102.96 ₹/L ಡೀಸೆಲ್ : 91.47 ₹/L ಬಂಗಾರ: ₹15,066/Gram24ct ₹13,810/Gram22ct ಬೆಳ್ಳಿ: ₹250.00/Gram

# ಸತೀಶ್ ಜಾರಕಿಹೊಳಿ ಪರವಾಗಿ ಎಂಬಿ ಪಾಟೀಲ್ ಭರ್ಜರಿ ಬ್ಯಾಟಿಂಗ್

**ಏನೆಲ್ಲಾ ವಿಚಾರಗಳ ಬಗ್ಗೆ ಪ್ರಸ್ತಾಪ**

**ಕೆಪಿಸಿಸಿ ಅಧ್ಯಕ್ಷ ಸ್ಥಾನದತ್ತ ಕಣ್ಣಿಟ್ಟ ಸತೀಶ್ ಜಾರಕಿಹೊಳಿ ಕುರಿತಾಗಿ ಸಚಿವ ಎಂಬಿ ಪಾಟೀಲ್ ಮೆಚ್ಚುಗೆಯ ಮಾತನ್ನಾಡಿದ್ದಾರೆ. ಸತೀಶ್ ಜಾರಕಿಹೊಳಿ ಒಬ್ಬ ಉತ್ತಮ ಸಂಘಟಕರಾಗಿದ್ದಾರೆ. ಅವರಿಗೆ ಎಲ್ಲಾ ರೀತಿಯಲ್ಲಿ ಸಾಮರ್ಥ್ಯ ಇದೆ ಎಂದು ಎಂಬಿ ಪಾಟೀಲ್ ಬ್ಯಾಟಿಂಗ್ ಮಾಡಿದ್ದಾರೆ. ಬೆಂಗಳೂರಿನಲ್ಲಿ ಬುಧವಾರ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್‌ನಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಯ ಹಿನ್ನೆಲೆಯಲ್ಲಿ ಈ ರೀತಿಯಾಗಿ ಪ್ರತಿಕ್ರಿಯೆ ನೀಡಿದರು. ಈ ಕುರಿತಾಗಿ ಮಾತನಾಡಿದ ಅವರು ಏನೆಲ್ಲಾ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.**

• ಉದಯವಾಹಿನಿ, ಬೆಂಗಳೂರು



ಕೆಪಿಸಿಸಿ ಅಧ್ಯಕ್ಷ ಸ್ಥಾನದತ್ತ ಕಣ್ಣಿಟ್ಟ ಸತೀಶ್ ಜಾರಕಿಹೊಳಿ ಪರವಾಗಿ ಸಚಿವ ಎಂಬಿ ಪಾಟೀಲ್ ಬ್ಯಾಟಿಂಗ್ ಮಾಡಿದ್ದಾರೆ. ಅವರೊಬ್ಬರ ಉತ್ತಮ ಸಂಘಟಕ ಹಾಗೂ ನಾಯಕತ್ವ ವಹಿಸುವ ಸಾಮರ್ಥ್ಯ ಇದೆ ಎಂದು ಹೇಳುವ ಮೂಲಕ ಸತೀಶ್ ಪ್ರಯತ್ನಕ್ಕೆ ಬೆಂಬಲ ನೀಡುವ ಸುಳಿವು ನೀಡಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಅವರು, ಸತೀಶ್ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಕ್ಲೇಮ್ ಮಾಡಿದ್ದಾರೆ. ಅವರಿಗೆ ಆ ಸಾಮರ್ಥ್ಯ ಇದೆ ಹಾಗೂ ಅವರೊಬ್ಬ ಉತ್ತಮ ಸಂಘಟಕರು. ಎಲ್ಲವನ್ನೂ ಹೈಕಮಾಂಡ್ ಗಮನಿಸುತ್ತಿದೆ ಎಂದರು. ನನ್ನ ಆಸಕ್ತಿಗಳ ಹೈಕಮಾಂಡ್ ಗೆ ಹೇಳುತ್ತೇನೆ. ಬಹಿರಂಗವಾಗಿ ನಾನು ಏನು ಹೇಳಲ್ಲ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಸತೀಶ್ ಜಾರಕಿಹೊಳಿ ಸೇರಿದಂತೆ ಸಚಿವರ ದೆಹಲಿ ಪ್ರವಾಸ ವಿಚಾರವಾಗಿ ಮಾತನಾಡಿದ ಅವರು, 'ನಾನು ವಿಜಯಪುರ ಹೋಗುತ್ತಿದ್ದೇನೆ. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ರಾಜ್ಯಕ್ಕೆ ಬಂದಾಗ ಅವರನ್ನು ಭೇಟಿಯಾಗುತ್ತೇನೆ. ಜಾರಕಿಹೊಳಿ ಸೇರಿ ಎಲ್ಲರಿಗೂ ಹೈಕಮಾಂಡ್ ಚರ್ಚೆ ಮಾಡಲು ಅಧಿಕಾರ ಇದೆ ಎಂದರು. ನಾಯಕತ್ವ ವಿಚಾರ ಪ್ರತಿದಿನ ಚರ್ಚೆಯಾಗುತ್ತಿದೆ. ಕಾಂಗ್ರೆಸ್ ಪಕ್ಷದಲ್ಲಿ ಹೈಕಮಾಂಡೇ ಸುಪ್ರೀಂ. ಹೈಕಮಾಂಡ್ ನಾಯಕರು ತೀರ್ಮಾನಕ್ಕೆ ನಾವು ತಲೆಬಾಗುತ್ತೇವೆ.

ಅವರೆಲ್ಲ ವಿಚಾರ ಮಾಡಿ ನಿರ್ಧಾರ ಮಾಡ್ತಾರೆ. ಪಕ್ಷದಲ್ಲಿ ಯಾವುದೇ ಗೊಂದಲವಿಲ್ಲ ಎಂದು ಸಮರ್ಥಿಸಿಕೊಂಡರು. ಡೇಟ್ ಕೊಟ್ಟ ಶಾಸಕರ ಬಗ್ಗೆ ಹೈಕಮಾಂಡ್ ಗಮನಿಸುತ್ತೆ. ಡೇಟ್ ಕೊಡುವಷ್ಟು ದೊಡ್ಡವರು ನಾನಲ್ಲ ಎಂದು ಇದೇ ಸಂದರ್ಭದಲ್ಲಿ ಅವರು ಹೇಳಿದರು. ಇನ್ನು ಇದೇ ಸಂದರ್ಭದಲ್ಲಿ ನನ್ನ ನಾಯಕತ್ವದಲ್ಲಿ 136 ಸ್ಥಾನ ಗೆದ್ದಿದೆ ಎಂಬ ಡಿಕೆ ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಡಿಕೆ ಶಿವಕುಮಾರ್ ಅವರು ಕಾಂಗ್ರೆಸ್ ಪಕ್ಷದ ಸಂಘಟನೆ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದಕ್ಕೆ ಸಿದ್ದರಾಮಯ್ಯ ನಾಯಕತ್ವ, ಡಿಕೆಶಿ ಸಂಘಟನೆ ಇದೆ. ಇವರಷ್ಟೇ ಅಲ್ಲ, ಪಕ್ಷದ ನಾಯಕರು ಕಾರ್ಯಕರ್ತರು ಶ್ರಮಪಟ್ಟಿದ್ದಾರೆ. ಬೂತ್ ಏಜೆಂಟ್ ಗೂಡ ಶ್ರಮಪಟ್ಟಿದ್ದಾರೆ ಎಂದರು.

ದಲಿತ ಸಿಎಂ ಕೂಗು ವಿಚಾರವಾಗಿ ಇದೇ ಸಂದರ್ಭದಲ್ಲಿ ಮಾತನಾಡಿದ ಅವರು, ಇದಕ್ಕೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ, ಬದಲಾಗಿ ಹೈಕಮಾಂಡ್ ಉತ್ತರ ನೀಡುತ್ತದೆ. ಲಿಂಗಾಯತ ಸಮುದಾಯ ಬೇಡಿಕೆ ಇಡಬಹುದು. ಅಂತಿಮವಾಗಿ ಎಲ್ಲವನ್ನು ತೀರ್ಮಾನ ಮಾಡುವುದು ಪಕ್ಷದ ಹೈಕಮಾಂಡ್ ಎಂದರು. ಲಿಂಗಾಯತ ಸಮುದಾಯ ಈ ಬಾರಿ ಕಾಂಗ್ರೆಸ್ ಪಕ್ಷದ ಪರವಾಗಿ ನಿಂತಿದೆ. ವೀರೇಂದ್ರ ಪಾಟೀಲ್ ಸಂದರ್ಭದಲ್ಲಿ ಕಾಂಗ್ರೆಸ್ ಜೊತೆಗೆ ಲಿಂಗಾಯತರು ನಿಂತಿದ್ದರು. ಅದರ ಬಳಿಕ ಈ ಬಾರಿ ನಿಂತಿದೆ. ಲಿಂಗಾಯತ ಸಮುದಾಯದ 35 ಶಾಸಕರು ಗೆದ್ದಿದ್ದೇವೆ ಈ ಎಲ್ಲವನ್ನೂ ಗಮನಿಸಿ ಹೈಕಮಾಂಡ್ ನಾಯಕರು ವಿಚಾರ ಮಾಡುತ್ತಾರೆ .ನಾನು ಹೇಳುವುದರಿಂದ ಯಾವುದೇ ಪ್ರಯೋಜ ಆಗುವುದಿಲ್ಲ ಎಂದರು.

## ಭಕ್ತಿಭಾವ ತುಂಬಿದ ಅನುಕೃಪ ಗಾಯನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ತ್ಯಾಗರಾಜನಗರದ ಶ್ರೀ ಅಭಯ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ ವಜ್ರಕ್ಷೇತ್ರದಲ್ಲಿ ಜರುಗುತ್ತಿರುವ ಶ್ರೀ ನರಸಿಂಹ ಜಯಂತ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿದುಷಿ ಶ್ರೀಮತಿ ಅನುಕೃಪ ಪುರೋಹಿತ್ ಅವರು ಅಪರೋಕ್ಷ ಜ್ಞಾನಿಗಳಿಂದ ರಚಿಸಲ್ಪಟ್ಟ ಹಲವಾರು ಅಪರೂಪದ ಹರಿದಾಸರ ಪದಗಳನ್ನು ಹಾಗೂ ಅನ್ನಮಾಚಾರ್ಯರ ಕೀರ್ತನೆಗಳನ್ನು ತಾರತಮ್ಯೋಕ್ತವಾಗಿ ಮತ್ತು ಸುಶ್ರಾವ್ಯವಾಗಿ ಹಾಡಿದರು. ಇವರ ಗಾಯನಕ್ಕೆ ಕೀಬೋರ್ಡ್ ವಾದನದಲ್ಲಿ ಶ್ರೀ ಟಿ.ಎಸ್. ರಮೇಶ್ ಮತ್ತು ತಬಲಾ ವಾದನದಲ್ಲಿ ಶ್ರೀ ಪ್ರಮಥ್ ವಿಠಲ್ ಸಾಥ್ ನೀಡಿದರು. ದೇವಸ್ಥಾನದ ಪ್ರಧಾನ ಅರ್ಚಕರಾದ ಡಾ|| ವಾದಿರಾಜಾಚಾರ್ ಮತ್ತು ಸಹ-ಅರ್ಚಕರಾದ ಶ್ರೀ ನರಹರಿ ಆಚಾರ್ ಕಲಾವಿದರಿಗೆ ಸ್ವಾಮಿಯ ಪ್ರಸಾದ ಮತ್ತು ಸರ್ಟಿಫಿಕೇಟ್ ನೀಡಿ ಆಶೀರ್ವದಿಸಿದರು.

## ಮಾರ್ಗ ಮೈಂಡ್ ಕೇರ್ ಸಂಸ್ಥೆಯಿಂದ ಮಾನಸಿಕ ಆರೈಕೆ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ಮಾರ್ಗ ಮೈಂಡ್ ಕೇರ್ ಸಂಸ್ಥೆಯು ಸಮಗ್ರ ಮಾನಸಿಕ ಆರೈಕೆ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು, ಸಹಜ ಜೀವನಕ್ಕೆ ಮರಳಲು ಈ ಕಾರ್ಯಕ್ರಮದಡಿ ಮಾನಸಿಕ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತದೆ. ಮಾನಸಿಕ ಆರೋಗ್ಯ ಕೇಂದ್ರಗಳಿಂದ ಹೊರಬರುವ ಬಹುಪಾಲು ರೋಗಿಗಳು ಅಗತ್ಯ ಬೆಂಬಲದ ಕೊರತೆಯಿಂದಾಗಿ ಅತಂತ್ರ ಸ್ಥಿತಿ ಎದುರಿಸುತ್ತಿದ್ದಾರೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಮಗ್ರ ಮಾನಸಿಕ ಆರೈಕೆ ಕಾರ್ಯಕ್ರಮ ಪ್ರಾರಂಭಿಸಲಾಗಿದೆ. ಕೇಂದ್ರಕ್ಕೆ ಹೊರರೋಗಿಯಾಗಿ ಭೇಟಿ ನೀಡಿ, ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ. ಮನೋವ್ಯಾಧಿಗೆ ಸೂಕ್ತ ಚಿಕಿತ್ಸೆ ಪಡೆದುಕೊಂಡು ಗುಣಮುಖರಾಗಿದ್ದರೂ, ದೈನಂದಿನ ಜೀವನವನ್ನು ಸ್ವತಂತ್ರವಾಗಿ ನಡೆಸಲು ಸನ್ನದ್ಧರಾಗದವರನ್ನು ಕೈಹಿಡಿದು ಮುನ್ನಡೆಸಲು ಈ ಆರೈಕೆ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಲಾಗಿದೆ ಎಂದು ಸಂಸ್ಥೆ ಹೇಳಿದೆ. ವ್ಯಕ್ತಿಯು ಸಮಗ್ರವಾಗಿ ಚೇತರಿಸಿಕೊಳ್ಳಲು ಈ ಕಾರ್ಯಕ್ರಮವು ನೆರವಾಗಲಿದೆ. ಆತ್ಮವಿಶ್ವಾಸವನ್ನು ಪುನರ್ ನಿರ್ಮಿಸಲು, ಮಾನಸಿಕ ಸ್ಥಿರತೆ ಮರಳಿ ಪಡೆಯಲು ಸಹಾಯ ಮಾಡಲಿದೆ. ಮನೋವೈದ್ಯರು ಈ ಕಾರ್ಯಕ್ರಮದ ಮೇಲ್ವಿಚಾರಣೆ ಮಾಡುತ್ತಾರೆ. ಸಂಗೀತ, ಯೋಗ ಮತ್ತು ಅಭಿವ್ಯಕ್ತಿ ಕಲಾ ಪ್ರಕಾರಗಳ ಚಿಕಿತ್ಸಕರನ್ನು ಒಳಗೊಂಡ ಪರಿಣಿತರ ತಂಡ ಈ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲಿದೆ' ಎಂದು ಸಂಸ್ಥೆಯ ಸಂಸ್ಥಾಪಕಿ ಡಾ.ಜ್ಯೋತಿ ನಿರಜಾ ತಿಳಿಸಿದ್ದಾರೆ.

## ಯುದ್ಧದಿಂದ ಸಾಮಾನ್ಯರ ಮೇಲೆಯೇ ಹೆಚ್ಚು ಸಮಸ್ಯೆ.. ಶಾಂತಿದೂತರಾಗೋಣ

• ಉದಯವಾಹಿನಿ, ಬೆಂಗಳೂರು

ಯುದ್ಧಕ್ಕೆ ಮುಂದಾಗದೇ ನಾವೆಲ್ಲರೂ ಶಾಂತಿದೂತರಾಗೋಣ ಸಾಮಾನ್ಯ ಜನರ ಬದುಕಿನ ಮೇಲೆ ಆಗುವ ಪರಿಣಾಮ ತಪ್ಪಿಸೋಣ ಎಂದು ಸಾಹಿತಿ ಹಂ.ಪ.ನಾಗರಾಜಯ್ಯ ಸಲಹೆ ನೀಡಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಶೇಷಾದ್ರಿಪುರಂ ಕಾಲೇಜು ಗಾಂಧಿ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ಯುದ್ಧ ಬೇಡ ಎನ್ನುವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜಗತ್ತಿನ ಯಾವುದೇ ದೇಶದಲ್ಲಿ ಯುದ್ಧ ನಡೆದರೂ ಅದರ ಪರಿಣಾಮ ಪ್ರತಿಯೊಬ್ಬರ ಮೇಲೂ ಒಂದಿಲ್ಲ ಒಂದು ರೀತಿ ಆಗಲಿದೆ ಇದರಿಂದ ಜನ ತೊಂದರೆಗೆ ಸಿಲುಕಬೇಕಾಗುತ್ತದೆ. ಗಾಂಧಿ ತತ್ವವನ್ನು ಅಳವಡಿಸಿಕೊಂಡು ಸಮಾಜ ಮುಖಿಯಾಗೋಣ ಎಂದು ಹೇಳಿದರು.

ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, ಜಗತ್ತಿನಲ್ಲಿ ನೆಲ್ಸನ್ ಮಂಡೆಲಾ, ಬರಾಕ್ ಒಬಾಮ ಅವರಂತಹ ನಾಯಕರಿಗೂ ಪ್ರೇರಣೆಯಾದದ್ದು ಮಹಾತ್ಮ ಗಾಂಧಿಯೇ. ಶಾಂತಿ ದಿಕ್ಕಿನಲ್ಲಿ ನಡೆದರೆ ಸಮಾಜ ಸುಖಿಯಾಗಿರಲಿದೆ. ವಿಶ್ವದ ಹಲವು ಸಮಸ್ಯೆಗಳಿಗೆ ಗಾಂಧಿ ಚಿಂತನೆಯೇ ಪರಿಹಾರ ಎಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ ಮಾತನಾಡಿ, ಯುದ್ಧ ಆರಂಭವಾಯಿತು ಎಂದರೆ ಹಲವು ದೇಶಗಳಲ್ಲಿ ಅನಿಲ, ತೈಲದ ಸಮಸ್ಯೆ ಶುರುವಾಗಿ ಸಾಮಾನ್ಯ ಜನರನ್ನು ಬಾಧಿಸುತ್ತದೆ. ಕಟ್ಟಡ ನಿರ್ಮಾಣ ಉತ್ಪನ್ನ ದುಬಾರಿಯಾಗಿ ಜನ ತೊಂದರೆ ಅನುಭವಿಸುತ್ತಾರೆ. ಯೂರಿಯಾ ಬೆಲೆ ಏರಿಕೆಯಾದರೆ ಕೃಷಿ ಮೇಲೆ ಪರಿಣಾಮ ಉಂಟಾಗಿ ಆಹಾರ ಉತ್ಪಾದನೆ ಕುಂಠಿತವಾಗಲಿದೆ. ಪ್ರತಿಯೊಬ್ಬರು ಸುಮ್ಮದೇ ಕೂರದೇ ಯುದ್ಧವನ್ನು ವಿರೋಧಿಸಬೇಕು ಎಂದು ಹೇಳಿದರು.

## ಕೋಗಿಲು: ಪುನರ್ವಸತಿಗೆ ಆಗ್ರಹ

• ಉದಯವಾಹಿನಿ, ಬೆಂಗಳೂರು

ಕೋಗಿಲು ಲೇಔಟ್‌ನಲ್ಲಿ ಶೆಡ್‌ಗಳ ತೆರವು ಕಾರ್ಯಾಚರಣೆಯಿಂದ ಸಂತ್ರಸ್ತರಾದ ಎಲ್ಲಾ ಕುಟುಂಬಗಳಿಗೆ ಎರಡು ವಾರಗಳಲ್ಲಿ ಪುನರ್ವಸತಿ ಕಲ್ಪಿಸಬೇಕು. ಇಲ್ಲದಿದ್ದರೆ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಕೋಗಿಲು ಲೇಔಟ್ ಸ್ಲಂ ನಿವಾಸಿಗಳ ಹೋರಾಟ ಸಮಿತಿ ಎಚ್ಚರಿಕೆ ನೀಡಿದೆ. ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಸದಸ್ಯರಾದ ಪೂಜಾ, ಗೌರಮ್ಮ, 'ಕೋಗಿಲು ಬಡಾವಣೆಯ ಫಕೀರ್ ಕಾಲೋನಿ ಮತ್ತು ಮಹಾನಾಯಕ ಅಂಬೇಡ್ಕರ್ ನಗರದಲ್ಲಿ (ವಸೀಮ್ ಲೇಔಟ್) 156 ಮುಸ್ಲಿಂ, 31 ಹಿಂದೂ ಕುಟುಂಬ ಹಾಗೂ ಕ್ರೈಸ್ತ ಕುಟುಂಬವೊಂದು ನೆಲಸಿದ್ದವು. ಕೇವಲ ನಾಲ್ಕು ಗಂಟೆಯೊಳಗೆ ಇವರ ಮನೆಗಳನ್ನು ನೆಲಸಮ ಮಾಡಲಾಗಿದೆ. 128 ದಿನಗಳಿಂದ ಈ ಸಂತ್ರಸ್ತರು ಬೀದಿಯಲ್ಲಿಯೇ ಜೀವನ ನಡೆಸುತ್ತಿದ್ದಾರೆ' ಎಂದು ದೂರಿದರು. 'ನೆಲಸಮ ಮಾಡಿದ ಜಾಗದಲ್ಲಿಯೇ ಸಂತ್ರಸ್ತ ಕುಟುಂಬಗಳು ತಾತ್ಕಾಲಿಕವಾಗಿ ಟಾರ್ಪಲಿನ್ ಶೆಡ್‌ಗಳನ್ನು ಹಾಕಿಕೊಂಡು, ಯಾವುದೇ ಮೂಲಸೌಕರ್ಯವಿಲ್ಲದೇ ಜೀವನ ನಡೆಸುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಮಾನವೀಯ ದೃಷ್ಟಿಯಿಂದ ಅರ್ಹರಿಗೆ ಪುನರ್ವಸತಿ ಕಲ್ಪಿಸುವ ಭರವಸೆ ನೀಡಿದ್ದರು, ಆದರೆ ಇದುವರೆಗೂ ಈಡೇರಿಸಿಲ್ಲ ಎಂದು ಹೇಳಿದರು.

## ಆಲಿಕಲ್ಲು ಮಳೆ, ಗುಡುಗು ಬಿರುಗಾಳಿಯ ಎಚ್ಚರಿಕೆ

### ರಾಜ್ಯದ 14 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್, 6 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಕೆಲವು ಜಿಲ್ಲೆಗಳು ಶುಕ್ರವಾರ ವರುಣಾರ್ಭಟಕ್ಕೆ ಒಳಗಾಗಲಿದೆ. ಕರಾವಳಿಯಲ್ಲಿ ಸುಡುವ ಬಿಸಿಲು ಹಾಗೂ ತೇವಾಂಶ ಮುಂದುವರಿಯಲಿದ್ದು, ಉಡುಪಿಯಲ್ಲಿ ಕೇವಲ ಗುಡುಗು ಮಿಂಚಿನ ಅರ್ಭಟ ಇರಲಿದೆ.

**2 ದಿನ ಎಲ್ಲೆಲ್ಲಿ ಭಾರಿ ಮಳೆ?:** ಪ್ರಮುಖವಾಗಿ ಉತ್ತರ ಒಳನಾಡಿನ ಜಿಲ್ಲೆಗಳಾದ ಧಾರವಾಡ, ಗದಗ, ಹಾವೇರಿ, ಕೊಪ್ಪಳ, ದಕ್ಷಿಣ ಒಳನಾಡಿನ ಜಿಲ್ಲೆಗಳಾದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಮಂಡ್ಯ, ರಾಮನಗರ, ಶಿವಮೊಗ್ಗ, ತುಮಕೂರಿನಲ್ಲಿ ಅತಿ ಭಾರಿ ಮಳೆಯ ಮುನ್ಸೂಚನೆ ಹಿನ್ನೆಲೆ ಆರೆಂಜ್ ಅಲರ್ಟ್ ಕೊಡಲಾಗಿದೆ.

**ಎಲ್ಲೆಲ್ಲಿ ಸಾಧಾರಣ ಮಳೆ?:** ಏಪ್ರಿಲ್ 30 ಗುರುವಾರದಂದು ತುಮಕೂರು, ಚಾಮರಾಜನಗರ, ಮೇ 1 ರಂದು ಚಿಕ್ಕಮಗಳೂರು, ಮೈಸೂರು, ಕೊಡಗು, ಹಾಸನದಲ್ಲಿ ಸಾಧಾರಣ ಪ್ರಮಾಣದಲ್ಲಿ ಗುಡುಗು, ಆಲಿಕಲ್ಲು ಮಳೆ, ಬಿರುಗಾಳಿ ಬರುವ ಕಾರಣಕ್ಕೆ ಯೆಲ್ಲೋ ಅಲರ್ಟ್ ಕೊಡಲಾಗಿದೆ.

### ಗುಡುಗು ಸಹಿತ ಮಳೆ ಮುನ್ನೆಚ್ಚರಿಕೆ: ರಕ್ಷಣೆ ಹೇಗೆ?

- **1)ಬಲವಾದ ಗಾಳಿ ಮತ್ತು ಗುಡುಗು ಸಹಿತ ಮಳೆಯಾಗುವ ಸಮಯದಲ್ಲಿ ಕಿಟಕಿಗಳು ಮತ್ತು ಬಾಗಿಲುಗಳನ್ನು ಮುಚ್ಚಿಡಬೇಕು.**
- **2)ಬಾಗಿಲು ಮತ್ತು ಕಿಟಕಿಗಳ ಬಳಿ ನಿಲ್ಲಬಾರದು.**
- **3) ಕಟ್ಟಡದ ಒಳಗೆ ಇರಿ ಮತ್ತು ಸಾಧ್ಯವಾದಷ್ಟು ಗೋಡೆಗಳು ಅಥವಾ ನೆಲವನ್ನು ಮುಟ್ಟದಿರಲು ಪ್ರಯತ್ನಿಸಬೇಕು.(ಕುರ್ಚಿ ಮೇಲೆ, ದಿವಾನ್ ಮೇಲೆ ಕುಳಿತುಕೊಳ್ಳಬಹುದು)**
- **4)ಗೃಹೋಪಯೋಗಿ ಉಪಕರಣಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕು.**
- **5)ಗುಡುಗು ಸಹಿತ ಮಳೆಯ ಸಮಯದಲ್ಲಿ ವಿದ್ಯುತ್ ಉಪಕರಣಗಳಿಂದ ದೂರವಿರಬೇಕು**



- **6) ಇನ್ನು ಮನೆಯಿಂದ ಹೊರಗೆ ಇದ್ದಲ್ಲಿ ವಿದ್ಯುತ್ ಕಂಬಗಳು, ಟ್ರಾನ್ಸ್‌ಫಾರ್ಮರ್ ಕಂಬಗಳಿಂದ ದೂರ ಇರಬೇಕು.**
- **7)ನೀರು ನಿಂತಿದ್ದ ರಸ್ತೆಯಲ್ಲಿ ಓಡಾಡುವುದು, ಅಂಡರ್‌ಪಾಸ್‌ಗಳಲ್ಲಿ ವಾಹನ ಸಂಚಾರ ಅಪಾಯಕಾರಿ.**
- **8)ಗುಡುಗು-ಮಿಂಚಿನ ವೇಳೆ ರಕ್ಷಣೆಗೆ ಮರದ ಕೆಳಗೆ ನಿಲ್ಲಬಾರದು.**
- **9)ಶಿಥಿಲ ಕಟ್ಟಡ-ಶಿಥಿಲ ಗೋಡೆಗಳ ಬಗ್ಗೆ ಅರಿವಿರಲಿ.**

**ಬೆಂಗಳೂರಲ್ಲಿ ಇಳಿದ ತಾಪಮಾನ:** ಬುಧವಾರ ಸಂಜೆ ಬೆಂಗಳೂರು ನಗರದಲ್ಲಿ ಬಿರುಸಿನ ಆಲಿಕಲ್ಲು ಮಳೆ ಸುರಿದ ಪರಿಣಾಮ ಕನಿಷ್ಠ ತಾಪಮಾನ 18 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯಿತು. ನಿನ್ನೆ ಸಂಜೆ, ರಾತ್ರಿ ಒಟ್ಟು 111.5 ಮಿಮೀ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಂಗಳೂರು ಹವಾಮಾನ ಇಲಾಖೆ ಪ್ರಕಾರ ಸಂಜೆ 5.30ರ ಹೊತ್ತಿಗೆ ಬೆಂಗಳೂರು ನಗರ ವೀಕ್ಷಣಾಲಯದಲ್ಲಿ 80 ಮಿಮೀ ಮಳೆಯಾಗಿದ್ದರೆ, ಎಚ್‌ಎಎಲ್ ವಿಮಾನ ನಿಲ್ದಾಣದ ವೀಕ್ಷಣಾಲಯದಲ್ಲಿ 30 ಮಿಮೀ ಮಳೆಯಾಗಿದೆ. ಬೆಂಗಳೂರು ನಗರದಲ್ಲಿ ಕನಿಷ್ಠ ತಾಪಮಾನವು 18 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯಿತು. ಗಂಟೆಗೆ 75 ಕಿ.ಮೀ ವೇಗದಲ್ಲಿ ಗಾಳಿ ಬೀಸಿದೆ. ಕಳೆದೆರಡು ವಾರದಲ್ಲಿ ನಗರದಲ್ಲಿ ಗರಿಷ್ಠ 36-39 ಡಿ.ಸೆ.ವರೆಗೆ ತಾಪಮಾನ ದಾಖಲಾಗಿ ಜನ ಕಂಗೆಟ್ಟಿದ್ದರು.

ಐಎಂಡಿ ಬೆಂಗಳೂರು ಮುಖ್ಯಸ್ಥ ಎನ್. ಪುವಿಯರಸನ್, ಹೆಚ್ಚಾದ ತಾಪಮಾನದಿಂದಾಗಿ ವಾತಾವರಣದಲ್ಲಿ ಉಂಟಾದ ಸಂವಹನ ಪ್ರಕ್ರಿಯೆಯೇ ಈ ಆಲಿಕಲ್ಲು ಮಳೆಗೆ ಮುಖ್ಯ ಕಾರಣ. ಇದರ ಜತೆಗೆ, ಕೆಳಮಟ್ಟದ ಗಾಳಿಯಲ್ಲಿ ಉಂಟಾದ ಅಸ್ಥಿರತೆ ಮತ್ತು ತೇವಾಂಶವು ಒಂದೆಡೆ ಒಟ್ಟುಗೂಡಿದ್ದು ಆಲಿಕಲ್ಲು ಮಳೆ ಮಳೆಯಾಗಲು ಪೂರಕವಾಯಿತು ಎಂದು ಹೇಳಿದ್ದಾರೆ. ಕರ್ನಾಟಕದ ಉತ್ತರ ಒಳನಾಡಿನಲ್ಲಿ ಸುಮಾರು 10 ದಿನಗಳ ಹಿಂದೆ, ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ಈಚೆಗೆ ಪೂರ್ವ ಮುಂಗಾರು ಮಳೆ ಬಂದಿದ್ದರೂ, ಐಎಂಡಿ ಬೆಂಗಳೂರಿಗೆ ನಿರ್ದಿಷ್ಟವಾಗಿ ಆಲಿಕಲ್ಲು ಮಳೆಯಾಗುವ ಮುನ್ಸೂಚನೆ ನೀಡಿರಲಿಲ್ಲ. ಮೈಸೂರು ಮತ್ತು ಹಾಸನದಂತಹ ಜಿಲ್ಲೆಗಳಿಗೆ ಆಲಿಕಲ್ಲು ಮಳೆಯ ಚಟುವಟಿಕೆಯನ್ನು ಮುನ್ಸೂಚನೆ ನೀಡಲಾಗಿತ್ತು. ಆದರೆ, ಚಂಡಮಾರುತ ಬೆಂಗಳೂರಿನ ಕಡೆಗೆ ಪೂರ್ವಕ್ಕೆ ಬದಲಾದವು. ಬೆಂಗಳೂರಿಗೆ, ಐಎಂಡಿ ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆ ನೀಡಿತ್ತು.


### ಮುಂದಿನ ನಾಲ್ಕು ದಿನ ಬೇಸಿಗೆ ಮಳೆ ಸಾಧ್ಯತೆ

**ಕೇರಳದಲ್ಲಿ ಮುಂದಿನ ನಾಲ್ಕು ದಿನಗಳವರೆಗೆ ಬೇಸಿಗೆ ಮಳೆ ಸುರಿಯುವ ಸಾಧ್ಯತೆಗಳಿವೆ ಎಂದು ಕೇಂದ್ರ ಹವಾಮಾನ ಇಲಾಖೆ ತಿಳಿಸಿದೆ. ಬುಧವಾರ ರಾತ್ರಿ ಕೆಲವು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಯಿರುವುದಾಗಿಯೂ, ಗುರುವಾರ ಕಣ್ಣೂರು, ಕಾಸರಗೋಡು ಮತ್ತು ಇಡುಕ್ಕಿ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ನೀಡಲಾಗಿದೆ. ಮುಂದಿನ 4 ದಿನಗಳವರೆಗೆ ಮಳೆಯಾಗಲಿದೆ ಎಂದು ಎಚ್ಚರಿಕೆ ನೀಡಲಾಗಿದೆ. ಕೇರಳದ ಪ್ರತ್ಯೇಕ ಸ್ಥಳಗಳಲ್ಲಿ ಗುಡುಗು ಸಹಿತ ಮಳೆ ಮತ್ತು ಗಂಟೆಗೆ 40-50 ಕಿ.ಮೀ. ವೇಗದಲ್ಲಿ ಬಲವಾದ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ತಿಳಿಸಿದೆ.**

## ಬನಶಂಕರಿ; ಸ್ಕೈವಾಕ್ ಜತೆ ಮೇಲ್ಸೇತುವೆ ದಟ್ಟಣೆ ನಿಯಂತ್ರಣಕ್ಕೆ ಕ್ರಮ

• ಉದಯವಾಹಿನಿ, ಬೆಂಗಳೂರು

ಬನಶಂಕರಿ ದೇವಸ್ಥಾನ ಸಮೀಪದ ಹೊರವರ್ತುಲ ರಸ್ತೆ ಜಂಕ್ಷನ್‌ನಲ್ಲಿ ಸ್ಕೈವಾಕ್ ಜೊತೆಗೆ ಮೇಲ್ಸೇತುವೆಯನ್ನು ನಿರ್ಮಿಸುವ ಸ್ಥಳೀಯರ ಒತ್ತಾಯಕ್ಕೆ ಸ್ಪಂದನೆ ದೊರೆತಿದೆ. ಬನಶಂಕರಿ ದೇವಸ್ಥಾನದ ಜಂಕ್ಷನ್‌ನಲ್ಲಿ ವೃತ್ತಾಕಾರದ ಸ್ಕೈವಾಕ್ ಯೋಜನೆಯನ್ನು ಬದಲಿಸಿ, ಮೇಲ್ಸೇತುವೆ ನಿರ್ಮಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ. ದೇವಸ್ಥಾನ ಸಮಿತಿ ಸದಸ್ಯರು ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಮನವಿಗೆ ಸ್ಪಂದಿಸಿರುವ ಶಿವಕುಮಾರ್, ಬನಶಂಕರಿ ದೇವಾಲಯ ಜಂಕ್ಷನ್‌ನಲ್ಲಿ ವಾಹನಗಳ ಸಂಚಾರ ದಟ್ಟಣೆ ಹೆಚ್ಚಾಗಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿದೆ. ಈ ಜಂಕ್ಷನ್‌ನಲ್ಲಿ ಸುಗಮ ಸಂಚಾರಕ್ಕೆ ಅನುವಾಗುವಂತೆ ಮೇಲೇತುವೆ ಹಾಗೂ ಸ್ಕೈವಾಕ್ ನಿರ್ಮಾಣ ಮಾಡಬೇಕು. ಇದನ್ನು ವಿಶೇಷ ಪ್ರಕರಣ ಎಂದು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಜಿಬಿಎ ಮುಖ್ಯ ಆಯುಕ್ತ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆದು ನಿರ್ದೇಶಿಸಿದ್ದಾರೆ. ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ಉಂಟಾಗುತ್ತಿರುವ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ, ಕನಕಪುರ ರಸ್ತೆ-ಬನಶಂಕರಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆ ನಿವಾರಿಸಲು 2.5 ಕಿ.ಮೀ ಮೇಲ್ವೇತುವೆ ನಿರ್ಮಾಣ ಮಾಡಲು ಡಿ.ಕೆ. ಶಿವಕುಮಾರ್ ಅವರು ಅಂದಿನ ಬಿಬಿಎಂಪಿ ಅಧಿಕಾರಿಗಳಿಗೆ 2023ರ ಆಗಸ್ಟ್ 19ರಂದು ಸೂಚಿಸಿದ್ದರು.



ಬಿಎಂಆರ್‌ಸಿಎಲ್‌ನಿಂದ ಬನಶಂಕರಿ ಜಂಕ್ಷನ್‌ನಲ್ಲಿ 45 ಕೋಟಿ ವೆಚ್ಚದಲ್ಲಿ ಸ್ಕೈವಾಕ್ ನಿರ್ಮಿಸಲಾಗುತ್ತದೆ ಎಂದು ನಮ್ಮ ಮೆಟ್ರೊ ಅಧಿಕಾರಿಗಳು ಆಗ ಮಾಹಿತಿ ನೀಡಿದ್ದರು. ಆದರೆ, ಅಷ್ಟೊಂದು ವೆಚ್ಚ ಮಾಡಿದರೂ ಅದರಿಂದ ಸಂಚಾರ ದಟ್ಟಣೆ ಕಡಿಮೆಯಾಗುವುದಿಲ್ಲ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು. ಇದನ್ನು ಪರಿಗಣನೆಗೆ ತೆಗೆದುಕೊಳ್ಳದೆ, ವೃತ್ತಾಕಾರದ ವಾಕ್ ನಿರ್ಮಿಸಲು ಬಿಎಂಆರ್‌ಸಿಎಲ್ ಮುಂದಾಗಿ, ಟೆಂಡರ್ ಕರೆದಿದೆ. ಇದಕ್ಕೆ ಬನಶಂಕರಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ, ಸ್ಥಳೀಯರಿಂದ ವಿರೋಧ ವ್ಯಕ್ತವಾಗಿತ್ತು. ಸ್ಥಳೀಯರ ಮನವಿಗೆ ಸ್ಪಂದಿಸಿದ ಸಚಿವ ರಾಮಲಿಂಗಾರೆಡ್ಡಿ ಅವರು, ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದು ಮೇಲ್ವೇತುವೆ ನಿರ್ಮಿಸುವಂತೆ ಮನವಿ ಮಾಡಿದ್ದರು. ಮಾರ್ಚ್ 26ರಂದು ಪ್ರಕಟವಾಗಿದ್ದ 'ಬನಶಂಕರಿ ಮೇಲ್ವೇತುವೆ ಅತ್ಯಗತ್ಯ' ಸುದ್ದಿಯನ್ನು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಪ್ರಸ್ತಾಪಿಸಿದ್ದರು. ಅದಕ್ಕೆ ಉತ್ತರಿಸಿದ್ದ ಡಿ.ಕೆ. ಶಿವಕುಮಾರ್, ಮೇಲ್ಸೇತುವೆ ನಿರ್ಮಿಸುವ ಭರವಸೆ ನೀಡಿದ್ದರು. ಅದರಂತೆ, ಪತ್ರ ಬರೆದು ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ.

## ಬಹುಭಾಷೆಯಲ್ಲಿ 'ನಮ್ಮ 112' ಸೇವೆ: ಎ.ಐ ಆಧರಿಸಿ ಬೆಂಗಳೂರು ಪೊಲೀಸರಿಂದ ಹೊಸ ವ್ಯವಸ್ಥೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಪೊಲೀಸ್ ಇಲಾಖೆಯು ನಗರದಲ್ಲಿ 'ನಮ್ಮ 112' ಸೇವೆಯಲ್ಲಿ ಬಹುಭಾಷಾ ವ್ಯವಸ್ಥೆ ಜಾರಿಗೆ ತಂದಿದೆ. ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಗೃಹ ಸಚಿವ ಜಿ.ಪರಮೇಶ್ವರ ಹೊಸ ವ್ಯವಸ್ಥೆಗೆ ಚಾಲನೆ ನೀಡಿದರು. ದೇಶದಲ್ಲಿಯೇ ಮೊದಲ ಬಾರಿಗೆ ನಗರ ಪೊಲೀಸ್ ಇಲಾಖೆಯಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ದೇಶದ 10ಕ್ಕೂ ಹೆಚ್ಚು ಭಾಷೆಗಳಲ್ಲಿ 'ನಮ್ಮ 112' ಸೇವೆ ಒದಗಿಸಲಾಗುತ್ತಿದೆ. ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಆಧರಿಸಿ ಕನ್ನಡ, ಹಿಂದಿ, ತಮಿಳು, ಮಲೆಯಾಳ, ಮರಾಠಿ, ಅಸ್ಸಾಮಿ ಸೇರಿದಂತೆ ಭಾರತೀಯ ಭಾಷೆಗಳು, ಸ್ಪ್ಯಾನಿಷ್, ಫ್ರೆಂಚ್, ಅರೇಬಿಕ್ ಭಾಷೆಗಳಲ್ಲಿ ಸೇವೆ ಒದಗಿಸಲಾಗುತ್ತಿದೆ' ಎಂದು ಜಿ.ಪರಮೇಶ್ವರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಶಿಕ್ಷಣ, ಉದ್ಯೋಗಕ್ಕೆಂದು ದೇಶದ ವಿವಿಧ ಭಾಗದ ಜನರು ಹಾಗೂ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ ನೆಲಸಿದ್ದಾರೆ. ಪ್ರವಾಸಕ್ಕೆಂದು ವಿದೇಶಿಯರೂ ನಗರಕ್ಕೆ ಬರುತ್ತಾರೆ. ಆದರೆ, ತುರ್ತು ಸಂದರ್ಭಗಳಲ್ಲಿ ಪೊಲೀಸರಿಗೆ ಮಾಹಿತಿ ನೀಡಲು ಭಾಷೆಯ ಸಮಸ್ಯೆ ಎದುರಾಗುತ್ತಿತ್ತು. ಇದೀಗ ತುರ್ತು ಸೇವೆಗಳ ಕ್ಷೇತ್ರದಲ್ಲಿ ಮಹತ್ವದ ಮೈಲುಗಲ್ಲು ಸಾಧಿಸಲಾಗಿದೆ. 'ನಮ್ಮ 112' ಸೇವೆಯನ್ನು ಬಹುಭಾಷಾ 'ವಾಯ್ಸ್ ಎ.ಐ' ಹಾಗೂ ಸ್ವಯಂ ಚಾಲಿತ ಭಾಷಾಂತರ ತಂತ್ರಜ್ಞಾನದೊಂದಿಗೆ ಅಭಿವೃದ್ಧಿ ಪಡಿಸಲಾಗಿದೆ' ಎಂದು ಹೇಳಿದರು. ನಾಗರಿಕರು ಸ್ವ-ಇಚ್ಛೆಯ ಭಾಷೆಯಲ್ಲಿ ಸಂವಹನ ನಡೆಸಬಹುದು. ಎ.ಐ ತಂತ್ರಜ್ಞಾನವು ಕರೆ ಮಾಡುವವರ ಅಹವಾಲನ್ನು ತಕ್ಷಣವೇ ಅರ್ಥೈಸಿ ಅವಶ್ಯಕ ಮಾಹಿತಿಯನ್ನು ಸ್ಪಷ್ಟವಾಗಿ ದಾಖಲಿಸುತ್ತದೆ. ತುರ್ತು ಸೇವೆಗಳ ಪ್ರತಿಕ್ರಿಯೆಯನ್ನು ವೇಗವಾಗಿ ಪರಿಣಾಮಕಾರಿಯಾಗಿ ನೀಡುವುದಕ್ಕೆ ಸಹಕಾರಿ ಆಗುತ್ತದೆ. ಇದರಿಂದ ಪ್ರತಿಕ್ರಿಯಿಸುವ ಸಮಯ ಕಡಿಮೆ ಆಗಲಿದೆ. ಅಲ್ಲದೇ, ಅವಘಡ ನಡೆದ ಸ್ಥಳಕ್ಕೆ ಪೊಲೀಸರು ತೆರಳುವುದಕ್ಕೂ ಅನುಕೂಲ ಆಗಲಿದೆ ಎಂದು ಹೇಳಿದರು.

**ಐಪಿಎಲ್ ಪಂದ್ಯಾವಳಿ:** ಯಶಸ್ವಿ ನಿರ್ವಹಣೆ ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯ ಐದು ಪಂದ್ಯಗಳು ನಗರದ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದು ಪ್ರತಿ ಪಂದ್ಯವನ್ನೂ ಯಶಸ್ವಿಯಾಗಿ ಸಂಘಟಿಸಲಾಗಿದೆ. ಯಾವುದೇ ಲೋಪ ನಡೆಯದಂತೆ ನಗರ ಪೊಲೀಸರು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದ್ದರು ಎಂದು ಜಿ.ಪರಮೇಶ್ವರ ಅವರು ಹೇಳಿದರು. ಐಪಿಎಲ್ ಟಿಕೆಟ್ ತೋರಿಸಿ ನಮ್ಮ ಮೆಟ್ರೊದಲ್ಲಿ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಪ್ರತಿ ಪಂದ್ಯದಲ್ಲಿ 19ರಿಂದ 20 ಸಾವಿರ ಪ್ರೇಕ್ಷಕರು ನಮ್ಮ ಮೆಟ್ರೊ ಸೇವೆ ಬಳಸಿದ್ದಾರೆ ಎಂದು ಹೇಳಿದರು.

## ಗೋಡೆ ಕುಸಿತ ಬೆಂಗಳೂರಿನ ಅವ್ಯವಸ್ಥೆಗೆ ಎಚ್ಚರಿಕೆ ಗಂಟೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಬೌರಿಂಗ್ ಆಸ್ಪತ್ರೆ ಕಾಂಪೌಂಡ್ ಗೋಡೆ ಕುಸಿತ ಪ್ರಕರಣ ಬೆಂಗಳೂರಿನ ಅವ್ಯವಸ್ಥೆ ಬಗ್ಗೆ ಸರ್ಕಾರ ಎಚ್ಚರಿಕೆ ಗಂಟೆಯಾಗಲಿ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ. ಈ ದುರ್ಘಟನೆಯಲ್ಲಿ ಏಳು ಮಂದಿ ಸತ್ತಿರುವುದು ಇಡೀ ಬೆಂಗಳೂರು ನಗರದ ಜನತೆಯನ್ನು ಬೆಚ್ಚಿ ಬೀಳಿಸಿದೆ ಎಂದು ಅವರು 'ಎಕ್ಸ್' ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಸ್ತೆ ಗುಂಡಿಗೆ, ವಿದ್ಯುತ್ ತಂತಿಗೆ, ಕುಸಿದ ಗೋಡೆಗೆ ನಾಗರೀಕರು ಸಾವನ್ನಪ್ಪಬೇಕಾದ ದುಸ್ಥಿತಿ ಯಾವ ನಾಗರೀಕ ಸಮಾಜಕ್ಕೆ ಶೋಭೆ ತರುವುದಿಲ್ಲ. ಅದರಲ್ಲೂ ಇಡೀ ದೇಶದ ಆರ್ಥಿಕ ಬೆನ್ನೆಲುಬಾಗಿರುವ ಬೆಂಗಳೂರಿನಂತಹ ನಗರದಲ್ಲಿ ಮೂಲಸೌಕರ್ಯ ಇಷ್ಟು ಹದಗೆಟ್ಟಿರುವುದು ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿರುವ ಸರ್ಕಾರಕ್ಕೆ ತಲೆ ತಗ್ಗಿಸುವ ವಿಷಯ ಎಂದಿದ್ದಾರೆ.

ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಬೇಸಿಗೆಯಲ್ಲೇ ಮುಂಗಾರು ಪೂರ್ವ ಮಳೆ ಬರುವುದು ವಾಡಿಕೆ. ನಿನ್ನೆ ಬಂದ ಮಳೆ ಆಕಸ್ಮಿಕ, ನಿನ್ನೆ ನಡೆದಿದ್ದು ಪ್ರಕೃತಿ ವಿಕೋಪ ಎಂದು ಯಾರಾದರೂ ವಾದಿಸಿದರೆ ಅದು ನಿನ್ನೆ ಜೀವ ಕಳೆದುಕೊಂಡ ದುರ್ದೈವಿಗಳಿಗೆ ಮತ್ತು ಅವರ ಕುಟುಂಬದವರಿಗೆ ಮಾತ್ರ ಮಾಡುವ ದ್ರೋಹವನ್ನ, ಬದಲಿಗೆ ತಮ್ಮ ಆತ್ಮಸಾಕ್ಷಿಗೆ ಮಾಡಿಕೊಳ್ಳುವ ಆತ್ಮವಂಚನೆ ಎಂದು ಹೇಳಿದ್ದಾರೆ. ವಿರೋಧ ಪಕ್ಷದ ನಾಯಕನಾಗಿ ನಾನು ಕೇವಲ ರಾಜಕೀಯ ಮಾಡುತ್ತಿದ್ದೇನೆ. ಸಾವಿನಲ್ಲೂ ರಾಜಕಾರಣ ಮಾಡುತ್ತಿದ್ದೇನೆ ಎಂದು ಟೀಕೆ ಮಾಡುವವರು ಒಮ್ಮೆ ಯೋಚಿಸಲಿ. ಮುಂಗಾರು ಪೂರ್ವ ಮಳೆ ವಿಷಯ ಬಿಡಿ. ಮುಂಗಾರು ಮಳೆ ಆರಂಭಕ್ಕೆ ಇನ್ನು ನಾಲ್ಕು ವಾರ ಬಾಕಿ ಇದೆ. ಮುಖ್ಯಮಂತ್ರಿಗಳಾಗಲಿ, ಬೆಂಗಳೂರು ಉಸ್ತುವಾರಿ ಹೊತ್ತಿರುವ ಉಪಮುಖ್ಯಮಂತ್ರಿಗಳಾಗಲಿ, ಮಳೆಗಾಲ ನಿರ್ವಹಣೆ ಬಗ್ಗೆ ಈವರೆಗೂ ಒಂದಾದರೂ ಸಭೆ ನಡೆಸಿದ್ದಾರಾ? ರಸ್ತೆಗುಂಡಿ ಮುಚ್ಚುವ ಬಗ್ಗೆ, ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳ ದುರಸ್ತಿ ಬಗ್ಗೆ, ರಸ್ತೆಯಲ್ಲಿ ಬಿದ್ದಿರುವ, ನೇತಾಡುತ್ತಿರುವ ವಿದ್ಯುತ್ ತಂತಿಗಳನ್ನು ಸರಿಪಡಿಸುವ ಬಗ್ಗೆ, ತಗ್ಗು ಪ್ರದೇಶಗಳಲ್ಲಿ, ಅಂಡರ್ ಪಾಸ್ ಗಳಲ್ಲಿ, ಸೇತುವೆಗಳ ಮೇಲೆ ಮಳೆ ನೀರು ನಿಲ್ಲದಂತೆ ಕ್ರಮ ಕೈಗೊಳ್ಳುವ ಬಗ್ಗೆ, ರಾಜಕಾಲುವೆಗಳ ನಿರ್ವಹಣೆ ಬಗ್ಗೆ, ಹಳೆಯ ಮರಗಳು, ಜೋತು ಬಿದ್ದಿರುವ ಕೊಂಬೆಗಳನ್ನು ತೆಗೆಸುವ ಬಗ್ಗೆ, ಯಾವುದಾದರೂ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದಾರಾ? ಈ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದರೆ ಬಹುಶಃ ನಿನ್ನೆಯ ಅನಾಹುತವನ್ನು ತಪ್ಪಿಸಬಹುದಿತ್ತೇನೋ ಅಲ್ಲವೇ ಎಂದು ಪ್ರಶ್ನಿಸಿದ್ದಾರೆ.


ಇನ್ನಾದರೂ ಕಾಂಗ್ರೆಸ್ ಸರ್ಕಾರ ಎಚ್ಚೆತ್ತುಕೊಂಡು ಬೆಂಗಳೂರಿನ ಮೂಲ ಸೌಕರ್ಯವನ್ನು ಸುಧಾರಿಸುವ ಬಗ್ಗೆ ಗಮನ ಹರಿಸದೇ ಹೋದರೆ ಬೆಂಗಳೂರಿನ ಜನತೆ ಕಾಂಗ್ರೆಸ್ ಪಕ್ಷವನ್ನು ಎಂದಿಗೂ ಕ್ಷಮಿಸಲಾರರು. ನಿನ್ನೆ ಸಂಭವಿಸಿದ ಅವಘಡವನ್ನು ಒಂದು ಎಚ್ಚರಿಕೆಯ ಗಂಟೆಯೆಂದು ಪರಿಗಣಿಸಿ, ಈ ಕೂಡಲೇ ಬೆಂಗಳೂರಿನ ಮೂಲಸೌಕರ್ಯ ಸುಧಾರಣೆಗೆ ಒಂದು ವಿಶೇಷ ತಂಡ ರಚನೆ ಮಾಡಬೇಕು. ನಗರದಲ್ಲಿ ಮಳೆಯಿಂದ ಉಂಟಾಗುವ ಅನಾಹುತಗಳನ್ನು ತಡೆಗಟ್ಟಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಇದೇ ರೀತಿ ಬೆಂಗಳೂರಿನ ಮೇಲಿನ ನಿರ್ಲಕ್ಷ್ಯವನ್ನು ಮುಂದುವರಿಸಿದರೆ, ಮುಂದಾಗುವ ಎಲ್ಲಾ ಅನಾಹುತಗಳಿಗೆ, ಹೋಗುವ ಪ್ರತಿ ಜೀವಕ್ಕೂ ಕಾಂಗ್ರೆಸ್ ಸರ್ಕಾರವೇ ನೇರ ಹೊಣೆ ಎಂದೂ ಹೇಳಿದ್ದಾರೆ.

## ಇ-ಸ್ವತ್ತು 2.0 ಸಮಸ್ಯೆ ಪರಿಹಾರ

### 1,40,719 ಅರ್ಜಿ ವಿಲೇ, ತ್ವರಿತ ವಿಲೇವಾರಿಗೆ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ

• ಉದಯವಾಹಿನಿ, ಬೆಂಗಳೂರು

**ನಾನಾ ಹಂತದಲ್ಲಿ ಬಾಕಿ**



ರಾಜ್ಯಾದ್ಯಂತ ಇ-ಸ್ವತ್ತು 2.0 ತಂತ್ರಾಂಶದಡಿ ಸ್ವೀಕರಿಸುತ್ತಿರುವ ಅರ್ಜಿ ವಿಲೇವಾರಿ ಪ್ರಕ್ರಿಯೆ ತೀವ್ರಗೊಳಿಸಲಾಗಿದೆ. ಈವರೆಗೆ ಒಟ್ಟು 1,40,719 ಅರ್ಜಿ ಅನುಮೋದಿಸಿ ವಿಲೇವಾರಿ ಮಾಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಹೊಸ ನಮೂನೆ 11ಬಿ ಅಡಿ ಈವರೆಗೆ 82,640 ಅರ್ಜಿ ಸ್ವೀಕೃತವಾಗಿದ್ದು, ನಾನಾ ಹಂತಗಳಲ್ಲಿ ಅನುಮೋದನೆಗೆ ಬಾಕಿ ಉಳಿದಿವೆ. ಈ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮಾಧ್ಯಮ ಪ್ರಕಟಣೆ ಹೊರಡಿಸಿದ್ದಾರೆ. ಇ-ಸ್ವತ್ತು 2.0 ತಂತ್ರಾಂಶದಡಿ ಸಾರ್ವಜನಿಕರಿಂದ ಇದುವರೆಗೆ ಒಟ್ಟು 1,52,863 ಅರ್ಜಿಗಳು ಸ್ವೀಕೃತವಾಗಿವೆ. ಇವುಗಳಲ್ಲಿ 7,896 ಅರ್ಜಿಗಳು ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಲಾಗಿನ್‌ನಲ್ಲಿ, 3,182 ಅರ್ಜಿಗಳು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಲಾಗಿನ್‌ನಲ್ಲಿ, 4,036 ಅರ್ಜಿಗಳು ಗ್ರಾಮ ಪಂಚಾಯತಿ ಅಧ್ಯಕ್ಷರ ಆಡಳಿತಾಧಿಕಾರಿ ಲಾಗಿನ್‌ನಲ್ಲಿ, 1,947 ಅರ್ಜಿಗಳು ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿಗಳ ಲಾಗಿನ್‌ನಲ್ಲಿ ಅನುಮೋದನೆಗಾಗಿ ಬಾಕಿಯಿವೆ. 950 ಅರ್ಜಿಗಳು ಕಾರ್ಯ ನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆಗೊಂಡು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಲಾಗಿನ್‌ನಲ್ಲಿವೆ.

ಈ ರೀತಿ ನಾನಾ ಹಂತಗಳಲ್ಲಿ ಒಟ್ಟು 18,011 ಅರ್ಜಿಗಳು ಅನುಮೋದನೆಗಾಗಿ ಬಾಕಿಯಿವೆ, ಎಂದು ಮಾಹಿತಿ ನೀಡಿದ್ದಾರೆ. ಹೊರದೇಶದ ಅರ್ಜಿದಾರರಿಗೆ ಇ-ಸ್ವತ್ತು ತಂತ್ರಾಂಶದಲ್ಲಿ ಪಾಸ್ಪೋರ್ಟ್ ಮೂಲಕ ಅರ್ಜಿ ಸಲ್ಲಿಸಲು, ಹೊಸ ಬಡಾವಣೆಗಳಿಗೆ ಇ-ಸ್ವತ್ತು ತಂತ್ರಾಂಶದಡಿ ಅರ್ಜಿ ಸಲ್ಲಿಸಲು ಅವಕಾಶವನ್ನು ಮುಂದಿನ 10 ದಿನದೊಳಗೆ ಕಲ್ಪಿಸಲಾಗುವುದು. ಸಾರ್ವಜನಿಕರು ಇ-ಸ್ವತ್ತು 2.0 ತಂತ್ರಾಂಶದ ಮೂಲಕ ಆನ್ ಲೈನ್‌ನಲ್ಲಿ ಅರ್ಜಿ ಸಲ್ಲಿಸಲು, ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮಾಡಲಾಗಿದೆ. ಬಾಪೂಜಿ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

**ಇ.ಸ್ವತ್ತು 2.0 ತಂತ್ರಾಂಶದಲ್ಲಿ ಬದಲಾವಣೆ ಮಾಡಿ, ಈವರೆಗೆ ಆಗುತ್ತಿದ್ದ ತೊಡಕುಗಳನ್ನು ಪರಿಹರಿಸಲಾಗಿದೆ. ಹೊಸ ನಮೂನೆ ಬಿ 11 ಅಡಿ ಸಲ್ಲಿಕೆ ಆಗಿರುವ 82,640 ಅರ್ಜಿಗಳಲ್ಲಿ 18,011 ಅರ್ಜಿಗಳು ನಾನಾ ಹಂತದಲ್ಲಿ ಬಾಕಿ ಇದ್ದು, ಇದನ್ನು ತ್ವರಿತಗೊಳಿಸಿ.**
**- ಪ್ರಿಯಾಂಕ್ ಖರ್ಗೆ ಸಚಿವ**

ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಇಲಾಖೆಯು ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯದ ಸಹಯೋಗದೊಂದಿಗೆ ಇ-ಸ್ವತ್ತು ಅರ್ಜಿಗಳನ್ನು ಗ್ರಾಮ ಒನ್, ಕರ್ನಾಟಕ ಒನ್ ಹಾಗೂ ಬೆಂಗಳೂರು ಒನ್ ಕೇಂದ್ರಗಳ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ, ಎಂದು ಹೇಳಿದ್ದಾರೆ.

### ತಂತ್ರಾಂಶದಲ್ಲಿ ಬದಲಾವಣೆ ಮಾಡಿದ್ದರಿಂದ ಪರಿಹಾರ

- **1 ) ಹೊಸ ಬಡಾವಣೆಗಳಿಗೆ ಅರ್ಜಿ ಸಲ್ಲಿಸಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ. ಈವರೆಗೆ 2,238 ಹೊಸ ಬಡಾವಣೆಗಳಿಗೆ ಅರ್ಜಿ ಸಲ್ಲಿಕೆಯಾಗಿದ್ದು, 998 ಹೊಸ ಬಡಾವಣೆಗಳಿಗೆ ಗ್ರಾಮ ಪಂಚಾಯತಿ ಹಂತದಲ್ಲಿ ಅನುಮೋದನೆ**
- **2) ನಮೂನೆ-11ಬಿ ಖಾತೆಗಳನ್ನು ನಮೂನೆ-11ಎ ಖಾತೆಗಳಾಗಿ ಪರಿವರ್ತಿಸಲು ಗ್ರಾಮ ಪಂಚಾಯತಿ ಹಂತದಲ್ಲಿ ಅವಕಾಶ**
- **3) ಹೊಸ ಬಹುಮಹಡಿಗಳಿಗೆ (ಅಪಾರ್ಟ್‌ಮೆಂಟ್) ಅರ್ಜಿ ಸಲ್ಲಿಸಲು ಗ್ರಾಮ ಪಂಚಾಯತಿ ಹಂತದಲ್ಲಿ ಅವಕಾಶ**
- **4) ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್ಫೇಸ್ ನಿಂದ ಗುಂಟೆ ಮತ್ತು ಸೆಂಟ್ಸ್‌ನಲ್ಲಿರುವ ವಿಸ್ತೀರ್ಣವನ್ನು ಚ ಮೀ.ನಲ್ಲಿ ಪರಿವರ್ತಿಸಿ ಅರ್ಜಿ ಸಲ್ಲಿಸಲು ಅವಕಾಶ**
- **5)ಸಿಟಿಜನ್ ಇಂಟರ್ಫೇಸ್ ಮೂಲಕ ಋಣಭಾರ ಪ್ರಮಾಣಪತ್ರಗಳನ್ನು ಸಲ್ಲಿಸಲು ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆ ಇತ್ಯರ್ಥ**
- **6)ಸಿಟಿಜನ್ ಇಂಟರ್ಫೇಸ್‌ನಿಂದ ಅರ್ಜಿ ಸೇವ್ ಮಾಡಲು ಉಂಟಾಗುತ್ತಿದ್ದ ತಾಂತ್ರಿಕ ಸಮಸ್ಯೆ ಇತ್ಯರ್ಥ**
- **7)ಸಿಟಿಜನ್ ಇಂಟರ್ಫೇಸ್ ನಿಂದ ಇ-ಖಾತಾಗಳನ್ನು ಡೌನ್ಲೋಡ್ ಮಾಡಿಕೊಳ್ಳಲು ಇದ್ದ ತಾಂತ್ರಿಕ ಸಮಸ್ಯೆಗೆ ಪರಿಹಾರ**

5 ಸಾವಿರಕ್ಕೂ ಹೆಚ್ಚು ಮೃತ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಗೃಹಲಕ್ಷ್ಮಿ ಹಣ ಜಮೆ

# 'ಗೃಹಲಕ್ಷ್ಮಿ' ಯೋಜನೆಯಡಿ ದೊಡ್ಡ ಮಟ್ಟದ ತಾಂತ್ರಿಕ ಲೋಪ

• ಉದಯವಾಹಿನಿ, ಮೈಸೂರು

ರಾಜ್ಯ ಸರಕಾರದ ಗ್ಯಾರಂಟಿ ಯೋಜನೆಗಳಲ್ಲಿ ಪ್ರಮುಖವಾದ ಗೃಹಲಕ್ಷ್ಮಿ ಯೋಜನೆಯಲ್ಲಿ ಗಂಭೀರ ಲೋಪವೊಂದು ಬೆಳಕಿಗೆ ಬಂದಿದೆ. ಮೈಸೂರು ಜಿಲ್ಲೆಯಲ್ಲಿ ಐದು ಸಾವಿರಕ್ಕೂ ಹೆಚ್ಚು ಮೃತ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಹಣ ಜಮೆಯಾಗಿರುವುದು ಪರಿಶೀಲನೆಯಲ್ಲಿ ಪತ್ತೆಯಾಗಿದೆ. ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 6.73 ಲಕ್ಷಕ್ಕೂ ಹೆಚ್ಚು ಮಹಿಳೆಯರು ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಾಗಿದ್ದಾರೆ.

ಈ ಯೋಜನೆಯಡಿ ನೋಂದಾಯಿಸಿಕೊಂಡ ಬಳಿಕ ಮೃತಪಟ್ಟವರ ಸಂಖ್ಯೆ 13,437 ಆಗಿದ್ದು, ಇವರಲ್ಲಿ 5,851 ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ಮರಣಾನಂತರವೂ ಹಣ ಜಮೆಯಾಗಿರುವುದು ಬೆಳಕಿಗೆ ಬಂದಿದೆ. ಪ್ರತಿ ತಿಂಗಳು 2,000ರಂತೆ ಒಟ್ಟು 6.35 ಕೋಟಿ ಹಣ ಮೃತರ ಖಾತೆಗಳಿಗೆ ಸಂದಾಯವಾಗಿದೆ.

**ಯೋಜನೆಯ ಉದ್ದೇಶ:** ಮಹಿಳೆಯರ ಆರ್ಥಿಕ ಸಬಲೀಕರಣದ ಉದ್ದೇಶದಿಂದ ರಾಜ್ಯ ಸರಕಾರವು 2023 ರ ಜೂನ್‌ನಲ್ಲಿ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯನ್ನು ಆರಂಭಿಸಿ, ಪ್ರತಿ ತಿಂಗಳು ಎರಡು ಸಾವಿರ ರೂ. ನೀಡುತ್ತಿದೆ. ಮಹಿಳೆಯರೊಂದಿಗೆ ಇತ್ತೀಚೆಗೆ ಲಿಂಗತ್ವ ಅಲ್ಪಸಂಖ್ಯಾತರಿಗೂ ಯೋಜನೆಯನ್ನು ವಿಸ್ತರಿಸಿ, ಗೃಹಲಕ್ಷ್ಮಿ ಹಣ ಸಿಗುವಂತೆ ಮಾಡಲಾಗಿದೆ. ನೋಂದಣಿಯಾದ ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣವನ್ನು ಡಿಬಿಟಿ ಮೂಲಕ ನೇರವಾಗಿ ವರ್ಗಾವಣೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಜನವರಿವರೆಗೆ ಮಹಿಳೆಯರ ಖಾತೆಗೆ 2,000 ರೂ.ಗಳಂತೆ ಬರೋಬರಿ 3,096 ಕೋಟಿ ರೂ. ಡಿಬಿಟಿ ಮೂಲಕ ಸಂದಾಯ ಮಾಡಲಾಗಿದೆ. ಈ ಪೈಕಿ ಯೋಜನೆಯಡಿ ಪಾವತಿಯಾಗುವ ಮೊತ್ತವು ಮರಣ ಹೊಂದಿರುವ ಫಲಾನುಭವಿಗಳಿಗೆ ಕೆಲವು ಕಡೆ ಪಾವತಿಯಾಗುತ್ತಿದೆ.




**ಸಮೀಕ್ಷೆ ಮೂಲಕ ಪತ್ತೆ**

**ಮೃತರಿಗೂ ಗೃಹಲಕ್ಷ್ಮಿ ಹಣ ಜಮೆಯಾಗುತ್ತಿರುವ ಬಗ್ಗೆ ಮಾಹಿತಿ ಬಂದ ಹಿನ್ನೆಲೆಯಲ್ಲಿ ಸಮೀಕ್ಷೆ ನಡೆಸಿ ಅಂತಹ ಬ್ಯಾಂಕ್ ಖಾತೆಗಳನ್ನು ಪತ್ತೆ ಮಾಡಲಾಗಿದ್ದು, ಹಣವನ್ನು ವಾಪಸ್ ಪಡೆಯಲು ತೀರ್ಮಾನಿಸಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಈ ಕುರಿತು ಬ್ಯಾಂಕ್ ಅಧಿಕಾಕಾರಿಗಳೊಂದಿಗೆ ಸಂಪರ್ಕ ಮಾಡಿದ್ದು, ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ.**

**ಹಣ ವಾಪಸ್‌ಗೆ ಕ್ರಮ**

**ಗೃಹಲಕ್ಷ್ಮಿ ಯೋಜನೆಯ ಫಲಾನುಭವಿ ಮೃತಪಟ್ಟ ಮಾಹಿತಿಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗೆ (ಸಿಡಿಪಿಒ) ನೀಡುವಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ನಿರ್ದೇಶಿಸಲಾಗಿದೆ. ಪ್ರತಿ ತಿಂಗಳು ಫಲಾನುಭವಿಗಳ ಪಟ್ಟಿ ಪರಿಶೀಲಿಸಿ ಮೃತರ ಖಾತೆಗೆ ಹಣ ಜಮೆ ಆಗದಂತೆ ಎಚ್ಚರ ವಹಿಸಲು ಬ್ಯಾಂಕ್‌ಗಳಿಗೆ ನಿರ್ದೇಶಿಸಲಾಗುತ್ತಿದೆ.**


**– ಬಸವರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ ಇಲಾಖೆಯ ಉಪ ನಿರ್ದೇಶಕ**

ಯೋಜನೆಯ ಫಲಾನುಭವಿಗಳು ಮೃತಪಟ್ಟ ಪ್ರಕರಣಗಳಲ್ಲಿ ಕುಟುಂಬದವರು ಮಾಹಿತಿ ನೀಡದ್ದರಿಂದ ಅವರ ಖಾತೆಗೆ ಜಮೆ ಆಗಿದೆ. ಆ ಹಣ ಹಿಂಪಡೆಯುವ ಪ್ರಕ್ರಿಯೆ ನಡೆದಿದ್ದು, ಜಿಲ್ಲೆಯಲ್ಲಿ ಅಂದಾಜು 10 ಲಕ್ಷ ರೂ. ಹಣವನ್ನು ಬ್ಯಾಂಕ್ ಖಾತೆಯಿಂದ ವಾಪಸ್ ಪಡೆದುಕೊಳ್ಳಲಾಗಿದೆ ಎನ್ನುತ್ತಾರೆ ಇಲಾಖೆಯ ಅಧಿಕಾಕಾರಿಗಳು. ಗೃಹಲಕ್ಷ್ಮಿ ಯೋಜನೆಯಂತಹ ಮಹತ್ವದ ಯೋಜನೆಗಳಲ್ಲಿ ಮಾಹಿತಿ ವಿನಿಮಯದ ಕೊರತೆ, ಪರಿಶೀಲನಾ ಲೋಪದಿಂದ ಕೋಟ್ಯಂತರ ರೂ. ಅನರ್ಹರಿಗೆ ಹೋಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಮುಂದಿನ ದಿನಗಳಲ್ಲಿಇಂತಹ ತಪ್ಪುಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದೆ.

## ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಪರಿಶೀಲನೆ

• ಉದಯವಾಹಿನಿ, ಮಳವಳ್ಳಿ

ಪಟ್ಟಣದ ಹಲವು ಡಯಾಗ್ನಾಸ್ಟಿಕ್ ಸೆಂಟರ್ ಗಳಿಗೆ ತಹಶೀಲ್ದಾರ್ ಎಸ್.ವಿ.ಲೋಕೇಶ್ ಮತ್ತು ತಾಲ್ಲೂಕು ವೈದ್ಯಾಧಿಕಾರಿ ಡಾ.ಪಿ.ವೀರಭದ್ರಪ್ಪ ನೇತೃತ್ವದ ತಂಡ ಅನಿರೀಕ್ಷಿತ ಭೇಟಿ ನೀಡಿ ಸ್ಕ್ಯಾನಿಂಗ್ ಸೆಂಟರ್‌ಗಳ ದಾಖಲೆ ಪರಿಶೀಲನೆ ನಡೆಸಿದರು. ಸ್ಕ್ಯಾನಿಂಗ್ ಮಾಡಿಸಿರುವ ಗರ್ಭಿಣಿಯರ ದಾಖಲೆಗಳು ಮತ್ತು ಫಾರಂಗಳನ್ನು ಪರಿಶೀಲನೆ ನಡೆಸಿ, ಭ್ರೂಣ ಲಿಂಗ ಪತ್ತೆ ನಿಷೇಧ ಕಾಯ್ದೆಯನ್ನು ಸಮರ್ಪಕವಾಗಿ ಜಾರಿ ಮತ್ತು ಅನುಷ್ಠಾನಗೊಳಿಸಲು ಸಲಹೆ ಸೂಚನೆಗಳನ್ನು ನೀಡಿದ ತಂಡ ಗರ್ಭಿಣಿ ಹಾಗೂ ಪೋಷಕರಿಗೆ ಜಾಗೃತಿ ಮೂಡಿಸಲು, ಲಿಂಗ ಪತ್ತೆ ಕಾನೂನೂಬಾಹಿರ ಎಂಬ ಜಾಗೃತಿ ಫಲಕಗಳನ್ನು ದೊಡ್ಡ ಗಾತ್ರದಲ್ಲಿ ಪ್ರದರ್ಶನ ಮಾಡಲು ಸೂಚಿಸಿದರು.


ಉದಯವಾಹಿನಿ ಚಿತ್ರ

ತಹಶೀಲ್ದಾರ್ ಎಸ್.ವಿ. ಲೋಕೇಶ್ ಮಾತನಾಡಿ, ಡಿಸಿ ಸೂಚನೆಯಂತೆ ಸ್ಕ್ಯಾನಿಂಗ್ ಸೆಂಟರ್‌ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗಿದ್ದು, ಲೋಪದೋಷಗಳು ಕಂಡುಬಂದಿಲ್ಲ. ಆದರೆ ಜಾಗೃತಿ ವಹಿಸಲು ಸೂಚಿಸಲಾಗಿದೆ.

18 ವರ್ಷದೊಳಗಿನವರು ಸ್ಕ್ಯಾನಿಂಗ್‌ಗೆ ಬಂದಿದ್ದರೆ ಪೋಕ್ಸೋ ಕಾಯ್ದೆ ಪ್ರಕಾರ ಸ್ಥಳೀಯ ಪೊಲೀಸ್ ಠಾಣೆ, ತಾಲ್ಲೂಕು ವೈದ್ಯಾಧಿಕಾರಿಗೆ ಮಾಹಿತಿ ನೀಡಬೇಕು' ಎಂದು ತಿಳಿಸಲಾಗಿದೆ ಎಂದರು. ಕಾನೂನು ಉಲ್ಲಂಘನೆ ಮಾಡುವ ಸ್ಕ್ಯಾನಿಂಗ್ ಸೆಂಟರ್ ವಿರುದ್ಧ ಕಠಿಣ ಕ್ರಮಕ್ಕೆ ವರದಿ ನೀಡಲಾಗುವುದು. ಭ್ರೂಣ ಲಿಂಗ ಪತ್ತೆ, ಭ್ರೂಣ ಹತ್ಯೆಯಂಥ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂದು ಹೇಳಿದರು. ತಾಲ್ಲೂಕು ವೈದ್ಯಾಧಿಕಾರಿ ಡಾ.ಪಿ.ವೀರಭದ್ರಪ್ಪ ಮಾತನಾಡಿ, ಪಟ್ಟಣದಲ್ಲಿ ಐದು ಹಾಗೂ ಹಲಗೂರಿನಲ್ಲಿ ಎರಡು ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳಿದ್ದು ಎಲ್ಲೆಡೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾರ್ಗಸೂಚಿಗಳನ್ನು ನೀಡಲಾಗಿದೆ' ಎಂದು ಹೇಳಿದರು. ಸಾರ್ವಜನಿಕ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಎಂ.ಡಿ.ಸಂಜಯ್, ಸಿಬ್ಬಂದಿ ಪಾಲ್ಗೊಂಡಿದ್ದರು.

## ಮಿನಿ ನ್ಯೂಸ್

### ಮನೆಗಳ್ಳತನ ಪ್ರಕರಣ ಭೇದಿಸಿದ ಪೊಲೀಸರು ಇಬ್ಬರು ಆರೋಪಿಗಳ ಬಂಧನ

• ಉದಯವಾಹಿನಿ, ಗುಂಡ್ಲುಪೇಟೆ

ಮನೆಗಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನ ಗುಂಡ್ಲುಪೇಟೆ ಪೊಲೀಸರು ವಶಕ್ಕೆ ಪಡೆದು ಎರಡು ದ್ವಿಚಕ್ರವಾಹನ ಸೇರಿದಂತೆ ಕಳವು ಮಾಡಿದ್ದ ಚಿನ್ನಾಭರಣಗಳನ್ನ ಜಪ್ತಿ ಮಾಡಿದ್ದಾರೆ. ತಾಲ್ಲೂಕಿನ ಮಾಡ್ರಹಳ್ಳಿ ಗ್ರಾಮದ ಶಿವಸ್ವಾಮಿ ಹಾಗೂ ಚಂದ್ರು ಎಂಬ ಆರೋಪಿಗಳನ್ನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

**ಘಟನಾ ವಿವರ :** ಕಳೆದ ಮಾರ್ಚ್ ತಿಂಗಳಿನಲ್ಲಿ ಪಟ್ಟಣ ನಿವಾಸಿ ಮಹದೇವಪ್ಪ ಹಾಗೂ ಕುಟುಂಬ ಸದಸ್ಯರು ವಿವಾಹ ಕಾರ್ಯಕ್ರಮಕ್ಕೆ ತೆರಳಿದ್ದನ್ನೆ ಬಂಡವಾಳವಾಗಿಸಿಕೊಂಡ ಖದೀಮರು ಮನೆಯ ಬಾಗಿಲು ಮೀಟಿ ಬೀರುವಿನಲ್ಲಿದ್ದ 10 ಗ್ರಾಮ್ ತೂಕದ ಚಿನ್ನದ ಚೈನ್, 07 ಗ್ರಾಂ ಕಿವಿಯೋಲೆ, 4 ಗ್ರಾಂ ತೂಕದ ಎರಡು ಸಣ್ಣ ಉಂಗುರ ಹಾಗೂ 52 ಸಾವಿರ ಹಣ ಕಳ್ಳತನವಾಗಿರುವ ಕುರಿತಾಗಿ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್ ಅವರ ನಿರ್ದೇಶನದ ಮೇರೆಗೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್ ರವರ ಮೇಲ್ವಿಚಾರಣೆಯಲ್ಲಿ ಡಿವೈಎಸ್ಪಿ ನೇತೃತ್ವದಲ್ಲಿ ತನಿಖೆ ಆರಂಭಿಸಿದ ಪಿಐ ಜೈ ಕುಮಾರ್ , ಸಬ್ ಇನ್‌ಸ್ಪೆಕ್ಟರ್ ನರೇಶ್ ಕುಮಾರ್, ತಂಡ ಮಾಡ್ರಹಳ್ಳಿ ಗ್ರಾಮದ ಚಂದ್ರು, ಶಿವಸ್ವಾಮಿ ಎಂಬವರನ್ನ ವಶಕ್ಕೆ ಪಡೆದು ವಿಚಾರಣೆ ನಡೆಸಿದ ವೇಳೆ ಕಳ್ಳತನ ಮಾಡಿರುವ ಕುರಿತು ಒಪ್ಪಿಕೊಂಡ ಬಳಿಕ ಚಿನ್ನಾಭರಣ, ಎರಡು ದ್ವಿಚಕ್ರವಾಹನಗಳನ್ನ ಪೊಲೀಸರ ವಶಕ್ಕೆ ನೀಡಿದ್ದಾರೆ. ಪ್ರಕರಣ ಭೇದಿಸಿದ ತಂಡದ ಸಿಬ್ಬಂದಿಗಳಾದ ಕಿಶೋರ್, ಶಿವರಾಜು, ಬಂಟಪ್ಪ, ಮಹೇಶ್ ಅವರಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

## ಜೆಜೆಎಂ; ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಹಿಂದೆಂದೂ ಕಂಡರಿಯದ ರೀತಿಯಲ್ಲಿ ಬಿಸಿಲಿನ ತಾಪ ಹೆಚ್ಚಾಗಿದೆ. ಬಿಸಿ ಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಆರೋಗ್ಯ ಇಲಾಖೆಯವರು ಕಾಲಕಾಲಕ್ಕೆ ನೀಡಲಿರುವ ಮಾರ್ಗಸೂಚಿಗಳನ್ನು ಸಾರ್ವಜನಿಕರು ಪಾಲಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ. ಸುಧಾಕರ್ ತಿಳಿಸಿದರು.


ಉದಯವಾಹಿನಿ ಚಿತ್ರ

ಇಲ್ಲಿನ ಜಿಲ್ಲಾ ಪಂಚಾಯಿತಿ ಸರ್.ಎಂ.ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಗುರುವಾರ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲಿಸಿ ಅವರು ಮಾತನಾಡಿದರು. ಹವಾಮಾನ ಇಲಾಖೆಯ ಪ್ರಕಾರ ರಾಜ್ಯದಲ್ಲಿ ಈ ವರ್ಷ ವಾಡಿಕೆ ಮಳೆಗಿಂತ ಕಡಿಮೆ ಪ್ರಮಾಣದ ಮಳೆ ಆಗಲಿದೆ. ಜಿಲ್ಲೆಯಲ್ಲಿ ವಾಡಿಕೆ ಮಳೆ ಆಗಬಹುದು ಎಂದು ಅಭಿಪ್ರಾಯಪಟ್ಟಿದೆ. ಮಳೆಯ ವೈಪರೀತ್ಯಗಳು ಏನೇ ಆದರೂ ನೀರು ಪೂರೈಕೆ ಹಾಗೂ ಇನ್ನಿತರ ಮುನ್ನೆಚ್ಚರಿಕೆ ಕ್ರಮಗಳನ್ನು ಜಿಲ್ಲಾಡಳಿತ ಕೈಗೊಳ್ಳಬೇಕು ಎಂದು ಸೂಚಿಸಿದರು.

ಜಲಜೀವನ್ ಮಿಷನ್ ಯೋಜನೆಯಡಿ ಜಿಲ್ಲೆಯಲ್ಲಿ ಕೊರೆದಿರುವ 313 ಕೊಳವೆ ಬಾವಿಗಳಿಗೆ ಒಂದೆರಡು ದಿನಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿ ಜನರಿಗೆ ನೀರು ಪೂರೈಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಕುಡಿಯುವ ನೀರಿನ ಪೂರೈಕೆಯ ತುರ್ತು ಕ್ರಮಕ್ಕಾಗಿ ರಾಜ್ಯ ಸರ್ಕಾರ 1.5 ಕೋಟಿಯನ್ನು ಜಿಲ್ಲೆಗೆ ಬಿಡುಗಡೆ ಮಾಡಿದೆ ಎಂದು ಹೇಳಿದರು. ಕುಡಿಯುವ ನೀರಿನ ಉದ್ದೇಶಕ್ಕಾಗಿ ಅಗತ್ಯಕ್ಕೆ ತಕ್ಕಂತೆ ಅನುದಾನ ಬಿಡುಗಡೆ ಮಾಡುವುದಾಗಿ ಸಿಎಂ ತಿಳಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಚಿಕ್ಕಬಳ್ಳಾಪುರ ನಗರಕ್ಕೆ ಹೊಂದಿಕೊಂಡಿರುವ ಕಂದವಾರ ಮತ್ತು ಗೋಪಾಲಕೃಷ್ಣ ಅಮಾನಿಕರೆಗೆ ನಗರದ ಚರಂಡಿ ನೀರು ಸೇರುತ್ತಿರುವುದು ಗಮನಕ್ಕೆ ಬಂದಿದೆ. ಇದನ್ನು ತಡೆಯಲು ಚಿಕ್ಕಬಳ್ಳಾಪುರ ನಗರಕ್ಕೆ ಪೂರ್ಣಪ್ರಮಾಣದಲ್ಲಿ ಒಳಚರಂಡಿ ವ್ಯವಸ್ಥೆ ನಿರ್ಮಿಸಲು 30 ಕೋಟಿ ಅನುದಾನ ಬಿಡುಗಡೆಯಾಗಿದೆ. ಈ ಕಾರ್ಯ ಟೆಂಡರ್ ಹಂತದಲ್ಲಿದೆ ಎಂದು ಮಾಹಿತಿ ನೀಡಿದರು. ಫೆಬ್ರುವರಿಯಲ್ಲಿ 12, ಮಾರ್ಚ್‌ನಲ್ಲಿ 23 ಗ್ರಾಮಗಳು, ಪ್ರಸ್ತುತ 31 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ ಖಾಸಗಿ ಕೊಳವೆ ಬಾವಿ ಮಾಲೀಕರ ಸಹಕಾರ ಪಡೆದು ನೀರು ಪೂರೈಸಲಾಗುತ್ತಿದೆ. ಮುಂದಿನ ದಿನಗಳಲ್ಲಿ 108 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು ಗುರ್ತಿಸಲಾಗಿದೆ. ಅದಕ್ಕೆ ತಕ್ಕಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

## ವಿವಿಧ ಬೇಡಿಕೆ ಈಡೇರಿಕೆಗಾಗಿ ಅರಣ್ಯ ಇಲಾಖೆ ಹಂಗಾಮಿ ನೌಕರರ ಮುಷ್ಕರ

• ಉದಯವಾಹಿನಿ, ಗುಂಡ್ಲುಪೇಟೆ

ಹೊರಗುತ್ತಿಗೆ ರದ್ದುಪಡಿಸಿ ಅರಣ್ಯ ಇಲಾಖೆಯಿಂದಲೇ ವೇತನ ನೀಡುವುದು, ಸೇವಾ ಭದ್ರತೆ ಒದಗಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಬೇಸಿಗೆ ಹೊತ್ತಲ್ಲೇ ಅರಣ್ಯ ಇಲಾಖೆಯ ವನ್ಯಜೀವಿ ವಿಭಾಗದ ಹಂಗಾಮಿ ನೌಕರರು ತಾಲ್ಲೂಕಿನ ಬಂಡೀಪುರದ ಸಫಾರಿ ಕೇಂದ್ರದ ಆವರಣದಲ್ಲಿ ಮುಷ್ಕರ ಆರಂಭಿಸಿದ್ದಾರೆ.

ತಾಲ್ಲೂಕಿನ ಬಂಡೀಪುರದ ಮೇಲುಕಾಮನಹಳ್ಳಿ ಸಫಾರಿ ಕೇಂದ್ರದ ಮುಂದೆ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ಎ.ಎಂ. ನಾಗರಾಜು ನೇತೃತ್ವದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ 500 ಕ್ಕೂ ಅಧಿಕ ನೌಕರರು ಪ್ರತಿಭಟನೆ ನಡೆಸಿ, ಸರ್ಕಾರ ಮತ್ತು ಅರಣ್ಯ ಇಲಾಖೆ ವಿರುದ್ಧ ಅಸಮಾಧಾನ ಹೊರ ಹಾಕಿ, ಬೇಡಿಕೆ ಈಡೇರಿಸಲು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ವನ್ಯಜೀವಿ ಘಟಕಗಳ ದಿನಗೂಲಿ ಅಧ್ಯಕ್ಷ ನಾಗರಾಜು ಮಾತನಾಡಿ, ರಾಜ್ಯದಲ್ಲಿ ವನ್ಯಜೀವಿ, ಪ್ರಾದೇಶಿಕ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸುತ್ತಿರುವ 4,000 ಕ್ಕೂ ಅಧಿಕ ಹಂಗಾಮಿ ನೌಕರರು ಕಳೆದ ನವೆಂಬರ್‌ನಲ್ಲಿ ಪ್ರತಿಭಟನೆ ನಡೆಸಿದ್ದರು. ಆಗ ನೌಕರರ ಬೇಡಿಕೆಗಳನ್ನು ಈಡೇರಿಸುವ ಭರವಸೆಯನ್ನು ಸರ್ಕಾರ ನೀಡಿತ್ತು. ಆದರೆ, ಇದುವರೆಗೂ ಸರ್ಕಾರದಿಂದ ಸ್ಪಂದನೆ ಸಿಕ್ಕಿಲ್ಲ ಎಂದು ದೂರಿದರು.



ಉದಯವಾಹಿನಿ ಚಿತ್ರ

ಅರಣ್ಯ ಸಚಿವ ಈಶ್ವರ್ ಖಂಡ್ರೆ ಬೇಡಿಕೆ ಈಡೇರಿಸಲು ಸ್ಪಂದಿಸಿದರೂ ಹಿರಿಯ ಅಧಿಕಾರಿಗಳು ಇದಕ್ಕೆ ಪೂರಕವಾಗಿ ಸ್ಪಂದಿಸುತ್ತಿಲ್ಲ. ಈ ಹಿಂದೆ ಎರಡು ಬಾರಿ ಪ್ರತಿಭಟನೆ ನಡೆಸಿದರೂ ಬರೀ ಭರವಸೆ ಬಿಟ್ಟರೆ ಏನೂ ಬದಲಾವಣೆ ಆಗಿಲ್ಲ. ಸರ್ಕಾರದಿಂದ ಲಿಖಿತ ಭರವಸೆ ಸಿಗುವವರೆಗೂ ಈ ಬಾರಿ ಮುಷ್ಕರ ನಿಲ್ಲಿಸಲ್ಲ ಎಂದು ಎಚ್ಚರಿಸಿದ್ದಾರೆ.

ಮೊದಲು ಕ್ಷೇಮಾಭಿವೃದ್ಧಿ ಅಧಿನಿಯಮದಡಿ ಹಂಗಾಮಿ ನೌಕರರಿಗೆ ವೇತನ ಹಾಗೂ ಸೌಲಭ್ಯ ನೀಡಲಾಗುತ್ತಿತ್ತು. 2017ರಲ್ಲಿ ಅದನ್ನು ಬದಲಾಯಿಸಿ ಟೆಂಡರ್ ಮೂಲಕ ಏಜೆನ್ಸಿಗಳಿಂದ ವೇತನ ನೀಡಲಾಗುತ್ತಿದೆ. ಇದರಿಂದ ಸರಿಯಾಗಿ ವೇತನವೂ ಸಿಗುತ್ತಿಲ್ಲ. ಸೌಲಭ್ಯಗಳನ್ನು ಪಡೆಯುವುದು ಕಷ್ಟವಾಗಿದೆ. ಹೀಗಾಗಿ, ಇದನ್ನು ಬದಲಾಯಿಸಿ ಎಂಬುದು ಪ್ರಮುಖ ಬೇಡಿಕೆಯಾಗಿದೆ. ಏ. 1 ರಿಂದ ಮುಂದಿನ ಒಂದು ವರ್ಷದ ಗುತ್ತಿಗೆ ಕರಾರಿಗೆ ತಯಾರಿ ಮಾಡಿಕೊಳ್ಳಲಾಗುತ್ತಿದೆ ಇದು ಜಾರಿಯಾದರೆ ನಮ್ಮ ಪ್ರಮುಖ ಸಮಸ್ಯೆ ಬಗೆಹರಿಯುವುದಿಲ್ಲ. ಈಗಲೇ ಸೂಕ್ತ ತೀರ್ಮಾನ ಆಗಬೇಕು ಒತ್ತಾಯಿಸಿದರು. ಬೇಸಿಗೆ ವೇಳೆ ಏನಾದರೂ ಅನಾಹುತ ಅರಣ್ಯದ ಹೊರಗೆ ಹಾಗೂ ಒಳಗೆ ಆದರೆ ಅದಕ್ಕೆ ಹಿರಿಯ ಅಧಿಕಾರಿಗಳೇ ಕಾರಣರಾಗುತ್ತಾರೆ ಎಂದು ಇದೇ ವೇಳೆ ನೌಕರರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಪ್ರತಿಭಟನಾನಿರತರು ಬಂಡೀಪುರ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾಕರ್ ಅವರಿಗೆ ಮನವಿ ಸಲ್ಲಿಸಿದರು . ಮುಷ್ಕರದಲ್ಲಿ ಸಂಘದ ಉಪಾಧ್ಯಕ್ಷ ಎಸ್.ಎಸ್.ಹರೀಶ್ ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ 500ಕ್ಕೂ ಅಧಿಕ ವನ್ಯಜೀವಿ ವಿಭಾಗದ ಹಂಗಾಮಿ ನೌಕರರು ಭಾಗವಹಿಸಿದ್ದರು.

### ಬಿರುಗಾಳಿ ಮಳೆಗೆ ಬಾಳೆ ಬೆಳೆ ನಾಶ : ಸಂಕಷ್ಟದಲ್ಲಿ ಬೊಮ್ಮಲಾಪುರ ರೈತರು

• ಉದಯವಾಹಿನಿ, ಗುಂಡ್ಲುಪೇಟೆ

ಬಿರುಗಾಳಿ ಮಳೆಗೆ ಹಲವು ಮಂದಿ ರೈತರ ಬಾಳೆ ಗಿಡಗಳು ನೆಲಕಚ್ಚಿರುವ, ಸುಮಾರು 10 ಎಕರೆ ಅಧಿಕ ಫಸಲು ನಾಶವಾಗಿರುವ ಘಟನೆ ತಾಲ್ಲೂಕಿನ ಬೊಮ್ಮಲಾಪುರ ಗ್ರಾಮದಲ್ಲಿ ನಡೆದಿದೆ. ತಾಲ್ಲೂಕಿನ ಬೊಮ್ಮಲಾಪುರ ಗ್ರಾಮದ ರಾಜಪ್ಪ ಎಂಬ ರೈತ ಒಂದು ಎಕರೆ ಬಾಳೆ ಫಸಲು, ಬಸವರಾಜು ಎಂಬುವವರ ಎರಡು ಎಕರೆ, ಗುರುಸ್ವಾಮಿ ಎಂಬ ರೈತ ಒಂದೂವರೆ ಎಕರೆ, ರವಿ ಎಂಬುವವರ ಅರ್ಧ ಎಕರೆ, ನಾಗೇಂದ್ರ ಎಂಬ ರೈತನ ಒಂದು ಎಕರೆ ಸೇರಿದಂತೆ ಇನ್ನೂ ಹಲವು ಮಂದಿ ರೈತರು ಸುಮಾರು 10 ಎಕರೆಗೂ ಅಧಿಕ ಬಾಳೆ ಬೆಳೆ ಬಿರುಗಾಳಿ ಮಳೆಗೆ ನೆಲ ಸಮಗೊಂಡಿದೆ. ಬೆಳೆ ಕಟಾವಿಗೆ ಬರುವ ಹಂತದಲ್ಲಿದ್ದ ಸಂದರ್ಭದಲ್ಲಿ ಗಾಳಿಯ ರಭಸಕ್ಕೆ ಸುಮಾರು 3 ಸಾವಿರಕ್ಕೂ ಹೆಚ್ಚು ಬಾಳೆ ಗಿಡಗಳು ನೆಲಕ್ಕುರುಳಿರುವ ಹಿನ್ನಲೆ ರೈತರಿಗೆ ಲಕ್ಷಾಂತರ ರೂ. ನಷ್ಟ ಉಂಟಾಗಿದೆ. ಸಾಲ ಮಾಡಿ ಬಾಳೆ ಫಸಲು ಬೆಳೆದಿದ್ದೆವು. ಇನ್ನೇನು ಬೆಳೆ ಕೈಗೆ ಬರಬೇಕಿತ್ತು. ಅಷ್ಟರಲ್ಲೇ ಪ್ರಕೃತಿ ಮುನಿದು ಎಲ್ಲವನ್ನೂ ಮಣ್ಣುಪಾಲು ಮಾಡಿದೆ ಎಂದು ರೈತ ಅಸಮಾಧಾನ ಹೊರ ಹಾಕಿದ್ದು, ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಸಂತ್ರಸ್ತ ರೈತ ರಾಜಪ್ಪ ಮನವಿ ಮಾಡಿದ್ದಾರೆ.

**ಸೂಕ್ತ ಪರಿಹಾರಕ್ಕೆ ಒತ್ತಾಯ:** ಬೊಮ್ಮಲಾಪುರ ಭಾಗದಲ್ಲಿ ಗಾಳಿಯ ವೇಗ ಹೆಚ್ಚಾಗಿದ್ದರಿಂದ ಬಾಳೆ ಬೆಳೆಗಾರರು ತತ್ತರಿಸಿ ಹೋಗಿದ್ದಾರೆ. ಕೃಷಿ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ, ಬೆಳೆ ಹಾನಿಯ ವರದಿ ಸಿದ್ಧಪಡಿಸಿ ಶೀಘ್ರವಾಗಿ ಸೂಕ್ತ ಪರಿಹಾರ ಒದಗಿಸಬೇಕೆಂದು ಗ್ರಾಮಸ್ಥರು ಹಾಗೂ ರೈತರು ಒತ್ತಾಯಿಸಿದ್ದಾರೆ.

ಉದಯವಾಹಿನಿ ಚಿತ್ರ


## ವಿವಿಧೆಡೆ ಮಳೆ; ಕೆಲವೆಡೆ ಹಾನಿ

• ಉದಯವಾಹಿನಿ, ಬಿಡದಿ

ಬಿಸಿಲ ಧಗೆಯಿಂದ ಬಳಲಿದ್ದ ಜಿಲ್ಲೆಗೆ ಮಳೆಯು ಬುಧವಾರ ಭರ್ಜರಿ ಓಪನಿಂಗ್ ನೀಡಿತು. ಮಳೆ ಇಲ್ಲದೆ ಆಗಸತ್ತ ಮುಖ ಮಾಡಿ ನಿಂತಿದ್ದ ರೈತರ ಮೊಗದಲ್ಲಿ ಸಂತಸ ಮೂಡಿತು. ಭಾರಿ ಗಾಳಿಯೊಂದಿಗೆ ಸಂಜೆ ಸುರಿದ ಮಳೆಯಿಂದಾಗಿ ವಿವಿಧೆಡೆ ಮರಗಳು ನೆಲಕ್ಕುರುಳಿವೆ. ಕೆಲವೆಡೆ ಮನೆಗಳಿಗೆ ಹಾನಿಯಾಗಿದೆ. ಸಂಜೆಯ 7ರ ಹೊತ್ತಿಗೆ ಮೋಡ ಆವರಿಸುತ್ತಿದ್ದಂತೆ ಭಾರಿ ಗಾಳಿ ಬೀಸತೊಡಗಿತು. ಕೆಲ ಹೊತ್ತಿನಲ್ಲೇ ಶುರುವಾದ ಮಳೆ ಸುಮಾರು 20 ನಿಮಿಷಕ್ಕೂ ಹೆಚ್ಚು ಹೊತ್ತು ಸುರಿಯಿತು.

ಜಿಲ್ಲಾ ಕೇಂದ್ರವಾದ ರಾಮನಗರ, ಕನಕಪುರ, ಚನ್ನಪಟ್ಟಣ ಹಾಗೂ ಮಾಗಡಿಯಲ್ಲಿ ಜೋರಾಗಿ ಸುರಿಯಿತು. ಹಾರೋಹಳ್ಳಿಯಲ್ಲಿ ಸಾಧಾರವಾಗಿ ಬಂತು. ಮಳೆ ಅಬ್ಬರಕ್ಕೆ ಬಿಡದಿ ಹೋಬಳಿಯ ಗಾಣಕಲ್ ಗ್ರಾಮದಲ್ಲಿ ಮರವೊಂದು ನೆಲಕ್ಕುರುಳಿತು. ಇದರಿಂದಾಗಿ ಪಕ್ಕದಲ್ಲಿದ್ದ ಸರ್ಕಾರಿ ಶಾಲೆಯ ಕಾಂಪೌಂಡ್ ನೆಲಕ್ಕುರುಳಿತಲ್ಲದೆ, ಮರದ ರೆಂಬಗಳು ಬಡಿದಿದ್ದರಿಂದ ಹೇಮಾ ಎಂಬುವವರ ಮನೆ ಜಖಂಗೊಂಡಿದೆ. ವಿದ್ಯುತ್ ಕಂಬವೂ ನೆಲ ಕಚ್ಚಿತು. ಮಳೆಯಿಂದಾಗಿ ಜಿಲ್ಲೆಯ ಕೆಲವೆಡೆ ಮನೆಗಳಿಗೆ ಹಾನಿಯಾಗಿದೆ. ಇತರ ಹಾನಿ ಕುರಿತು ನಾಳೆ ಮಾಹಿತಿ ಸಿಗಲಿದೆ ಎಂದು ಕಂದಾಯ ಇಲಾಖೆ ಅಧಿಕಾರಿಗಳು ತಿಳಿಸಿದರು.


ಉದಯವಾಹಿನಿ ಚಿತ್ರ

ಹೊರಕ್ಕೆ ಬರಲಾಗದಷ್ಟು ಬಿಸಿಲಿತ್ತು. ಬೆಳೆಗಳು ನೀರಿಲ್ಲದೆ ಒಣಗುವ ಸ್ಥಿತಿಗೆ ಬಂದಿವೆ. ಮಾವಿನ ಋತು ಈಗಾಗಲೇ ಶುರುವಾಗಿರುವುದರಿಂದ, ಯಾವಾಗ ಮಳೆ ಬರುತ್ತದೊ ಎಂದು ಕಾಯುತ್ತಿದ್ದೆವು. ತಡವಾಗಿಯಾದರೂ ಮಳೆ ಬಂದಿರುವುದು ಖುಷಿ ತಂದಿದೆ. ಆದರೆ, ಈ ಸಲ ಮಳೆ ಇಲ್ಲದ ಕಾರಣಕ್ಕೆ ಮಾವು ಸಂಪೂರ್ಣವಾಗಿ ಕೈ ಕೊಟ್ಟಿದೆ ಎಂದು ರಾಮನಗರ ರೈತ ಆದರ್ಶ್ ಸಂತಸದ ಜೊತೆಗೆ ಬೇಸರ ತೋಡಿಕೊಂಡರು.

ಕೆಲವು ತಿಂಗಳಿಂದ ಮಳೆ ಬೀಳದೆ, ಅತಿಯಾದ ಬಿಸಿಲಿನ ತಾಪದಿಂದ ತತ್ತರಗೊಂಡಿದ್ದ ಜನತೆಗೆ ಸಂಜೆ ತಾಲ್ಲೂಕಿನಾದ್ಯಂತ ಸುರಿದ ಮಳೆ ತಂಪೆರೆಯಿತು. ಸಂಜೆ ವೇಳೆಗೆ ಮೋಡ ಕವಿದ ವಾತಾವರಣವಿದ್ದು ಸುಮಾರು 6 ಗಂಟೆಗೆ ಸಣ್ಣದಾಗಿ ತುಂತುರು ಮಳೆ ಬೀಳಲು ಪ್ರಾರಂಭವಾಯಿತು. ನಂತರ ಅತಿಯಾದ ಮಿಂಚು, ಗುಡುಗಿನಿಂದ ಮಳೆ ಬೀಳಲಾರಂಬಿಸಿತು. ಎಲ್ಲೆಡೆ ಗುಡುಗು ಮಿಂಚಿನ ಅಬ್ಬರ ಕೇಳಿಸುತ್ತಿತ್ತು. ಅದರ ಜೊತೆಗೆ ಗಾಳಿ ಬೀಸಲಾರಂಬಿಸಿತು. ಸುಮಾರು 9ಗಂಟೆವರೆಗೆ ಸುರಿದ ಮಳೆ ನಂತರ ನಿಂತಿತು. ಆದರೆ ಗುಡುಗು, ಮಿಂಚು ಮುಂದುವರಿದಿತ್ತು. ಮಳೆ ಪ್ರಾರಂಭವಾಗುತ್ತಿದ್ದಂತೆ ವಿದ್ಯುತ್ ಕಡಿತಗೊಂಡಿತು. ರಸ್ತೆ, ಮನೆಗಳಲ್ಲಿ ವಿದ್ಯುತ್ ಇಲ್ಲದೆ ಜನತೆ ಕತ್ತಲಿನಲ್ಲಿ ರಾತ್ರಿ ಕಳೆಯುವಂತಾಯಿತು.

## ಗೊರಮಡಗು ಗ್ರಾಮದಲ್ಲಿ ಅಂಬೇಡ್ಕರ್ ಹಬ್ಬ

• ಉದಯವಾಹಿನಿ, ಶಿಡ್ಲಘಟ್ಟ

ತಾಲ್ಲೂಕಿನ ಗೊರಮಡಗು ಗ್ರಾಮದಲ್ಲಿ ಅಂಬೇಡ್ಕರ್‌ಅವರ 135ನೇ, ಬಾಬು ಜಗಜೀವನ್ ರಾಂ ಅವರ 119ನೇ ಜಯಂತ್ಯುತ್ಸವ ಪ್ರಯುಕ್ತ ಅಂಬೇಡ್ಕರ್ ಹಬ್ಬವಾಗಿ ಆಚರಿಸಲಾಯಿತು. ಎಲ್‌ಆರ್ ಎಂ ಪಿಯು ಕಾಲೇಜು ಪ್ರಾಂಶುಪಾಲ ಡಾ.ಕೆ. ಮೂರ್ತಿ ಸಾಮ್ರಾಟ್ ಮಾತನಾಡಿ, ಸಂವಿಧಾನ ಶಿಲ್ಪಿ ಅಂಬೇಡ್ಕರ್ ಮತ್ತು ಹಸಿರು ಕ್ರಾಂತಿಯ ಹರಿಕಾರ ಬಾಬು ಜಗಜೀವನ್ ರಾಂ ಅವರು ಶೋಷಿತ ಸಮುದಾಯಗಳ ಸರ್ವಾಂಗೀಣ ಅಭಿವೃದ್ಧಿ ದೃಷ್ಟಿಯಲ್ಲಿ ಸಮಾಜದ ಎರಡು ಕಣ್ಣುಗಳಿದ್ದಂತೆ ಎಂದು ಪ್ರತಿಪಾದಿಸಿದರು. ಸಂವಿಧಾನ ಶಿಲ್ಪಿ ಅಂಬೇಡ್ಕರ್ ಶೋಷಿತ ಸಮುದಾಯಗಳಿಗೆ ಕಾನೂನಾತ್ಮಕ ಹಕ್ಕುಗಳು ಮತ್ತು ಆತ್ಮಗೌರವವನ್ನು ಸಂವಿಧಾನದ ಮೂಲಕ ದೊರಕಿಸಿಕೊಟ್ಟರೆ, ಬಾಬು ಜಗಜೀವನ ರಾಂ ಆಡಳಿತ ವ್ಯವಸ್ಥೆ ಒಳಗೆ ಉನ್ನತ ಹುದ್ದೆಗಳನ್ನು ಅಲಂಕರಿಸಿ, ತಳವರ್ಗದವರೂ ದೇಶದ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಸಮಾನ ಪಾಲುದಾರರಾಗಬಲ್ಲರು ಎಂಬುದನ್ನು ಸಾಬೀತುಪಡಿಸಿದರು ಎಂದು ಹೇಳಿದರು.

ಅಂಬೇಡ್ಕರ್ ಅವರು ಶೋಷಣೆ ವಿರುದ್ಧ, ಸಮಾನತೆಗಾಗಿ ಹೋರಾಡಿದ ಮಹಾನ್ ಚೇತನ. ಅವರ ಜಯಂತಿಯನ್ನು ಗ್ರಾಮ ಮಟ್ಟದಲ್ಲಿ ಎಲ್ಲಾ ಸಮುದಾಯದವರು ಒಂದಾಗಿ ಆಚರಿಸುತ್ತಿರುವುದು ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯುವ ಮಹತ್ವದ ಹೆಜ್ಜೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಮುಖ್ಯ ಭಾಷಣಕಾರ ಕವಿ ಜನನಾಗಪ್ಪ ಮಾತನಾಡಿ, ಬಾಲ್ಯದಲ್ಲಿ ಅಸ್ಪೃಶ್ಯತೆಯಂತಹ ಅಮಾನವೀಯ ನೋವು ಅನುಭವಿಸಿದರೂ ಅದನ್ನು ಧೈರ್ಯದಿಂದ ಎದುರಿಸಿ ದೇಶಕ್ಕೆ ಶ್ರೇಷ್ಠ ಸಂವಿಧಾನ ನೀಡಿದ ಅಂಬೇಡ್ಕರ್ ಅವರ ಸಾಧನೆ ದೊಡ್ಡದು ಎಂದು ಬಣ್ಣಿಸಿದರು. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಜಗದೀಶ್, ಪಿಡಿಒ ಪವಿತ್ರ ಅವರು ಅಂಬೇಡ್ಕರ್ ಭಾವಚಿತ್ರದ ನಾಮಫಲಕದ ಮುಂದೆ ಕೇಕ್ ಕತ್ತರಿಸಿ, ಮೆರವಣಿಗೆಗೆ ಚಾಲನೆ ನೀಡಿದರು.

# ಮೈಸೂರು; ಆಡಳಿತದ ನೊಗಕ್ಕೆ ಮಹಿಳಾ ಹೆಗಲು

### ಮೈಸೂರಿನಲ್ಲಿ ಏಕಕಾಲಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಅಧಿಕಾರಿಗಳು ಜಿಲ್ಲೆಯಲ್ಲಿ ಜವಾಬ್ದಾರಿಗೆ ನಿಯೋಜನೆಗೊಂಡಿರುವುದು ವಿಶೇಷ

• ಉದಯವಾಹಿನಿ, ಮೈಸೂರು

ನಗರವೂ ಸೇರಿದಂತೆ ಜಿಲ್ಲೆಯ ಬಿ ಆಡಳಿತ ನಿರ್ವಹಣೆಯ ಪ್ರಮುಖ 'ಸ್ಥಾನ'ದಲ್ಲಿ ಮಹಿಳಾ ಅಧಿಕಾರಿಗಳೇ ಇದ್ದು, ತಮ್ಮಜವಾಬ್ದಾರಿ ನಿರ್ವಹಿಸುತ್ತಿದ್ದಾರೆ.ಕಾನೂನು–ಸುವ್ಯವಸ್ಥೆ ಕಾಪಾಡುವು ದು, ಸಾರ್ವಜನಿಕರಿಗೆ ಸ್ಪಂದಿಸುವುದು ಸೇರಿದಂತೆ ವಿವಿಧಕೆಲಸಗಳನ್ನು ಆಯಾ ಇಲಾಖೆಗಳ ಮೂಲಕ ಮಾಡುತ್ತಿದ್ದಾರೆ.ಮೈಸೂರಿನಲ್ಲಿ ಏಕಕಾಲಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಅಧಿಕಾರಿಗಳು ಜಿಲ್ಲೆಯಲ್ಲಿ ಜವಾಬ್ದಾರಿಗೆ ನಿಯೋಜನೆಗೊಂಡಿರುವುದು ವಿಶೇಷ. ಇವರಲ್ಲಿ ಐಎಎಸ್, ಐಪಿಎ ಸ್, ಕೆಎಎಸ್ ಸೇರಿದಂತೆ ಹಲವು ವರ್ಗದ ಅಧಿಕಾರಿಗಳಿದ್ದಾರೆ. ಪಾರಂಪರಿಕ, ಸಾಂಸ್ಕೃತಿಕ, ಆಡಳಿತಾತ್ಮಕ, ಸಾಮಾಜಿಕ, ಪ್ರಗತಿಪರ, ರಾಜಕೀಯ, ಧಾರ್ಮಿಕ, ಪ್ರವಾಸೋದ್ಯಮ ಮೊದಲಾದ ಕಾರಣಗಳಿಂದಾಗಿ ಪ್ರಮುಖ ಜಿಲ್ಲೆಯಾದ, ಪ್ರಸ್ತುತಸಿ ಎಂ ಸಿದ್ದರಾಮಯ್ಯ, ಪ್ರಮುಖ ಖಾತೆಗಳ ಸಚಿವರಾದಡಾ.ಎಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್ ಅವರ ತವರಿನಲ್ಲಿಕಾರ್ಯನಿರ್ವಹಿಸುವ ಅವಕಾಶವನ್ನು ಅವರು ಪಡೆದಿದ್ದಾರೆ. ಸಿಕ್ಕ ಹುದ್ದೆಗಳಲ್ಲಿ ತಮ್ಮ ಛಾಪು ಮೂಡಿಸಲು ಪ್ರಯತ್ನಿಸುತ್ತಿದ್ದಾರೆ. ಈ ಪ್ರಮೀಳೆಯರು ತಮ್ಮ ಆಡಳಿತದಮೂ ಲಕ, ಯುವತಿಯರಿಗೆ ಸ್ಫೂರ್ತಿಯೂ, ಪ್ರೇರಣೆಯೂ ಆಗಿದ್ದಾರೆ. ಆಡಳಿತಕ್ಕೆ ಹಾಗೂ ಜಿಲ್ಲೆಯ ಅಭಿವೃದ್ಧಿಗೆ ದುಡಿಯುತ್ತಿದ್ದಾರೆ.ಪ್ರಥಮ ನಗರದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಅಪರಾಧ ಪ್ರಕರಣಗಳನ್ನು ತಡೆಯುವ ಜವಾಬ್ದಾರಿ ಐಪಿಎಸ್ ಅಧಿಕಾರಿ ಸೀಮಾ ಲಾಟ್ಕರ್ ಅವರಿಗೆ ದೊರೆತಿದೆ. ಅವರು ಇಲ್ಲಿನ ಕಮಿಷನರೇಟ್‌ನ ಮೊದಲ ಮಹಿಳಾ ನಗರ ಪೊಲೀಸ್ ಆಯುಕ್ತೆಯೂ ಹೌದು. ಈ ಹಿಂದೆ ಅವರು, ಇಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಚುನಾವಣೆ ಸೇರಿದಂತೆ ಹಲವು ಕೆಲಸಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಡ್ರಗ್ಸ್ ಜಾ ಲವನ್ನು ಮಟ್ಟ ಹಾಕುವ ನಿಟ್ಟಿನಲ್ಲಿಸಾರಥ್ಯ ವಹಿಸಿದ್ದಾರೆ. ಅವರು ಮಾಜಿ ಸಂಸ'ದ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿತನಿಖೆಗೆ ನೇಮ'ಕಗೊಂಡಿದ್ದ **ಎಸ್‌ಐಟಿಯ ಭಾಗವೂ ಆಗಿದ್ದರು. ಕೆಎಎಸ್ (ಹಿರಿಯಶ್ರೇಣಿ) ಅಧಿಕಾರಿಯಾದ ಅವರಿಗೆ ಹಲವು ಜವಾಬ್ದಾರಿಗಳಿವೆ.ಸೆಸ್‌ನಲ್ಲೂ** ಮೈಸೂರಿನಲ್ಲಿ ಕೇಂದ್ರ ಕಚೇರಿ ಹೊಂದಿರುವ, ಮೈಸೂರು ಜೊತೆಗೆ, ಚಾಮರಾಜನಗರ, ಹಾಸನ, ಮಂಡ್ಯ, ಕೊಡಗು ಜಿಲ್ಲೆಗಳ ವ್ಯಾಪ್ತಿಯುಳ್ಳ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾಗಿ ಐಎಎಸ್ ಅಧಿಕಾರಿ ಎಂ.ಎಸ್. ಅರ್ಚನಾ ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಕೆಲವು ಮಹಿಳಾ ಅಧಿಕಾರಿಗಳು ಸಾಥ್ ನೀಡುತ್ತಿದ್ದಾರೆ. ರನ್‌ವೇ ವಿಸ್ತರಣೆ ಸೇರಿದಂತೆ ಪ್ರಮುಖ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿರುವ ಸಂದರ್ಭದಲ್ಲಿ, ಮಂಡಕಳ್ಳಿ ವಿಮಾನ ನಿಲ್ದಾಣದ ನಿರ್ದೇಶಕಿಯಾಗಿ ಪಿ.ವಿ.ಉಷಾಕುಮಾರಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಇಲ್ಲಿನ ಪ್ರಥಮ ನಿರ್ದೇಶಕಿಯೂ ಹೌದು. ಶಿಕ್ಷಣ ಕ್ಷೇತ್ರದಲ್ಲೂ... ಸಾಂಸ್ಕೃತಿಕ ನಗರಿಯ ಶಿಕ್ಷಣ ಕ್ಷೇತ್ರದಲ್ಲೂ ಮಹಿಳೆಯರು ಪ್ರಮುಖ ಸ್ಥಾನ ನಿರ್ವಹಿಸುತ್ತಿದ್ದಾರೆ.


ಸೀಮಾ ಲಾಟ್ಕರ್ | ಆರ್.ಐಶ್ವರ್ಯ | ಹರ್ಷಾ ಪ್ರಿಯಂವದ | ಎಂ.ಕೆ. ಸವಿತಾ
ಮಾಲತಿ ಪ್ರಿಯ | ಪಿ. ಅನುಷಾ | ಸೀಮಾ | ಸವಿತಾ
ಡಾ.ಎಂ. ಪುಷ್ಪಾವತಿ | ನಿರ್ಮಲಾ ಮಠಪತಿ | ಮಂಜುಳಾ | ಉಷಾರಾಣಿ
ಅರ್ಚನಾ | ಎಂ.ಜೆ. ರೂಪಾ | ಡಾ.ಬೃಂದಾ ಬಿ. | ನಿರ್ಮಲ ಎಸ್‌ಎಚ್

**ತಮ್ಮ ಛಾಪು ಮೂಡಿಸಲು ಪ್ರಯತ್ನ**

**ಗ್ರಾಮೀಣಾಭಿವೃದ್ಧಿ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಯೋಜನೆಗಳ ಜಾರಿ ನಿಟ್ಟಿನಲ್ಲಿ ಶ್ರಮಿಸಲು ಅವಕಾಶವುಳ್ಳ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಹುದ್ದೆಯನ್ನು ಎಂ.ಬಿ.ಸವಿತಾ ನಿರ್ವಹಿಸುತ್ತಿದ್ದಾರೆ. ಮಾಲತಿ ಪ್ರಿಯಾ ಸಿಸಿಎಫ್ ಆಗಿದ್ದರೆ, ನಾಗರಹೊಳೆ ಡಿಸಿಎಫ್ ಆಗಿ ಸೀಮಾ ಕೆಲಸ ಮಾಡುತ್ತಿದ್ದಾರೆ. ಮಹಾನಗರ ಪಾಲಿಕೆ ಉಪ ಆಯುಕ್ತ ಸ್ಥಾನದಲ್ಲಿ ವೀಣಾ ಕಾರ್ಯನಿರ್ವಹಿಸುತ್ತಿದ್ದಾರೆ. ಮೈಸೂರಿನ ಪ್ರಮುಖ ಪ್ರವಾಸಿ ತಾಣವಾದ ಚಾಮರಾಜೇಂದ್ರ ಮೃಗಾಲಯದ 'ಸಾರಥ್ಯ'ದ ಕಾರ್ಯನಿರ್ವಾಹಕ ನಿರ್ದೇಶಕಿ ಸ್ಥಾನದಲ್ಲಿ ಅನುಷಾ ಪಿ. ಕಾರ್ಯನಿರ್ವಹಿಸುತ್ತಿದ್ದಾರೆ. ಉಪ ನಿರ್ದೇಶಕಿಯಾಗಿ ದೀಪಾ ಹಾಗೂ ಆರ್‌ಎಫ್‌ಒ ಆಗಿ ದಿವ್ಯಶ್ರೀ ಕೆಲಸ ಮಾಡುತ್ತಿದ್ದಾರೆ. ಅನುಷಾ ಇ.ಡಿ.ಯಾಗಿ ನೇಮಕಗೊಂಡಿರುವ 2ನೇ ಮಹಿಳಾ ಅಧಿಕಾರಿ. ಪ್ರಧಾನ ಜಿಲ್ಲಾ, ಸೆಷನ್ಸ್ ನ್ಯಾಯಾಧೀಶರಾಗಿ ಉಷಾರಾಣಿ ಅವರು ನೊಗ ಹೊತ್ತಿದ್ದಾರೆ.**

ನಿರ್ವಹಣೆಗೆ ಹೆಗಲು ಕೊಡುತ್ತಿದ್ದಾರೆ. ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (ಆಯಿಷ್)ಯನ್ನು ಕನ್ನಡತಿ ಡಾ.ಪುಷ್ಪಾವತಿ ಮುನ್ನಡೆಸುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಕುಲಸಚಿವೆಯಾಗಿ ಕೆಎಎಸ್ ಅಧಿಕಾರಿ ಎಂ.ಕೆ.ಸವಿತಾ ಕಾರ್ಯನಿರ್ವಹಿಸುತ್ತಿದ್ದು, ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿ ಹಲವು ರಚನಾತ್ಮಕ ಚಟುವಟಿಕೆಗಳ ಅನುಷ್ಠಾನದ ಭಾಗವಾಗಿದ್ದಾರೆ. ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರ ಸ್ಥಾನವನ್ನು ಪ್ರತಿಮಾ ಡಿ.ಎಸ್. ಮುನ್ನಡೆಸುತ್ತಿದ್ದಾರೆ. ನಿರ್ಮಲಾ ಮಠಪತಿ ಸರ್ಕಾರಿ ದೃಶ್ಯಕಲಾ ಕಾಲೇಜಿನ ಡೀನ್ ಆಗಿದ್ದರೆ, ಮೈಸೂರಿನಲ್ಲಿ ಕೇಂದ್ರ ಕಚೇರಿಯನ್ನು ಹೊಂದಿರುವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಉಪನಿರ್ದೇಶಕಿ (ಪರಂಪರೆ) ಸ್ಥಾನವನ್ನು ಸಿ.ಎನ್.ಮಂಜುಳಾ ನಿರ್ವಹಿಸುತ್ತಿದ್ದಾರೆ. ಆರೋಗ್ಯಕ್ಕೆ... ಈ ಭಾಗದ 'ದೊಡ್ಡಾಸ್ಪತ್ರೆ' ಎನಿಸಿರುವ ಕೆ.ಆರ್. ಆಸ್ಪತ್ರೆಯ ನಿರ್ವಹಣೆ ಹೊಣೆಯೂ ಹೊಂದಿರುವ ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ (ಎಂಎಂಸಿಆರ್‌ಐ) ಡೀನ್ ಆಗಿ ಡಾ.ದಾಕ್ಷಾಯಿಣಿ ಸಾರಥ್ಯ ವಹಿಸಿದ್ದಾರೆ. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿಯಾಗಿ ಡಾ.ಬೃಂದಾ ಬಿ ಕೆಲಸ ಮಾಡುತ್ತಿದ್ದಾರೆ.

ಇನ್ನೂ ಮತ್ತಷ್ಟು ಪ್ರಮುಖ ಧಾರ್ಮಿಕ, ಪ್ರವಾಸಿ ತಾಣವೂ ಆಗಿರುವ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಸ್ಥಾನದೊಂದಿಗೆ ಹಲವು ದೇಗುಲಗಳ ನಿರ್ವಹಣೆಯ ಕಾರ್ಯಭಾರವನ್ನು ಹೊಂದಿರುವ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯಾಗಿ ಎಂ.ಜೆ.ರೂಪಾ, ಕೌಶಲ ಅಭಿವೃದ್ಧಿ ಅಧಿಕಾರಿಯಾಗಿ ರಾಣಿ ನಿರ್ವಹಿಸುತ್ತಿದ್ದಾರೆ. ಜಿಲ್ಲೆಯ ಹುಣಸೂರು ಉಪ ವಿಭಾಗಾಧಿಕಾರಿ ಹುದ್ದೆಯನ್ನು ಕೆ.ವಿ.ಕಾವ್ಯಾರಾಣಿ ನಿರ್ವಹಿಸುತ್ತಿದ್ದಾರೆ. ಸ್ಮಿತಾ ರಾಮು ನಂಜನಗೂಡು ತಹಶೀಲ್ದಾರ್ ಆಗಿದ್ದಾರೆ. ಸರ್ಕಾರದ ಯೋಜನೆಗಳಿಗೆ ಪ್ರಚಾರ ನೀಡುವ ವಾರ್ತಾ ಮತ್ತು ಸಾರ್ವಜನಿಕ ಇಲಾಖೆಯ ಸಹಾಯಕ ನಿರ್ದೇಶಕಿಯಾಗಿ ನಿರ್ಮಲ ಎಸ್.ಎಚ್. ಕೆಲಸ ಮಾಡುತ್ತಿದ್ದಾರೆ. ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

**ಜಿಲ್ಲಾಧಿಕಾರಿ ಹುದ್ದೆಗೆ ಆರ್.ಐಶ್ವರ್ಯ**

**ಪೊಲೀಸ್ ಆಯುಕ್ತರೊಂದಿಗೆ ಹೆಗಲು ಕೊಡಲು ನೇಮಕಗೊಂಡಿರುವ ಮತ್ತೊಬ್ಬ ಮಹಿಳಾ ಅಧಿಕಾರಿ ಡಿಸಿಪಿ ಡಾ.ಹರ್ಷಾ ಪ್ರಿಯಂವದ. ಮೈಸೂರು ನಗರದ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೊಣೆ ಹೊತ್ತಿದ್ದಾರೆ. 2020ರ ಐಪಿಎಸ್ ಬ್ಯಾಚ್‌ನವರು. ಎಂಬಿಬಿಎಸ್ ಪದವೀಧರೆ. ಕಂದಾಯ ಇಲಾಖೆಯ ಯೋಜನೆಗಳ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸಬೇಕಿರುವ, ಹೆಚ್ಚುವರಿ ಜಿಲ್ಲಾಧಿಕಾರಿ ಹುದ್ದೆಗೆ ಆರ್.ಐಶ್ವರ್ಯ ಬಂದಿದ್ದಾರೆ.**

### ಮದ್ಯ ಮಾರಾಟ ದೂರು: ಪರಿಶೀಲನೆ

• ಉದಯವಾಹಿನಿ, ಸಂತೇಬಾಚಹಳ್ಳಿ

ದೊಡ್ಡಸೋಮನಹಳ್ಳಿಯಲ್ಲಿ ಮದ್ಯ ಅಕ್ರಮ ಮಾರಾಟ ಆರೋಪ ಪ್ರಯುಕ್ತ ಅಬಕಾರಿ ಪೊಲೀಸರು ತಪಾಸಣೆ ನಡೆಸಿದರು. ಗ್ರಾಮದಲ್ಲಿ ಪೆಟ್ಟಿ ಅಂಗಡಿಗಳಲ್ಲಿ ಮದ್ಯ ಮಾರಾಟವಾಗುತ್ತಿದೆ ಎಂದು ರೈತ ಸಂಘದ ಮುಖಂಡ ನಾಗೇಶ್ ಅಬಕಾರಿ ಅಧಿಕಾರಿಗಳಿಗೆ ದೂರವಾಣಿಯಲ್ಲಿ ದೂರು ನೀಡಿದ್ದರು. ಅಬಕಾರಿ ಅಧಿಕಾರಿಗಳು ಸ್ಥಳಕ್ಕೆ ಬಂದು ಎಲ್ಲಾ ಅಂಗಡಿಗಳನ್ನು ತಪಾಸಣೆ ನಡೆಸಿದರು. ಮದ್ಯ ಸಿಗದೆ ವಾಪಸ್ ತೆರಳಿದರು. ಅಬಕಾರಿ ಇನ್‌ಸ್ಪೆಕ್ಟರ್ ದೀಪಕ್ ಕುಮಾರ್ ಮಾತನಾಡಿ, ಮದ್ಯ ಅನಧಿಕೃತವಾಗಿ ಮಾರಾಟ ಮಾಡುವುದು ಅಪರಾಧವಾಗಿದೆ. ಮಾರಾಟ ಮಾಡಿದರೆ ಪ್ರಕರಣ ದಾಖಲಿಸುತ್ತೇವೆ. ಗ್ರಾಮಸ್ಥರು ಅಕ್ರಮ ಕಂಡರೆ ನಮಗೆ ಮಾಹಿತಿ ನೀಡಬೇಕು. ನಾವು ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದರು ಅಬಕಾರಿ ಸಬ್ ಇನ್‌ಸ್ಪೆಕ್ಟರ್ ರವಿಕುಮಾರ್, ಕಾಡಯ್ಯ, ಮುಖಂಡ ನಾಗೇಶ್ ಹಾಗೂ ಸಿಬ್ಬಂದಿ, ಗ್ರಾಮದ ಮಹಿಳೆಯರು ಇದ್ದರು.

### ನೆಲಕ್ಕೆ ಅಪ್ಪಳಿಸಿದ ಬೃಹತ್ ಕೊಂಬೆ

• ಉದಯವಾಹಿನಿ, ಮಧುಗಿರಿ

ಪಟ್ಟಣದ ವೆಂಕಟರಮಣ ಸ್ವಾಮಿ ದೇವಾಲಯದ ರಸ್ತೆಯ ಬದಿಯಲ್ಲಿರುವ ಬೃಹತ್ ಮರಗಳಲ್ಲಿ ಹಲವು ಕೊಂಬೆಗಳು ಒಣಗಿದ್ದು, ಬೀಳುವ ಹಂತಕ್ಕೆ ತಲುಪಿವೆ. ಈ ರಸ್ತೆಯಲ್ಲಿ ದಿನನಿತ್ಯ ಭಕ್ತರು, ವಿದ್ಯಾರ್ಥಿಗಳು, ವಾಹನ ಸವಾರರು ಸಾರ್ವಜನಿಕ ಹೆಚ್ಚಿನ ಸಂಖ್ಯೆಯಲ್ಲಿ ಸಂಚಾರ ಮಾಡುವ ಜನನಿಬಿಡ ರಸ್ತೆಯಾಗಿದೆ. ಭರಣಿ ಮಳೆ ಆರಂಭವಾಗಿದ್ದು, ರಾತ್ರಿ ಬೀಸಿದ ಗಾಳಿಗೆ ಮರದ ಬೃಹತ್ ಕೊಂಬೆಯೊಂದು ಕೆಳಗೆ ಬಿದ್ದಿದೆ. ಈ ಸಮಸ್ಯೆಯ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಹಲವು ತಿಂಗಳುಗಳ ಹಿಂದೆಯೇ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರ ಸುರಕ್ಷತೆ ಗಮನದಲ್ಲಿಟ್ಟುಕೊಂಡು ಪಟ್ಟಣದ ರಸ್ತೆಬದಿಯ ಹಲವು ಮರಗಳಲ್ಲಿ ಒಣಗಿರುವ ಕೊಂಬೆಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ತೆರವುಗೊಳಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಅಂತರಾಳದಿಂದ..
EDITORIAL

# ಸ್ವಚ್ಛ ಸಬ್ ರಿಜಿಸ್ಟ್ರಾರ್ ಕಚೇರಿ!
## ರಾಜಕೀಯ ಇಚ್ಛಾಶಕ್ತಿಗೆ ಪರೀಕ್ಷೆ

ಉಪ ನೋಂದಣಾಧಿಕಾರಿಗಳ ವರ್ಗಾವಣೆಗೆ ಕೌನ್ಸೆಲಿಂಗ್ ಪದ್ಧತಿಯೊಂದಿಗೆ 'ಡಿಮೆರಿಟ್ ಅಂಕ' ವ್ಯವಸ್ಥೆ ಪರಿಚಯಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇದು ದಶಕಗಳಷ್ಟು ಹಳೆಯದಾದ ಸಮಸ್ಯೆಯನ್ನು ಒಪ್ಪಿಕೊಂಡು, ಅದಕ್ಕೆ ಉತ್ತರ ಕಂಡುಕೊಳ್ಳುವ ಕ್ರಮವಾಗಿದೆ. ಅಧಿಕಾರಿಗಳ ಮೇಲಿನ ಪ್ರಕರಣಗಳಿಗೆ ಅನುಗುಣವಾಗಿ ಅನರ್ಹತಾ ಅಂಕ ನೀಡುವ ಪದ್ಧತಿಯನ್ನು ಇದೇ ಮೊದಲ ಬಾರಿಗೆ ಪರಿಚಯಿಸಲಾಗುತ್ತಿದೆ. ಇದರ ಅನ್ವಯ ಕ್ರಿಮಿನಲ್ ಪ್ರಕರಣಗಳು ಅಥವಾ ಲೋಕಾಯುಕ್ತ ಬಲೆಗೆ ಬಿದ್ದ ಅಧಿಕಾರಿಗಳಿಗೆ ನಾಲ್ಕು ಅಂಕಗಳು, ಕಾನೂನು ಕ್ರಮಕ್ಕೆ ಒಳಗಾದವರಿಗೆ ಮೂರು ಅಂಕ, ಇಲಾಖಾ ತನಿಖೆಯಲ್ಲಿ ಶಿಕ್ಷೆಗೆ ಒಳಗಾದವರಿಗೆ ಎರಡು ಅಂಕ ಮತ್ತು ತನಿಖೆ ಪ್ರಗತಿಯಲ್ಲಿದ್ದವರಿಗೆ ಒಂದು ಅಂಕ ನೀಡಲಾಗುತ್ತದೆ. ಈ ಅಂಕಗಳನ್ನು ಆಧರಿಸಿ ವರ್ಗಾವಣೆಗೆ ಆಯ್ಕೆ ಮಾಡಿಕೊಳ್ಳುವ ಸ್ಥಳ ನಿಗದಿಯಾಗಲಿದೆ. ಈ ಮೂಲಕ ಪ್ರಾಮಾಣಿಕತೆಗೂ ವರ್ಗಾವಣೆಗೂ ಸಂಬಂಧ ಬೆಸೆಯಲು ಹೊರಟಿರುವ ಸರ್ಕಾರದ ಪ್ರಯತ್ನ ತಾತ್ವಿಕವಾಗಿ ಒಂದು ಮಹತ್ವದ ನಡೆಯಾಗಿದೆ. ಸಬ್ ರಿಜಿಸ್ಟ್ರಾರ್ ಕಚೇರಿಗಳು– ವಿಶೇಷವಾಗಿ ಬೆಂಗಳೂರಿನಲ್ಲಿನ ಕಚೇರಿಗಳು ಬಹಳ ಕಾಲದವರೆಗೂ ಖಾಸಗಿ ಸಾಮ್ರಾಜ್ಯಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಪಾರದರ್ಶಕವಲ್ಲದ ಮಾರ್ಗಗಳ ಮೂಲಕ ಹುದ್ದೆಗಳನ್ನು ಪಡೆದುಕೊಳ್ಳುವ ಹಾಗೂ ಉಳಿಸಿಕೊಳ್ಳುವ ವ್ಯವಸ್ಥೆ ಜಾರಿಯಲ್ಲಿತ್ತು. ಆ ವ್ಯವಸ್ಥೆಯನ್ನು ಬದಲಿಸಿ, ಪ್ರಭಾವ ಮತ್ತು ಶಿಫಾರಸುಗಳಿಗೆ ಅವಕಾಶ ಕಲ್ಪಿಸದಿರುವ ಹಾಗೂ ಪ್ರಾಮಾಣಿಕ ಅಧಿಕಾರಿಗಳಿಗೆ ಹೆಚ್ಚಿನ ಮೌಲ್ಯದ ಸ್ಥಳಗಳಿಗೆ ವರ್ಗಾವಣೆ ಮಾಡುವ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಉದ್ದೇಶ ಸರಿಯಾದುದಾಗಿದೆ.



ಉದ್ದೇಶಿತ ಕ್ರಮಗಳನ್ನು ಪ್ರಾಮಾಣಿಕತೆಯಿಂದ ಅಕ್ಷರಶಃ ಅನುಷ್ಠಾನಗೊಳಿಸಿದಲ್ಲಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯನ್ನು ವರ್ಷಗಳಿಂದ ಆವರಿಸಿಕೊಂಡಿರುವ ಪ್ರಭಾವಿ ವಲಯಗಳನ್ನು ಮಟ್ಟ ಹಾಕುವುದು ಸಾಧ್ಯವಾಗುತ್ತದೆ.

ಕೌನ್ಸೆಲಿಂಗ್ ಆಧಾರಿತ ವರ್ಗಾವಣೆ ಹೊಸತೇನೂ ಅಲ್ಲ. ಕಳೆದ ವರ್ಷವೇ ಈ ವ್ಯವಸ್ಥೆಯನ್ನು ಪರಿಚಯಿಸಲಾಗಿತ್ತು, ಕೆಲವು ಅಧಿಕಾರಿಗಳು ಅನೇಕ ವರ್ಷಗಳ ಕಾಲ ಒಂದೇ ಕಡೆ ಕಾರ್ಯ ನಿರ್ವಹಿಸುತ್ತಿರುವ ವಿಷಯವನ್ನು ಸರ್ಕಾರ ಪ್ರಸ್ತಾಪಿಸಿತ್ತು.

ವ್ಯವಸ್ಥೆಯಲ್ಲಿ ಪಾರದರ್ಶಕ ಬದಲಾವಣೆ ತರುವ ಭರವಸೆಯನ್ನೂ ನೀಡಲಾಗಿತ್ತು. ಈ ಬಾರಿಯೂ ಹಳೆಯ ಕಳವಳ, ಭರವಸೆಯನ್ನು ಪುನರುಚ್ಚರಿಸಲಾಗುತ್ತಿದೆ.

ಪ್ರಮುಖ ಹುದ್ದೆಗಳಲ್ಲಿ ಅವಧಿಗೂ ಮೀರಿ ನೆಲೆಸಿದ್ದ ಅಧಿಕಾರಿಗಳು ಈಗಲೂ ಅಲ್ಲಿಯೇ ಮುಂದುವರಿದಿದ್ದಾರೆ ಎನ್ನುವುದಾದರೆ, ಕಳೆದ ವರ್ಷದ ಕೌನ್ಸೆಲಿಂಗ್ ಪ್ರಕ್ರಿಯೆ ಬರೀ ಪ್ರದರ್ಶನಕ್ಕಾಗಿ ನಡೆಯಿತೇ, ಅದರಿಂದ ಏನಾದರೂ ಸಾಧನೆ ಆಗಿದೆಯೇ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಫಲಿತಾಂಶಗಳಿಲ್ಲದ ಮಾತು, ಭರವಸೆ, ಘೋಷಣೆಗಳ ಮುಂದುವರಿಕೆಯು ವ್ಯವಸ್ಥೆಯನ್ನು ಆಕ್ರಮಿಸಿಕೊಂಡಿರುವ ವಲಯಗಳ ಪ್ರತಿರೋಧದ ಶಕ್ತಿಯನ್ನು ಸೂಚಿಸುವಂತಿದೆ. ಸಬ್ ರಿಜಿಸ್ಟ್ರಾರ್ ಕಚೇರಿಗಳು ಭ್ರಷ್ಟಾಚಾರಕ್ಕೆ ಪರ್ಯಾಯ ಹೆಸರುಗಳಾಗಿವೆ, ಅವುಗಳು ಮಧ್ಯವರ್ತಿಗಳ ನಿಯಂತ್ರಣಕ್ಕೊಳಪಟ್ಟಿವೆ. ಈ ಮಧ್ಯವರ್ತಿಗಳು ಅಧಿಕಾರಿಗಳೊಂದಿಗೆ ಶಾಮೀಲಾಗಿ ಬಲಿಷ್ಠವಾಗಿ ಬೆಳೆದಿದ್ದಾರೆ ಎನ್ನುವುದು ಬಹಿರಂಗ ಸತ್ಯವಾಗಿದೆ. ಅಪವಿತ್ರ ಮೈತ್ರಿಯನ್ನು ಭಂಗಗೊಳಿಸುವ ಪ್ರಯತ್ನವನ್ನು ಅಧಿಕಾರದಲ್ಲಿ ಇರುವ ರಾಜಕಾರಣಿಗಳು ಮಾಡಿರುವುದು ಕೂಡ ವಿರಳ. ಸಮಸ್ಯೆಯ ಮುಂದುವರಿಕೆಯು ರೋಗನಿರ್ಣಯದ ಕೊರತೆಯ ಬದಲು, ನೀತಿನಿಯಮಗಳ ಜಾರಿಯ ಕೊರತೆಯನ್ನು ಸೂಚಿಸುತ್ತದೆ. ನೀತಿನಿಯಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಾದ ಪರಿಶೀಲನೆ, ಸಕಾಲಿಕ ಲೆಕ್ಕಪರಿಶೋಧನೆ, ತಪ್ಪುಗಳಿಗೆ ಕಠಿಣ, ಖಚಿತ ಶಿಕ್ಷೆಯೊಂದಿಗೆ ವ್ಯವಸ್ಥೆಯನ್ನು ಸರಿಪಡಿಸುವ ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸದೆ ಹೋದಲ್ಲಿ, ಪ್ರಸ್ತುತ ತರಲು ಹೊರಟಿರುವ ಸುಧಾರಣೆಯೂ ಹಿಂದಿನಂತೆ ಹಳ್ಳ ಹಿಡಿಯುವ ಸಾಧ್ಯತೆಯಿದೆ. ರಾಜಕೀಯ ಸಂಕಲ್ಪದ ಕೊರತೆಯಿಂದ ಒಳ್ಳೆಯ ಯೋಜನೆಗಳೂ ಹಳಿ ತಪ್ಪಬಹುದು ಎನ್ನುವುದಕ್ಕೆ 'ಇ–ಖಾತಾ' ಯೋಜನೆ ಎಚ್ಚರಿಕೆಯ ಪಾಠದಂತಿದೆ. ಆಸ್ತಿ ದಾಖಲೆಗಳನ್ನು ಭ್ರಷ್ಟಾಚಾರ ತಡೆಗಟ್ಟುವ ಮಹತ್ವಾಕಾಂಕ್ಷೆಯಿಂದ ಜಾರಿಗೆ ತರಲಾದ ಈ ಯೋಜನೆ, ಹೊಸ ಅಕ್ರಮಗಳಿಗೆ ದಾರಿಗಳನ್ನು ಸೃಷ್ಟಿಸಿತು. ತಂತ್ರಜ್ಞಾನ ಮತ್ತು ನೀತಿಗಳಿಂದಷ್ಟೇ ಪಟ್ಟಭದ್ರ ಹಿತಾಸಕ್ತಿಗಳನ್ನು ಮಣಿಸಲು ಸಾಧ್ಯವಿಲ್ಲ ಎನ್ನುವುದಕ್ಕೆ 'ಇ–ಖಾತಾ' ಸಾಕ್ಷಿಯಂತಿದೆ. ವರ್ಗಾವಣೆಗೆ ಸಂಬಂಧಿಸಿದ ಕೌನ್ಸೆಲಿಂಗ್ ಕೂಡ ವೈಫಲ್ಯಗಳ ಪಟ್ಟಿಗೆ ಸೇರಬಾರದು. ಸಕಾಲಿಕ ವರ್ಗಾವಣೆ, ಪ್ರಾಮಾಣಿಕ ಅಧಿಕಾರಿಗಳಿಗೆ ರಕ್ಷಣೆ–ಮಾನ್ಯತೆ, ಮಧ್ಯವರ್ತಿ ವ್ಯವಸ್ಥೆಯನ್ನು ಕೊನೆಗೊಳಿಸುವ ಪ್ರಯತ್ನಗಳಿಂದ ವ್ಯವಸ್ಥೆಯಲ್ಲಿ ಹೊಸ ಗಾಳಿ–ಬೆಳಕು ತರಬಹುದು. ಒಳ್ಳೆಯ ಉದ್ದೇಶವಿರುವ ಯೋಜನೆಗಳಷ್ಟೇ ರಾಜ್ಯಕ್ಕೆ ಸಾಕಾಗವು. ಅವುಗಳೊಂದಿಗೆ, ಶಿಕ್ಷೆಯ ಭಯವಿಲ್ಲದೆ ದಶಕಗಳಿಂದ ಭ್ರಷ್ಟಾಚಾರವನ್ನೇ ಸಹಜಸ್ಥಿತಿಯನ್ನಾಗಿ ಮಾಡಿರುವ ವ್ಯವಸ್ಥೆಯನ್ನು ಕೊನೆಗೊಳಿಸುವ ರಾಜಕೀಯ ದೃಢ ಸಂಕಲ್ಪ ಅಗತ್ಯವಾಗಿದೆ.

# ರಾಮಾಯಣ



ಲಂಕಿಣಿಯನ್ನು ಕೊಂದು ಲಂಕೆಯ ಒಳಹೊಕ್ಕ ಆಂಜನೇಯನು ರಾವಣನ ಅರಮನೆಗೆ ಬಂದದು

• ಹಿಂದಿನ ಸಂಚಿಕೆಯಿಂದ

## ಸುಂದರಕಾಂಡ

ಕೆಲವರು ಚಿನ್ನವನ್ನು ಒರೆಗೆ ಹಚ್ಚಿ ಅದರಲ್ಲಿನ ನ್ಯೂನತೆಯನ್ನು ತೋರಿಸುತ್ತಿದ್ದರು. ಅಲ್ಲಿಂದ ಮುಂದೆ ಹೋದರೆ ಮನೆಗಳಲ್ಲಿ ಮಣಿದೀಪಗಳ ಬೆಳಕಿನಲ್ಲಿ ಜನರು ಸಂತೋಷವಾಗಿ ಸಲ್ಲಾಪಿಸುತ್ತಿದ್ದರು. ರತ್ನಮಯವಾದ ಹರ್ಮ್ಯಗಳು, ಸುವರ್ಣ ಪ್ರಾಕಾರಗಳು, ಎತ್ತರವಾದ ಭವನಗಳು ಉದ್ದಕ್ಕೂ ಶೋಭಿಸುತ್ತಿದ್ದುವು; ಅವನ್ನೆಲ್ಲ ಅಚ್ಚರಿಯಿಂದ ನೋಡುತ್ತ ಬರಲು ಮುಂದೆ ಗರುಡಧ್ವಜ, ಮರುತ, ಅಗ್ನಿ, ನಿರುತಿಗಳನ್ನು ಸ್ತುತಿಸುವುದನ್ನು ಬಾಲಕರಿಗೆ ಹೇಳಿಕೊಡುತ್ತಿದ್ದ ಮಾಗಧರ ಕೇರಿ ಕಾಣಿಸಿತು. ಎಲ್ಲೆಡೆಯೂ ಸೂರ್ಯನ ತೇಜಸ್ಸಿನಂತೆ ಹೊಳೆಯುವ ಕನಕಮಣಿಮಯ ಮಂದಿರಗಳೇ! ಅವುಗಳಲ್ಲೆಲ್ಲ ನುಸುಳಿ ನೋಡಿದ. ಒಂದೆಡೆ ತ್ರಿಸ್ಥಾಯಿಗಳನ್ನು ಹಿಡಿದು ಹಾಡುವ, ವೀಣೆಗಳನ್ನು ನುಡಿಸುವ ಹಾಡುಗಾರರು ವೈಣಿಕರು ತಲ್ಲೀನತೆಯಿಂದ ನೆರೆದಿದ್ದ ವೈಭವದ ಪರಿಯು ಪವನಜನಿಗೆ ಅಚ್ಚರಿಯನ್ನು ತಂದಿತು. ಮೆಲ್ಲಗೆ ಆ ಮನೆಗಳನ್ನು ಹೊಕ್ಕು ಸೂಕ್ಷ್ಮರೂಪಿನಿಂದ ಹುಡುಕಿ ಯಾರಿಗೂ ಗೊತ್ತಾಗದಂತೆ ಅಲ್ಲಿಂದ ಹೊರಬಂದ. ಮುಂದೆ ಬಂದರೆ ಹಲವು ಮನೆಗಳಲ್ಲಿ ಹಲವರು ದರ್ಭೆಗಳನ್ನು ಹಿಡಿದು ಅಧ್ಯಯನಶೀಲರಾಗಿದ್ದರೆ, ಮತ್ತೆ ಹಲವರು ಮಂತ್ರಪಠಣ ಮಾಡುತ್ತಿದ್ದರು. ಸುಳುಹು ಕೊಡದೆ ಆ ವೈದಿಕ ಕೇರಿಯ ಮನೆಗಳನ್ನು ಹೊಕ್ಕು ಮೂಲೆಮೂಲೆಗಳನ್ನು ಹುಡುಕಿದ. ಸಂಹಿತೆಯನ್ನು ಪದಕ್ರಮಜಟೆಗಳ ಪಾಠಗಳನ್ನು ಒಪ್ಪಿಸುವ, ವರ್ಣಲಕ್ಷಣಗಳನ್ನೂ, ಅಶ್ವಮೇಧದ ಆರಣಭಾಗಗಳನ್ನೂ ಪಠಿಸುವ ರಕ್ಕಸರು ಅಲ್ಲಿ ತುಂಬಿದ್ದರು. ಅದನ್ನು ಕಂಡು ವಿಸ್ಮಯಗೊಂಡ ಮಾರುತಿಯು ಸ್ಮೃತಿತತಿಗಳನ್ನು ಹೇಳುವ ಕೇಳುವ ರಾಕ್ಷಸರ ನಡುವೆ ಸೀತೆಗಾಗಿ ಹುಡುಕುತ್ತಲೇ ನಗರದ ವೈಭವವನ್ನು ಕಂಡು ತಲೆದೂಗಿದ. ಚತುರಂಗ ಪಂಚಾಂಗಗಳನ್ನು ಪುರಶ್ಚರಣೆ ಮಾಡುವವರನ್ನೂ, ಪೂಜೆ ತರ್ಪಣ ಹೋಮಗಳನ್ನು ಮಾಡುವುದರಲ್ಲಿ ನಿರತರಾದವರನ್ನೂ, ಹೃದಯಭಂದ ಮುಂತಾದ ಅನೇಕ ಚಿಹ್ನೆಗಳನ್ನು ತಿಳಿದು ಮಂತ್ರಗಳನ್ನು ಉಪಾಂಶುಗಳನ್ನು ಎತ್ತರದ ದ್ವನಿಯಲ್ಲಿ ಉಚ್ಚರಿಸುತ್ತ ದಿಕ್ಕುಗಳನ್ನು ತಿಳಿದು ಉಚಿತವಾದ ಆಸನಗಳಲ್ಲಿ ಕುಳಿತಿರುವ ಯತಿಗಳನ್ನು ಭೂವರರನ್ನೂ ಬೆರಗಿನಿಂದ ನೋಡಿದ.

ಹೊಂಬಿಸಿಲಿನಂತಹ ಬೆಳಕಿನಿಂದ ಕೂಡಿದ ಮನೆಗಳನ್ನೂ ಮರಗಳನ್ನೂ ಆನಂದದಿಂದ ಸಂತೃಪ್ತರಾದ ಪ್ರಜೆಗಳನ್ನೂ ಸಂಭ್ರಮದಿಂದ ನೋಡುತ್ತ ಮಾರುತಿಯು ಮುಂದೆ ಬರಲು, ಮುದ್ದರ ಚಕ್ರ ಶಕ್ತಿ ತೋಮರ ಪರಶು ಮುದ್ದರ ಶತಘ್ನಿ ಪಟ್ಟಿಸ ಮುಸಲ ಮುಂತಾದ ಆಯುಧಗಳನ್ನು ಹಿಡಿದ ಯಮಕಿಂಕರಸಮಾನರಾದ ದಾಂಡಿಗ ರಾಕ್ಷಸರ ಸಮೂಹವು ಕಾಣಿಸಿತು. ಏಕಪಾದ ಚತುಷ್ಪಾದ ಬಹುಪಾದಗಳ, ಏಕಕರ್ಣ ಬಹುಕರ್ಣಗಳ, ಏಕನಾಸ, ಏಕನೇತ್ರ, ಬಹುನೇತ್ರಗಳನ್ನೂ ದೊಡ್ಡ ದೊಡ್ಡ ದೇಹಗಳನ್ನೂ ಹೊಂದಿದ ಘೋರರಕ್ಕಸರ ಸಂತೆಯೇ ಆ ನಗರದ ರಾಜಬೀದಿಯಲ್ಲಿ ನೆರೆದಿತ್ತು. ಹೆಂಡ ಕುಡಿದು ಅಮಲು ಏರಿ ತ್ರಿಮೂರ್ತಿಗಳ ಕುಂದುಕೊರತೆಗಳನ್ನು ಕೆಲವರು ಆಡಿಕೊಳ್ಳುತ್ತಿದ್ದರೆ, ಮತ್ತೆ ಕೆಲವರು ಸಂತೋಷದಿಂದ ಹಾಡಿಕೊಳ್ಳುತ್ತಿದ್ದರು; ಕೆಲವರು ಕೋಪದಿಂದ ಚಂದ್ರಸೂರ್ಯರನ್ನು ಕಿತ್ತು ತರುತ್ತೇವೆಂದು ಕೂಗಾಡುತ್ತಿದ್ದರು. ಇಂತಹ ಪಾನಮತ್ತ ದಾನವರ ಗುಂಪನ್ನು ಕಂಡ ಪ್ರಭಂಜನಕುಮಾರನು ಕೆಲಹೊತ್ತು ಅಚ್ಚರಿಯಿಂದ ಮರೆಯಲ್ಲಿ ನಿಂತು ನೋಡುತ್ತಿದ್ದ. ಅಲ್ಲಿನ ಮನೆಗಳು ದೇವೇಂದ್ರಭವನದಂತೆ ಕಂಗೊಳಿಸುತ್ತಿರಲು, ಮನೆಯ ಮುಂದಿನ ನಾನಾ ಬಗೆಯ ಕೈತೋಟಗಳು ದಿವ್ಯನಂದನಗಳನ್ನೂ ಮೀರಿಸುವಂತಿದ್ದುವು. ಇಂತಹ ವೀರವಿಕ್ರಮಬಲಗಳನ್ನೂ ಸಿರಿಯನ್ನೂ ಯಾವಯಾವುದೋ ಬಗೆಯಿಂದ ಗಳಿಸಿಕೊಂಡ ರಾವಣನು ಅದೆಂತಹ ಸಾಹಸಿಯೋ, ಅವನ ತಪಸ್ಸಿನ ಸ್ವರೂಪವೆಂತೋ ಎಂದು ಬೆರಗುವಟ್ಟ ಇವು ರಾಜಪುತ್ರರಿರುವ ಅರಮನೆಗಳಿರಬೇಕು, ಗೊತ್ತಾಗದಂತೆ ನಾನು ಇವುಗಳನ್ನು ಹೇಗೆ ಪ್ರವೇಶಿಸಬಹುದು.

ಮುಂದುವರಿಯುವುದು...

# ಕಾರ್ಮಿಕರ ದಿನಾಚರಣೆ: ಹೋರಾಟದಿಂದ ಹುಟ್ಟಿದ ಗೌರವದ ಹಬ್ಬ



ನಾ ಕಂಡಂತೆ
ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

ಪ್ರತಿ ವರ್ಷದ ಮೇ 1ರಂದು ವಿಶ್ವದಾದ್ಯಂತ ಆಚರಿಸಲಾಗುವ ಕಾರ್ಮಿಕರ ದಿನಾಚರಣೆ ಶ್ರಮಜೀವಿಗಳ ಹಕ್ಕುಗಳಿಗಾಗಿ ನಡೆದ ದೀರ್ಘ ಹೋರಾಟದ ಸಂಕೇತವಾಗಿದೆ. ಇದು ಕೇವಲ ಒಂದು ದಿನದ ಆಚರಣೆ ಅಲ್ಲ; ಇದು ಮಾನವ ಶ್ರಮದ ಮೌಲ್ಯವನ್ನು ಗುರುತಿಸುವ, ಸಮಾನತೆ ಮತ್ತು ನ್ಯಾಯಕ್ಕಾಗಿ ನಡೆದ ಇತಿಹಾಸದ ನೆನಪು. ಕಾರ್ಮಿಕರ ದಿನಾಚರಣೆಯ ಹುಟ್ಟಿಗೆ ಪ್ರಮುಖ ಕಾರಣ 19ನೇ ಶತಮಾನದ ಕೈಗಾರಿಕಾ ಕ್ರಾಂತಿಯ ನಂತರದ ದುಸ್ಥಿತಿ. ಆ ಕಾಲದಲ್ಲಿ ಕಾರ್ಮಿಕರು ದಿನಕ್ಕೆ 12ರಿಂದ 16 ಗಂಟೆಗಳವರೆಗೆ ದುಡಿಯಬೇಕಾಗಿತ್ತು. ಕಡಿಮೆ ವೇತನ, ಅಸುರಕ್ಷಿತ ಪರಿಸರ, ಯಾವುದೇ ಹಕ್ಕುಗಳಿಲ್ಲದ ಪರಿಸ್ಥಿತಿ ಸಾಮಾನ್ಯವಾಗಿತ್ತು. ಈ ಅನ್ಯಾಯದ ವಿರುದ್ಧ ಕಾರ್ಮಿಕರು ಒಗ್ಗೂಡಿ ಹೋರಾಟ ಪ್ರಾರಂಭಿಸಿದರು.

1886ರ ಮೇ 1ರಂದು ಅಮೆರಿಕದ ಚಿಕಾಗೋ ನಗರದಲ್ಲಿ ಸಾವಿರಾರು ಕಾರ್ಮಿಕರು "8 ಗಂಟೆಗಳ ಕೆಲಸ, 8 ಗಂಟೆಗಳ ವಿಶ್ರಾಂತಿ, 8 ಗಂಟೆಗಳ ವೈಯಕ್ತಿಕ ಜೀವನ" ಎಂಬ ಘೋಷಣೆಯೊಂದಿಗೆ ದೊಡ್ಡ ಪ್ರತಿಭಟನೆ ನಡೆಸಿದರು. ಈ ಹೋರಾಟದ ಸಮಯದಲ್ಲಿ ನಡೆದ ಹೆಯ್ಮಾರ್ಕೆಟ್ ಘಟನೆಯು ಕಾರ್ಮಿಕರ ಹಕ್ಕುಗಳ ಚಳವಳಿಯಲ್ಲಿ ಮಹತ್ವದ ತಿರುವು ತಂದಿತು. ಈ ಘಟನೆಯಲ್ಲಿ ಹಲವರು ಬಲಿಯಾಗಿದ್ದು, ಅವರ ತ್ಯಾಗವು ಕಾರ್ಮಿಕರ ಹಕ್ಕುಗಳಿಗೆ ಜಾಗತಿಕ ಮಾನ್ಯತೆ ತಂದುಕೊಟ್ಟಿತು.



ಈ ಹೋರಾಟದ ಪರಿಣಾಮವಾಗಿ, ಕ್ರಮೇಣ 8 ಗಂಟೆಗಳ ಕೆಲಸದ ನಿಯಮ ಅನೇಕ ದೇಶಗಳಲ್ಲಿ ಜಾರಿಗೆ ಬಂತು. ನಂತರ ಮೇ 1ರಂದು ಕಾರ್ಮಿಕರ ದಿನಾಚರಣೆಯನ್ನು ಆಚರಿಸುವ ಪದ್ಧತಿ ಆರಂಭವಾಯಿತು. ಇಂದಿಗೆ ಇದು ವಿಶ್ವದ ಅನೇಕ ದೇಶಗಳಲ್ಲಿ ಸಾರ್ವಜನಿಕ ರಜೆಯಾಗಿ ಪರಿಗಣಿಸಲ್ಪಟ್ಟಿದೆ. ಭಾರತದಲ್ಲಿಯೂ ಕಾರ್ಮಿಕರ ದಿನಾಚರಣೆಗೆ ವಿಶಿಷ್ಟ ಇತಿಹಾಸವಿದೆ. 1923ರಲ್ಲಿ ಚೆನ್ನೈನಲ್ಲಿ (ಆಗ ಮದ್ರಾಸ್) ಮೊದಲ ಬಾರಿಗೆ ಕಾರ್ಮಿಕರ ದಿನಾಚರಣೆಯನ್ನು ಆಚರಿಸಲಾಯಿತು. ಈ ಆಚರಣೆಯನ್ನು ಪ್ರಾರಂಭಿಸಿದವರು ಸಮಾಜ ಸುಧಾರಕ, ಕಾರ್ಮಿಕ ನಾಯಕ ಸಿಂಗಾರವೆಲು ಚೆಟ್ಟಿಯಾರ್. ಆ ದಿನದಿಂದಲೇ ಭಾರತದಲ್ಲಿ ಕಾರ್ಮಿಕರ ಹಕ್ಕುಗಳ ಬಗ್ಗೆ ಜಾಗೃತಿ ಹೆಚ್ಚಾಗತೊಡಗಿತು.

ಕಾರ್ಮಿಕರ ದಿನಾಚರಣೆ ಯಾಕೆ ಮುಖ್ಯ? ಏಕೆಂದರೆ ಇದು ಶ್ರಮದ ಗೌರವವನ್ನು ನೆನಪಿಸುತ್ತದೆ. ಕಾರ್ಮಿಕರು ಸಮಾಜದ ಬೆನ್ನೆಲುಬು. ಕಟ್ಟಡ ನಿರ್ಮಾಣದಿಂದ ಹಿಡಿದು ಕೃಷಿ, ಕಾರ್ಖಾನೆ, ಸಾರಿಗೆ, ಸೇವಾ ಕ್ಷೇತ್ರಗಳವರೆಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅವರ ಪಾತ್ರ ಅನಿವಾರ್ಯ. ಆದರೆ ಇಂದಿಗೂ ಅನೇಕ ಕಾರ್ಮಿಕರು ಸಮರ್ಪಕ ವೇತನ, ಸುರಕ್ಷತೆ ಮತ್ತು ಮಾನವೀಯ ಹಕ್ಕುಗಳಿಂದ ವಂಚಿತರಾಗಿರುವುದು ನೋವಿನ ಸಂಗತಿ.


ಈ ದಿನವು ಕೇವಲ ಆಚರಣೆಗಾಗಿ ಅಲ್ಲ; ಕಾರ್ಮಿಕರ ಸಮಸ್ಯೆಗಳ ಬಗ್ಗೆ ಚಿಂತನೆ ಮಾಡಲು, ಅವರ ಹಕ್ಕುಗಳನ್ನು ಕಾಪಾಡಲು, ಸಮಾನತೆ ಮತ್ತು ನ್ಯಾಯವನ್ನು ಸ್ಥಾಪಿಸಲು ಪ್ರತಿಯೊಬ್ಬರಿಗೂ ಜವಾಬ್ದಾರಿ ನೆನಪಿಸುವ ದಿನವಾಗಿದೆ. ಸರ್ಕಾರಗಳು, ಸಂಸ್ಥೆಗಳು ಮತ್ತು ಸಮಾಜ ಒಟ್ಟಾಗಿ ಕಾರ್ಮಿಕರ ಜೀವನಮಟ್ಟವನ್ನು ಉತ್ತಮಗೊಳಿಸಲು ಕ್ರಮಗಳನ್ನು ಕೈಗೊಳ್ಳಬೇಕು.

ಒಟ್ಟಿನಲ್ಲಿ, ಕಾರ್ಮಿಕರ ದಿನಾಚರಣೆ ಹೋರಾಟದಿಂದ ಹುಟ್ಟಿದ ಹಬ್ಬ. ಇದು ಶ್ರಮದ ಮೌಲ್ಯವನ್ನು ಸಾರುವ ದಿನ. ಕಾರ್ಮಿಕರ ಪರಿಶ್ರಮವಿಲ್ಲದೆ ಯಾವುದೇ ಸಮಾಜವೂ ಅಭಿವೃದ್ಧಿಯಾಗಲು ಸಾಧ್ಯವಿಲ್ಲ ಎಂಬುದನ್ನು ಈ ದಿನವು ನಮಗೆ ಮತ್ತೆ ಮತ್ತೆ ನೆನಪಿಸುತ್ತದೆ. ಅವರ ಕೈಗಳ ಶ್ರಮವೇ ನಮ್ಮ ಜೀವನವನ್ನು ಸುಗಮಗೊಳಿಸುತ್ತದೆ. ಆದ್ದರಿಂದ, ಕಾರ್ಮಿಕರ ಗೌರವವನ್ನು ಉಳಿಸಿ, ಅವರ ಹಕ್ಕುಗಳನ್ನು ಕಾಪಾಡುವುದು ನಮ್ಮ ಎಲ್ಲರ ಕರ್ತವ್ಯವಾಗಿದೆ.

# ಕಾಯಕ ಯೋಗಿ

ಬೆವರಿನ ಶ್ರಮಜೀವಿಗಳು ನಾವು
ದುಡಿಯುವುದು ಹಸಿವ ತಣಿಸಲು
ಆ ಕೆಲಸ ಈ ಕೆಲಸವೆನ್ನದೆ
ನೀವು ತೋರಿದ ಸಕಲ ಕಾಯಕವ ಮಾಡುವೆವು...
ಕಾಯಕವೆಂದರೆ ಎಲ್ಲವೂ ಹೌದು!
ವಿಧ ವಿಧವಾಗಿ ವಿಂಗಡಿಸಿ
ಶ್ರೇಷ್ಠತೆಯ ಅಮಲನ್ನೇರಿಸಿ
ಅಹಂ ಪಡುವವರಲ್ಲ ನಾವು...
ಜಾತಿ–ವಿಜಾತಿಯ ಭೇದವೆಣಿಸದೆ
ಕಾಯಕದೊಳಗೆ ಮುಕ್ತಿ ಕಂಡು
ಕಾಯಕವೇ ಶ್ರೇಷ್ಠವೆಂದರಿತ
ಬಸವಣ್ಣನ ತತ್ವದ ಗರಿಬಿಚ್ಚಿದವರು...
ಎಸಿ ರೂಮಿನಲಿ ಕುಳಿತು
ಸಮಯ ನೋಡುವ ಕಾಯಕವಲ್ಲ ನಮ್ಮದು
ಮುಂದಿರುವ ಕೆಲಸ ಹೊತ್ತಾದರೂ
ಮುಗಿಸಿ ನಿಟ್ಟುಸಿರಿಡುವ ಜಾಯಮಾನದವರು...
ಕಸ ಬಿದ್ದ ಜಾಗದಿ ಬೆವರ ಹನಿ
ಸುರಿಸಿ; ಮಾಡುವೆವು ಸ್ವಚ್ಛ ನಗರವ
ಕಾಣುವುದು ನಿಮಗೆ ಇವನೆಷ್ಟು ಕೊಳೆಯೆಂದು
ತಿಳಿಯದು ನಿಮಗೆ ನಮ್ಮ ಹಸಿವಿನ ದಾಹವೇನೆಂದು...
ಹಸಿವಿನ ದಾಹವ ತಿಳಿದೂ; ಏನನ್ನಾದರೂ
ಮಾಡಬಲ್ಲನೆಂಬ ನಿಮ್ಮ ಅಹಂಕಾರಕ್ಕೆ
ನಾನು ಮಲ ಹೊರುವವನಲ್ಲ
ನಿಮ್ಮಂತೆಯೇ ರಕ್ತಮಾಂಸದ ಮನುಷ್ಯ ನಾನು...
ಸಂಬಳ ನೀಡಿ ದೇವರಾಗುವ ನೀವು
ಗೌರವ ನೀಡಿ ಮೊದಲು ಮನುಷ್ಯರಾಗಿ
ಮಾಡುವ ಕೆಲಸ ನಿಮ್ಮದಾದರೂ
ನಿಮ್ಮ ನಂಬಿಕೆಗೆ ಉಸಿರಾದವರು ನಾವು...
ಕೊಟ್ಟಷ್ಟು ಪಡೆದು, ಇರುಳೆಲ್ಲ ದುಡಿದು
ಹೆಂಡತಿ ಮಕ್ಕಳ ಹೊಟ್ಟೆ ತಣಿಸಲು
ನೀಡಿದ ಕಾಸು ಅಂದಿನ ರಾತ್ರಿಗೆ ಸವೆದರೂ
ನಾಳಿನ ಬದುಕಿನ ಬಂಡಿ ಎಳೆಯುವವರು...
ಜೀತದಾಳುಗಳಲ್ಲ ನಾವು
ನಿಮ್ಮಂತೆಯೇ ಸಮಾನ ಮನುಷ್ಯರು
ರಾತ್ರಿಯೆಲ್ಲ ದುಡಿಯಲು ಯಂತ್ರವಲ್ಲ
ಹಾಕಿದ್ದನ್ನು ತಿಂದು ಬಿದ್ದಿರುವ ಪ್ರಾಣಿಯಲ್ಲ...
ನಾವಿರುವುದು ಬರಿ ನಮ್ಮ ಉದರಕ್ಕಲ್ಲ,
ಲೋಕದ ಹಸಿವು ನೀಗುವ ಕಾಯಕ ಯೋಗಿಗಳು;
ಅಸಮಾನತೆಯ ಮಸಿಯನು ತೊಳೆದುಬಿಡಿ,
ಸಮಾನತೆಯ ಹಾಲಿನ ಬೆಳಕ ನೀಡಿ ಗೌರವಿಸಿ...

ಡಾ.ಕೃಷ್ಣಮೂರ್ತಿ.
ಆರ್ ಉಡೇವಾ









# ಕುಸ್ತಿ ಅಂಗಳದ ಧೂಳು
## ಪೈಲ್ವಾನರ ದೇಶಿ ಆರೋಗ್ಯ ಸೂತ್ರ



ಅಂತರಂಗದ ಮಾತು
ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

ಭಾರತೀಯ ಮಣ್ಣಿನ ಕುಸ್ತಿಯು ಕೇವಲ ಶಕ್ತಿಯ ಪ್ರದರ್ಶನವಲ್ಲ, ಅದು ಪ್ರಕೃತಿಯ ಸವಾಲುಗಳನ್ನು ಎದುರಿಸುವ ಒಂದು ಅದ್ಭುತ ಜೀವನಶೈಲಿ. ಗರಡಿ ಮನೆಯ ಅಖಾಡದಲ್ಲಿ ಪೈಲ್ವಾನರು ಕಸರತ್ತು ನಡೆಸುವಾಗ ಏಳುವ ಮಣ್ಣಿನ ಧೂಳು ಆರೋಗ್ಯಕ್ಕೆ ಸವಾಲೊಡ್ಡಿದರೂ, ಅದನ್ನು ಜಯಿಸಲು ನಮ್ಮ ದೇಶಿ ಕುಸ್ತಿ ಪರಂಪರೆಯು ಅತ್ಯಂತ ವೈಜ್ಞಾನಿಕ ಮಾರ್ಗಗಳನ್ನು ಕಂಡುಕೊಂಡಿದೆ. ಕುಸ್ತಿಯ ತೀವ್ರ ಪಟ್ಟುಗಳ ವೇಳೆ ಉಸಿರಾಟದ ವೇಗ ಹೆಚ್ಚಿರುತ್ತದೆ. ಈ ಸಮಯದಲ್ಲಿ ಮಣ್ಣಿನ ಕಣಗಳು ಶ್ವಾಸಕೋಶ ಸೇರಿ ಕೆಮ್ಮು ಅಥವಾ ಕಿರಿಕಿರಿ ಉಂಟುಮಾಡದಂತೆ ತಡೆಯಲು ಪೈಲ್ವಾನರು ಪ್ರಾಣಾಯಾಮವನ್ನು ಅಭ್ಯಾಸ ಮಾಡುತ್ತಾರೆ ಇದು ಶ್ವಾಸಕೋಶದ ಸಾಮರ್ಥ್ಯವನ್ನು ಹೆಚ್ಚಿಸಿ ಧೂಳಿನಿಂದಾಗುವ ಹಾನಿಯನ್ನು ತಗ್ಗಿಸುತ್ತದೆ. ಧೂಳಿನ ಪ್ರಭಾವವನ್ನು ಆಂತರಿಕವಾಗಿ ಎದುರಿಸಲು ಪೈಲ್ವಾನರು ಬಳಸುವ ಅತಿ ಮುಖ್ಯ ಅಸ್ತ್ರಗಳೆಂದರೆ ಬೆಲ್ಲ ಮತ್ತು ಹಸಿ ಈರುಳ್ಳಿ. ಬೆಲ್ಲವು ನೈಸರ್ಗಿಕ ಶ್ವಾಸಕೋಶ ಶುದ್ಧೀಕಾರಕವಾಗಿ ಕೆಲಸ ಮಾಡಿ ಶ್ವಾಸನಾಳದಲ್ಲಿ ಸಿಲುಕಿದ



ಧೂಳನ್ನು ಹೊರಹಾಕಲು ನೆರವಾದರೆ, ಹಸಿ ಈರುಳ್ಳಿಯಲ್ಲಿನ ಅಲಿಸಿನ್ ಅಂಶವು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ.

ಕುಸ್ತಿಯ ನಂತರ ಇವೆರಡರ ಸೇವನೆಯು ದೇಹದ ಉಷ್ಣತೆಯನ್ನು ಸಮತೋಲನಗೊಳಿಸಿ ಧೂಳಿನಿಂದ ಉಂಟಾಗುವ ಅಲರ್ಜಿಯನ್ನು ಸಮರ್ಥವಾಗಿ ತಡೆಯುತ್ತದೆ. ಅಭ್ಯಾಸದ ನಂತರ ಮೂಗಿನ ಹೊಳ್ಳೆಗಳಲ್ಲಿನ ಧೂಳನ್ನು ಹೊರಹಾಕಲು ಪೈಲ್ವಾನರು ಪುರಾತನ ಶುದ್ಧೀಕರಣ ವಿಧಾನಗಳನ್ನು ಬಳಸುತ್ತಾರೆ. ಉಪ್ಪು ನೀರಿನಿಂದ ಮೂಗು ತೊಳೆಯುವ ಜಲನೇತಿ ಕ್ರಿಯೆಯು ಶ್ವಾಸನಾಳದ ಮಾರ್ಗವನ್ನು ಸುಗಮಗೊಳಿಸುತ್ತದೆ. ಹಾಗೆಯೇ, ಹಸುವಿನ ತುಪ್ಪವನ್ನು ಮೂಗಿಗೆ ಹಾಕಿಕೊಳ್ಳುವ ನಸ್ಯ ಕ್ರಮವು ಧೂಳು ಶ್ವಾಸಕೋಶಕ್ಕೆ ಹೋಗದಂತೆ ತಡೆಯುವ ನೈಸರ್ಗಿಕ ಫಿಲ್ಟರ್‌ನಂತೆ ಕೆಲಸ ಮಾಡುತ್ತದೆ. ಧೂಳಿನ ಸಮಸ್ಯೆಯನ್ನು ಮೂಲದಲ್ಲೇ ನಿಯಂತ್ರಿಸಲು ಅಖಾಡದ ಮಣ್ಣನ್ನು ವಿಶೇಷವಾಗಿ ಹದಗೊಳಿಸಲಾಗುತ್ತದೆ.

ಮಣ್ಣಿಗೆ ನಿಯಮಿತವಾಗಿ ಹಾಲು, ಮೊಸರು, ಎಣ್ಣೆ, ಲಿಂಬೆ ರಸವನ್ನು ಬೆರೆಸಲಾಗುತ್ತದೆ. ಈ ಮಿಶ್ರಣವು ಮಣ್ಣನ್ನು ಮೃದುವಾಗಿ ಮತ್ತು ತೇವವಾಗಿರಿಸಿ ಧೂಳು ಏಳದಂತೆ ನೋಡಿಕೊಳ್ಳುತ್ತದೆ. ಅಷ್ಟೇ ಅಲ್ಲದೆ, ಇದರಲ್ಲಿ ಬೆರೆಸುವ ಬೇವಿನ ಸೊಪ್ಪಿನ ರಸವು ನೈಸರ್ಗಿಕ ಕ್ರಿಮಿನಾಶಕವಾಗಿ ಚರ್ಮದ ಸೋಂಕುಗಳನ್ನು ತಡೆಯುತ್ತದೆ. ಮಣ್ಣಿನಲ್ಲಿ ಹುಟ್ಟಿ ಬೆಳೆಯುವ ಪೈಲ್ವಾನರು ಪ್ರಕೃತಿದತ್ತವಾದ ಮಾರ್ಗಗಳ ಮೂಲಕವೇ ಆರೋಗ್ಯವನ್ನು ಕಾಪಾಡಿಕೊಳ್ಳುವ ಈ ಸಾಂಪ್ರದಾಯಿಕ ಸೂತ್ರಗಳು ಇಂದಿನ ಆಧುನಿಕ ಕಾಲದ ಕ್ರೀಡಾಪಟುಗಳಿಗೂ ಅತ್ಯುತ್ತಮ ಪಾಠಗಳಾಗಿವೆ.

# ನೊಣಗಳ ಕಾಟ ಹೆಚ್ಚಿದೆಯೇ ನೆಲ ಒರೆಸುವ ನೀರಿಗೆ ನಿಂಬೆ ರಸ ಅಥವಾ ವಿನೆಗರ್ ಸೇರಿಸಿ ಪರಿಹಾರ ಪಡೆಯಿರಿ

ಮನೆಯೊಳಗೆ ಆಗಾಗ ನೊಣಗಳು ಕಾಣಿಸಿಕೊಳ್ಳುತ್ತವೆ ಎಂದರೆ ಮುಂದಿನ ದಿನಗಳಲ್ಲಿ ಗಂಭೀರ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆಗಳು ಇರುತ್ತವೆ! ಯಾಕೆಂದರೆ ನೊಣಗಳ ಹೆಚ್ಚಾಗಿ ಕೊಳಕು ಇರುವ ಪ್ರದೇಶದಲ್ಲಿ, ಕಸ ಕೆಸರಿನ ಮೇಲೆ ಕುಳಿತು, ನಂತರ ಮನೆಯ ತೆರೆದ ಆಹಾರ ಪದಾರ್ಥಗಳ ಮೇಲೆ ಕುಳಿತುಕೊಂಡು ಅವುಗಳನ್ನು ಕಲುಷಿತಗೊಳಿಸುತ್ತವೆ ಇದರಿಂದ ಭೇದಿ, ಟೈಫಾಯಿಡ್, ಅತಿಸಾರದಂತಹ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆಗಳು ಇರುತ್ತವೆ, ಅಂತೆಯೇ ಕೀಟಗಳು ಕೂಡ ಅಷ್ಟೇ ಬೇಗನೇ ಬ್ಯಾಕ್ಟೀರಿಯಾಗಳನ್ನು ಹರಡಲು ಕಾರಣವಾಗುತ್ತವೆ! ವಿಶೇಷವಾಗಿ ಬೇಸಿಗೆಯಲ್ಲಿ ನೊಣ ಕೀಟಗಳ ಕಾಟ ಸ್ವಲ್ಪ ಜಾಸ್ತಿಯೇ ಇರುತ್ತವೆ, ಹೀಗಾಗಿ ಮನೆಗೆ ಕರೆಯದೇ ಬರುವ ಇಂತಹ ಅತಿಥಿಗಳನ್ನು ಮನೆಯಿಂದ ಹೊರ ಹಾಕುವುದು ಹೇಗೆ ಎನ್ನುವುದನ್ನು ನೋಡೋಣ ಬನ್ನಿ

**ನೀರಿನೊಂದಿಗೆ ವಿನೆಗರ್ ಮಿಶ್ರಣ ಮಾಡಿ:** ಸ್ವಲ್ಪ ವಿನೆಗರ್, ನೀರನ್ನು ಮಿಶ್ರಣ ಮಾಡಿ ನೆಲದ ಮೇಲೆ ಸಿಂಪಡಿಸುವುದು, ನೆಲ ಒರೆಸುವ ನೀರಿಗೆ ವಿನೆಗರ್ ಮಿಶ್ರಣ, ಸ್ವಚ್ಛಗೊಳಿಸಿದರೆ ನೊಣ ಕೀಟಗಳು ಕ್ರಮೇಣವಾಗಿ ದೂರವಾಗುತ್ತವೆ ಯಾಕೆಂದ್ರೆ, ವಿನೆಗರ್‌ನ ತೀವ್ರವಾದ ವಾಸನೆಯು ನೊಣಗಳನ್ನು ದೂರವಿಡುತ್ತದೆ, ನೆಲದ ಮೇಲಿನ ಕಲೆಗಳು ಕೂಡ ನಿವಾರಣೆಯಾಗಿ, ಫಳಫಳ ಹೊಳೆ ಯುತ್ತವೆ! ಇನ್ನೂ ವಿಶೇಷವಾಗ ವಿನೆಗರ್ ನೈಸರ್ಗಿಕವಾಗಿ ಬ್ಯಾಕ್ಟೀರಿಯಾ ವಿರೋಧಿ ಗುಣ ಗಳನ್ನು ಹೊಂದಿರುವ ಕಾರಣ, ಇದು ನೆಲವನ್ನು ಸ್ವಚ್ಛಗೊಳಿಸಲು ಮತ್ತು ಸೂಕ್ಷ್ಮ ಜೀವಿಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಇನ್ನು ವಿನೆಗರ್ ವಾಸನೆ ಹೋದ ನಂತರ ನೊಣಗಳು ಮತ್ತೆ ಬರಬಹುದು ಆದ್ದರಿಂದ ಆಗಾಗ್ಗೆ ಈ ವಿಧಾನವನ್ನು ಅನುಸರಿಸುವುದು ಅವಶ್ಯಕ.

**ಬ್ಯಾಕ್ಟೀರಿಯಾ ವಿರೋಧಿ ಗುಣ**

**ಅಧ್ಯಯನದ ಪ್ರಕಾರ** PubMed Central ಅಧ್ಯಯನದ ಪ್ರಕಾರ ವಿನೆಗರ್ ಇ.ಕೋಲಿಯಂತಹ ಬ್ಯಾಕ್ಟೀರಿಯಾಗಳಿಂದ ಕಲುಷಿತಗೊಂಡ ಮೇಲ್ಮೈಗಳನ್ನು ಸ್ವಚ್ಛಗೊಳಿಸುವಲ್ಲಿ ಪರಿಣಾಮಕಾರಿಯಾಗಿದೆ. ಪ್ರಮುಖವಾಗಿ ಇದು ರಾಸಾಯನಿಕ ಕ್ಲೀನರ್‌ಗಳಿಗೆ ಪರ್ಯಾಯವಾಗಿ ಬಳಸಬಹುದಾದ ಸುರಕ್ಷಿತ ಮತ್ತು ವಿಷಕಾರಿಯಲ್ಲದ ನೈಸರ್ಗಿಕ ಲಿಕ್ವಿಡ್ ಆಗಿದೆ.

**ಪಟಿಕವನ್ನು ಅಥವಾ ಆಲಂ ಕಲ್ಲನ್ನು ಬಳಸಿ:** ನೆಲ ಒರೆಸುವ ನೀರಿನೊಂದಿಗೆ ಪಟಿಕವನ್ನು, ಆಲಂ ಕಲ್ಲನ್ನು ಮಿಶ್ರಣ ಮಾಡಿ ನೆಲ ಸ್ವಚ್ಛಗೊಳಿಸುವುದರಿಂದ ಸೂಕ್ಷ್ಮಜೀವಿಗಳು ಕಡಿಮೆಯಾಗುತ್ತವೆ, ಮನೆ ನೈರ್ಮಲ್ಯವಾಗಿರಲು ಸಹಾಯವಾಗುತ್ತದೆ ಯಾಕೆಂದ್ರೆ,



ಪಟಿಕವು ನೈಸರ್ಗಿಕವಾಗಿ ಸೋಂಕು ನಿವಾರಕ ಗುಣಗಳು ನೊಣ ಕೀಟಗಳನ್ನು ದೂರವಿರಿಸುವುದರ ಜೊತೆಗೆ ನೆಲವನ್ನು ಹೊಳೆಯುವಂತೆ ಮಾಡಿ ಸೋಂಕಿನ ಅಪಾಯವನ್ನು ಕೂಡ ಕಡಿಮೆ ಮಾಡುತ್ತದೆ. ಆದರೆ ನೆನಪಿಡಿ ಪಟಿಕವನ್ನು ಅತಿಯಾಗಿ ಬಳಸಬೇಡಿ.

**ನೀರಿನೊಂದಿಗೆ ನಿಂಬೆ ರಸವನ್ನು ಮಿಶ್ರಣ ಮಾಡಿ:** ನೆಲ ಒರೆಸುವ ನೀರಿಗೆ ಅರ್ಧ ನಿಂಬೆ ರಸವನ್ನು ಸೇರಿಸುವುದರಿಂದ ನೆಲವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಲು ಸಹಾಯ ಮಾಡುವುದಲ್ಲದೆ, ನಿಂಬೆ ಪರಿಮಳವು ನಿಮ್ಮ ಮನೆಯನ್ನು ತಾಜಾವಾಗಿಡಲು ಸಹಾಯ ಮಾಡುತ್ತದೆ. ಇದಲ್ಲದೆ, ನಿಂಬೆ ಪರಿಮಳವು ನೊಣಗಳು ಮತ್ತು ಕೀಟಗಳನ್ನು ದೂರವಿಡುವಲ್ಲಿ ಪರಿಣಾಮಕಾರಿಯಾಗಿದೆ. ಒಳ್ಳೆಯ ಫಲಿತಾಂಶಕ್ಕಾಗಿ ನೆಲ ಒರೆಸುವ ನೀರಿಗೆ ಅರ್ಧ ನಿಂಬೆ ರಸ ಮತ್ತು ಲವಂಗದ ಪುಡಿಯನ್ನು ಬೆರೆಸಿ ಒರೆಸುವುದರಿಂದ ಸೊಳ್ಳೆ, ನೊಣಗಳು ದೂರವಾಗುತ್ತವೆ. ನೆನಪಿಡಿ ಗ್ರಾನೈಟ್ ನೆಲದ ಮೇಲೆ ನಿಂಬೆ ರಸವನ್ನು ಬಳಸಬೇಡಿ, ಏಕೆಂದರೆ ಆಮ್ಲೀಯತೆಯು ಕಲ್ಲನ್ನು ಹಾನಿಗೊಳಿಸಬಹುದು

**ನಿಂಬೆಯ ಬಗ್ಗೆ ಅಧ್ಯಯನದಲ್ಲಿ ಹೇಳಿರುವ ಪ್ರಕಾರ:**
PubMed Central ಅಧ್ಯಯನದ ಪ್ರಕಾರ ನಿಂಬೆ ರಸವು ನೈಸರ್ಗಿಕ ಜೈವಿಕ ನಾಶಕ ಏಜೆಂಟ್‌ಆಗಿ ಕಾರ್ಯನಿರ್ವಹಿಸುತ್ತದೆ, ಇದು ವಿಬ್ರಿಯೊ ಕಾಲರಾ , ಇ. ಕೋಲಿಯಂತಹ ರೋಗ ಕಾರಕಗಳನ್ನು ಕಡಿಮೆ ಮಾಡುವಲ್ಲಿ ಪರಿಣಾಮಕಾರಿ ಯಾಗಿದೆ ಎಂದು ಸೂಚಿಸುತ್ತದೆ.

# ಪ್ರತಿಯೊಬ್ಬರೂ ನುಗ್ಗೆಸೊಪ್ಪನ್ನು ಸೇವಿಸಲೇಬೇಕು

ಮೊರಿಂಗಾ ಎಲೆಗಳನ್ನು ನಿಮ್ಮ ಆಹಾರದಲ್ಲಿ ಸೇರಿಸಿಕೊಳ್ಳುವುದು ತುಂಬಾ ಪ್ರಯೋಜನಕಾರಿ ಏಕೆಂದರೆ ಅವು ಸರಳ ಮತ್ತು ನೈಸರ್ಗಿಕ ರೀತಿಯಲ್ಲಿ ಒಟ್ಟಾರೆ ಆರೋಗ್ಯವನ್ನು ಬೆಂಬಲಿಸುವ ಪ್ರಮುಖ ಪೋಷಕಾಂಶಗಳಲ್ಲಿ ಸಮೃದ್ಧವಾಗಿವೆ. ನುಗ್ಗೆಸೊಪ್ಪು ಸಾಕಷ್ಟು ಪೋಷಕಾಂಶಗಳಿಂದ ಕೂಡಿದ್ದು, ಇದು ರೋಗನಿರೋಧಕ ಶಕ್ತಿ, ಜೀರ್ಣಕ್ರಿಯೆ ಮತ್ತು ಇದು ರೋಗನಿರೋಧಕ ಶಕ್ತಿಯನ್ನು ಸುಧಾರಿಸಲು, ದೇಹವನ್ನು ಸೋಂಕುಗಳಿಂದ ರಕ್ಷಿಸಲು ಸಹಕಾರಿಯಾಗಿದೆ. ಇದನ್ನು ನಿಮ್ಮ ಊಟಕ್ಕೆ ಸೇರಿಸುವುದು ಏಕೆ ಮುಖ್ಯ ಎನ್ನುವುದನ್ನು ಬೆಂಗಳೂರಿನ ಆಸ್ಟರ್ ಸಿಎಂಐ ಆಸ್ಪತ್ರೆಯ ಕ್ಲಿನಿಕಲ್ ನ್ಯೂಟ್ರಿಷಿಯನ್ ಎಡ್ವಿನಾ ರಾಜ್ ತಿಳಿಸಿದ್ದಾರೆ.



### ನುಗ್ಗೆ ಸೊಪ್ಪಿನ ಆರೋಗ್ಯ ಪ್ರಯೋಜನಗಳು

- ರೋಗನಿರೋಧಕ ಶಕ್ತಿಯನ್ನು ಬಲಪಡಿಸುವುದು.
- ಶಕ್ತಿಯನ್ನು ಸುಧಾರಿಸುವುದು ಮತ್ತು ಆಯಾಸವನ್ನು ಕಡಿಮೆ ಮಾಡುವುದು.
- ಹೃದಯ ಮತ್ತು ಚಯಾಪಚಯ ಆರೋಗ್ಯವನ್ನು ಬೆಂಬಲಿಸುವುದು.
- ಜೀರ್ಣಕಾರಿ ಸಮತೋಲನವನ್ನು ಉತ್ತೇಜಿಸುವುದು.



- ಉರಿಯೂತವನ್ನು ನಿರ್ವಹಿಸಲು ಸಹಾಯ ಮಾಡುವುದು.
- ಚರ್ಮ, ಕೂದಲು ಮತ್ತು ಕಣ್ಣಿನ ಆರೋಗ್ಯವನ್ನು ಬೆಂಬಲಿಸುವುದು.
- ಮಲಬದ್ಧತೆಯಂತಹ ಸಮಸ್ಯೆಗಳನ್ನು ತಡೆಯುತ್ತದೆ.
- ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

### ನುಗ್ಗೆ ಸೊಪ್ಪಿನ ರಸದ ಪ್ರಯೋಜನಗಳು

- ವೇಗವಾದ ಪೋಷಕಾಂಶಗಳ ಹೀರಿಕೊಳ್ಳುವಿಕೆ.
- ಸುಧಾರಿತ ಜೀರ್ಣಕ್ರಿಯೆ ಮತ್ತು ನಿರ್ವಿಶೀಕರಣ ಬೆಂಬಲ.
- ವರ್ಧಿತ ಶಕ್ತಿಯ ಮಟ್ಟಗಳು.
- ಸೂಕ್ಷ್ಮ ಪೋಷಕಾಂಶಗಳ ಬೆಂಬಲದೊಂದಿಗೆ ಉತ್ತಮ ಜಲಸಂಚಯನ.
- ಯಕೃತ್ತು ಮತ್ತು ಕರುಳಿನ ಆರೋಗ್ಯಕ್ಕೆ ಬೆಂಬಲ.
- ರಕ್ತದ ಸಕ್ಕರೆ ಮತ್ತು ಹೃದಯದ ಆರೋಗ್ಯಕ್ಕೆ ಉತ್ತಮ.
- ಕೆಲವು ಇತ್ತೀಚಿನ ಸಂಶೋಧನೆಗಳ ಪ್ರಕಾರ ನುಗ್ಗೆಸೊಪ್ಪು ರಕ್ತದಲ್ಲಿನ. ಸಕ್ಕರೆ ಮತ್ತು ಚಯಾಪಚಯ ಕ್ರಿಯೆಯಂತಹ ವಿಷಯಗಳಿಗೆ ಸಹಾಯ ಮಾಡುತ್ತದೆ.
- ಉರಿಯೂತವನ್ನು ಕಡಿಮೆ ಮಾಡುತ್ತದೆ.
- ಆರೋಗ್ಯಕರ ರಕ್ತದೊತ್ತಡವನ್ನು ಬೆಂಬಲಿಸುವುದು.

**ನುಗ್ಗೆಸೊಪ್ಪನ್ನು ಯಾವ ರೀತಿ ಡಯೆಟ್‌ನಲ್ಲಿ ಸೇರಿಸಬಹುದು:** ಅವುಗಳನ್ನು ದೈನಂದಿನ ಊಟದಲ್ಲಿ ಸೇರಿಸುವುದು ಸುಲಭ, ಏಕೆಂದರೆ ಅವುಗಳನ್ನು ಸೂಪ್‌ಗಳು, ದಾಲ್‌ಗಳು, ಕರಿಗಳಿಗೆ ಸೇರಿಸಬಹುದು ಅಥವಾ ನೀರು ಅಥವಾ ಸ್ಮೂಥಿಗಳೊಂದಿಗೆ ಬೆರೆಸಿ ಪುಡಿಯಾಗಿ ಸೇವಿಸಬಹುದು, ಇದು ದೈನಂದಿನ ಭಾರತೀಯ ಆಹಾರಕ್ರಮಕ್ಕೆ ಪ್ರಾಯೋಗಿಕ ಸೇರ್ಪಡೆಯಾಗಿದೆ.

ಒಟ್ಟಾರೆಯಾಗಿ, ಮೊರಿಂಗಾ ಎಲೆಗಳನ್ನು ನಿಯಮಿತವಾಗಿ ಸಣ್ಣ ಪ್ರಮಾಣದಲ್ಲಿ ಸೇರಿಸುವುದರಿಂದ ಪೋಷಣೆಯನ್ನು ಸುಧಾರಿಸಬಹುದು, ದೇಹದ ಕಾರ್ಯಗಳನ್ನು ಬೆಂಬಲಿಸಬಹುದು ಮತ್ತು ನೈಸರ್ಗಿಕ ಮತ್ತು ಕೈಗೆಟುಕುವ ರೀತಿಯಲ್ಲಿ ಉತ್ತಮ ಆರೋಗ್ಯವನ್ನು ಉತ್ತೇಜಿಸಬಹುದು.

### ನುಗ್ಗೆ ಸೊಪ್ಪಿನಲ್ಲಿರುವ ಪೋಷಕಾಂಶಗಳು

- ಸಸ್ಯ ಆಧಾರಿತ ಪ್ರೋಟೀನ್.
- ವಿಟಮಿನ್‌ಗಳು ಎ, ಸಿ ಮತ್ತು ಇ.
- ಕ್ಯಾಲ್ಸಿಯಂ, ಕಬ್ಬಿಣ, ಪೊಟ್ಯಾಸಿಯಮ್ ಮತ್ತು ಮೆಗ್ನೀಸಿಯಮ್.
- ಉತ್ಕರ್ಷಣ ನಿರೋಧಕಗಳು ಮತ್ತು ಉರಿಯೂತದ ಸಂಯುಕ್ತಗಳು.
- ನಾರು ಮತ್ತು ಅಗತ್ಯ ಅಮೈನೋ ಆಮ್ಲಗಳು.

• ವಿಶ್ವಗುರು ಮತ್ತು ಸಂಸ್ಕೃತಿ ನಾಯಕ ಬಸವೇಶ್ವರರ 893ನೇ ಜಯಂತ್ಯೋತ್ಸವ ಕಾರ್ಯಕ್ರಮ

# ಬಸವಣ್ಣನವರ ತತ್ವಗಳು ಪ್ರಜಾಪ್ರಭುತ್ವದ ಮೂಲಾಧಾರಗಳಾಗಿವೆ: ಶಂಕರ ಬಿದರಿ

• ಉದಯವಾಹಿನಿ, ವಿಜಯಪುರ

ಬಸವೇಶ್ವರರು ಪ್ರಪಂಚದ ಸಂಸ್ಕೃತಿ ನಾಯಕರಾಗಿದ್ದು, ಅವರು ಬೋಧಿಸಿದ ತತ್ವಗಳು ಭಾರತೀಯ ಸಂವಿಧಾನದ ಉನ್ನತ ಮೌಲ್ಯಗಳಾಗಿ ರೂಪುಗೊಂಡಿವೆ. ಸಮಾನತೆ, ಭ್ರಾತೃತ್ವ, ಸಾಮಾಜಿಕ ನ್ಯಾಯ ಮತ್ತು ಮಾನವೀಯತೆ ಎಂಬ ಮೂಲಭೂತ ತತ್ವಗಳನ್ನು ಅವರು 12ನೇ ಶತಮಾನದಲ್ಲಿಯೇ ಪ್ರತಿಪಾದಿಸಿದ್ದು, ಇವು ಇಂದಿನ ಪ್ರಜಾಪ್ರಭುತ್ವದ ಮೂಲಾಧಾರಗಳಾಗಿವೆ'' ಎಂದು ರಾಜ್ಯದ ನಿವೃತ್ತ ಪೊಲೀಸ್ ಮಹಾನಿರ್ದೇಶಕರೂ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ರಾಜ್ಯ ಘಟಕದ ಅಧ್ಯಕ್ಷರಾದ ಶಂಕರ ಎಂ. ಬಿದರಿ ಹೇಳಿದರು.

ಇಲ್ಲಿಯ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಕನ್ನಡ ಭವನದಲ್ಲಿ ಬಸವೇಶ್ವರ ಅಧ್ಯಯನ ಪೀಠದ ವತಿಯಿಂದ ಹಮ್ಮಿಕೊಂಡಿದ್ದ ''ವಿಶ್ವಗುರು ಮತ್ತು ಸಂಸ್ಕೃತಿ ನಾಯಕ ಬಸವೇಶ್ವರರ 893ನೇ ಜಯಂತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

**ಬಸವಣ್ಣನವರ ವಚನಗಳು ಕೇವಲ ಧಾರ್ಮಿಕ ಉಪದೇಶಗಳಲ್ಲ;** ಅವು ಜೀವನಪಾಠಗಳಾಗಿವೆ. ಕಾಯಕವೇ ಕೈಲಾಸ ಎಂಬ ಅವರ ಸಂದೇಶವು ಕೆಲಸದ ಗೌರವವನ್ನು ಎತ್ತಿಹಿಡಿಯುತ್ತದೆ. ಪ್ರತಿಯೊಬ್ಬರೂ ತಮ್ಮ ಪರಿಶ್ರಮದಿಂದ ಜೀವನ ನಡೆಸಬೇಕು ಮತ್ತು ಯಾವುದೇ ಕೆಲಸವನ್ನು ಹೀನ-ಶ್ರೇಷ್ಠತೆಗಳ ಅಳತೆಯಲ್ಲಿ ನೋಡುವುದನ್ನು ತೊರೆದು ಗೌರವದಿಂದ ಕಾಣಬೇಕು ಎಂದು ಅವರು ಹೇಳಿದರು. ಈ ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾಧ್ಯಕ್ಷರಾಗಿರುವ ವಿ.ಸಿ.ನಾಗಠಾಣ ಅವರು, ವಿದ್ಯಾರ್ಥಿನಿಯರು ಬಸವಣ್ಣರ ಆಚಾರ ವಿಚಾರಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಮಾಜದ ಸೇವೆ ಮಾಡುವ ಜೊತೆಗೆ ಅಕ್ಕಮಹಾದೇವಿಯ ವಿಚಾರಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದರು.



ಉದಯವಾಹಿನಿ ಚಿತ್ರ

> ಶಿಕ್ಷಣವೆಂಬುದು ಕೇವಲ ಪದವಿ ಪಡೆಯುವುದಕ್ಕೆ ಸೀಮಿತವಾಗಿರದೆ ವ್ಯಕ್ತಿತ್ವ ನಿರ್ಮಾಣಕ್ಕೆ ಕಾರಣವಾಗಬೇಕು. ಆತ್ಮವಿಶ್ವಾಸ, ಶಿಸ್ತಿನ ಜೀವನ, ಪರಿಶ್ರಮ ಮತ್ತು ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡರೆ ಜೀವನದಲ್ಲಿ ಯಾವುದೇ ಗುರಿಯನ್ನು ಸಾಧಿಸಲು ಸಾಧ್ಯ. ಈ ಗುರಿ ಸಾಧನೆಗೆ ಮಹಿಳಾ ವಿವಿಯಲ್ಲಿ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿರುವುದು ಸಂತಸದ ಸಂಗತಿ. -ಶಂಕರ ಬಿದರಿ

> 12ನೇ ಶತಮಾನದಲ್ಲಿ ಬಸವಣ್ಣನವರು ಬೋಧಿಸಿದ ತತ್ವಗಳು ಕಾಲಾತೀತವಾಗಿದ್ದು, ಇಂದಿನ ಸಮಾಜಕ್ಕೂ ದಿಕ್ಕು ತೋರಿಸುತ್ತಿವೆ. ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯವನ್ನು ಸ್ಥಾಪಿಸಲು ಅವರ ಚಿಂತನೆಗಳು ಮಾರ್ಗದರ್ಶಕವಾಗಿವೆ'' ಎಂದು ಹೇಳಿದರು. ಮಹಿಳಾ ಸಬಲೀಕರಣದ ದೃಷ್ಟಿಯಿಂದ ಬಸವಣ್ಣ ಮತ್ತು ಅಕ್ಕಮಹಾದೇವಿಯವರ ಚಿಂತನೆಗಳು ಅತ್ಯಂತ ಮಹತ್ವದ್ದಾಗಿವೆ. ಅಕ್ಕಮಹಾದೇವಿಯವರು ಧಾರ್ಮಿಕ ಹಾಗೂ ಸಾಮಾಜಿಕ ಕಟ್ಟಳೆಗಳನ್ನು ಪ್ರಶ್ನಿಸಿ ಮಹಿಳೆಯರಿಗೆ ಸ್ವಾತಂತ್ರ್ಯ ಮತ್ತು ಆತ್ಮಗೌರವದ ಹಕ್ಕುಗಳನ್ನು ಒತ್ತಿ ಹೇಳಿದ್ದಾರೆ. ಇಂತಹ ಮಹಾನ್ ಚಿಂತನೆಗಳನ್ನು ಇಂದಿನ ವಿದ್ಯಾರ್ಥಿನಿಯರು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡರೆ ಸಮಾಜದಲ್ಲಿ ಉತ್ತಮ ಬದಲಾವಣೆ ಸಾಧ್ಯ. -ಪ್ರೊ.ವಿಜಯಾ ಬಿ. ಕೋರಿಶೆಟ್ಟಿ, ಕುಲಪತಿ

**ವಚನಗಳು ಕೇವಲ ಧಾರ್ಮಿಕ ಉಪದೇಶಗಳಲ್ಲ**

ಜಿಲ್ಲಾ ವೀರಶೈವ ಮಹಾಸಭಾದ ಗೌರವ ಅಧ್ಯಕ್ಷರಾಗಿರುವ ಡಾ.ಬನುದೇವಿ ಸಂಕಣ್ಣವರ ಅವರು, ವಿದ್ಯಾರ್ಥಿನಿಯರು ಬಸವಣ್ಣರವರ ವಚನಗಳಲ್ಲಿ ಬಿಂಬಿತವಾಗಿರುವ ಮಹಿಳಾ ಆದರ್ಶಗಳನ್ನು ತಿಳಿದುಕೊಳ್ಳುವ ಮೂಲಕ ವ್ಯಕ್ತಿತ್ವವನ್ನು ರೂಪಿಸಿಕೊಂಡು ಆದರ್ಶ ಸಮಾಜದ ಸಂಸ್ಕೃತಿಯನ್ನು ಕಾಪಾಡಬೇಕೆಂದು ತಿಳಿಸಿದರು.

ತರಬೇತಿನಿರತ ಐ.ಪಿ.ಎಸ್. ಅಧಿಕಾರಿಗಳಾದ ಕು.ಈಶಿತಾ ಗುಪ್ತಾರವರು, ವಿದ್ಯಾರ್ಥಿನಿಯರಿಗೆ ಭಾರತ ದೇಶ ಸುಂದರವಾಗಿದ್ದು, ಪ್ರತಿಯೊಬ್ಬರು ತಮ್ಮ ಸಾಮರ್ಥ್ಯಗಳನ್ನು ಬೆಳಸಿಕೊಂಡು ಉನ್ನತ ಹುದ್ದೆಗಳನ್ನು ಪಡೆಯಲು ಸಾಕಷ್ಟು ಅವಕಾಶಗಳು ಇದ್ದು, ಆದರೆ ವಿದ್ಯಾರ್ಥಿನಿಯರಲ್ಲಿ ಆತ್ಮ ವಿಶ್ವಾಸ ನಿರಂತರವಾದ ಅಭ್ಯಾಸ ಕಠಿಣ ಶ್ರಮದಿಂದ ಸಾಧ್ಯವೆಂದು ತಿಳಿಸಿಕೊಟ್ಟರು. ಕುಲಸಚಿವರಾದ ಶಂಕರಗೌಡ ಎಸ್. ಸೋಮನಾಳ ಅವರು, ಬಸವಣ್ಣನವರ ಕುರಿತು ರಸಪ್ರಶ್ನೆ, ಚರ್ಚಾ ಸ್ಪರ್ಧೆ ಹಾಗೂ ವಚನ ವಾಚನ ಸ್ಪರ್ಧೆಗಳನ್ನು ಆಯೋಜಿಸಿ, ವಿಜೇತರಾದ ವಿದ್ಯಾರ್ಥಿನಿಯರಿಗೆ ನಗದು ಬಹುಮಾನ ಮತ್ತು ಪ್ರಮಾಣಪತ್ರಗಳನ್ನು ವಿತರಿಸಿದರು.

ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್. ಲಕ್ಕಣ್ಣವರ, ಸಾಹಿತಿಗಳಾದ ಎಂ.ಜಿ.ಯಾದವಾಡ, ಕಾಶೀನಾಥ ಅಣ್ಣೇಪನ್ನವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಬಸವ ಅಧ್ಯಯನ ಪೀಠದ ಸಂಯೋಜಕ ಪ್ರೊ. ರಾಜಕುಮಾರ ಮಾಲಿಪಾಟೀಲ ಸ್ವಾಗತ ಹಾಗೂ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರೊ. ಗವಿಸಿದ್ದಪ್ಪ ಆನಂದಳ್ಳಿ ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಕಾರ್ಯಕ್ರಮವನ್ನು ಕು. ನಂದಿನಿ ಪಾಟೀಲ ನಿರೂಪಿಸಿದರು. ವಂದನಾರ್ಪಣೆಯನ್ನು ಕು. ಸೀಭಾ ನೆರವೇರಿಸಿದರು. ಪ್ರಾರ್ಥನಾ ಗೀತೆಯನ್ನು ಕು. ತೇಜಸ್ವಿನಿ ನಾಯಕ ಹಾಡಿದರು. ವಿಶ್ವವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿನಿಯರು ಭಾಗವಹಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಉಸಿರು

• ಉದಯವಾಹಿನಿ, ಬಸವನಬಾಗೇವಾಡಿ

ಬಸವಾದಿ ಶರಣರ ಕಾಲದ ವಚನಕಾರರು ಸಮಸಮಾಜದ ಪ್ರತಿಪಾದಕರಾಗಿದ್ದಾರೆ. ಹನ್ನೆರಡನೆಯ ಶತಮಾನದ ಅನುಭವ ಮಂಟಪ ವಿಶ್ವಕ್ಕೆ ಮಾದರಿಯಾಗಿತ್ತು. ವಚನ ಸಾಹಿತ್ಯ ಕನ್ನಡ ಸಾಹಿತ್ಯದ ಉಸಿರು ಎಂದು ಶರಣ ಚಿಂತಕ ವಿವೇಕಾನಂದ ಕಲ್ಯಾಣಶೆಟ್ಟಿ ಅಭಿಪ್ರಾಯ ವ್ಯಕ್ತಪಡಿಸಿದರು.

ಗುರುವಾರ ಪಟ್ಟಣದ ಬಿ ಎಲ್ ಡಿ ಇ ಸಂಸ್ಥೆಯ ಬಸವೇಶ್ವರ ಕಲಾ. ವಾಣಿಜ್ಯ ಮಹಾವಿದ್ಯಾಲಯ.ಹಾಗೂ ಐ ಕ್ಯೂ ಎ ಎಸ್ ಕಾಲೇಜು, ಜಿಲ್ಲಾ ಹಾಗೂ ತಾಲ್ಲೂಕಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ತಾಲ್ಲೂಕ ಕನ್ನಡ ಸಾಹಿತ್ಯ ಪರಿಷತ್ತು ಆಶ್ರಯದಲ್ಲಿ ಲಿಂ..ಮಲ್ಲಮ್ಮಗೌಡತಿ ಶಂಕರಪ್ಪಗೌಡ ಪಾಟೀಲ ದತ್ತಿ. ಲಿಂ. ಸಿದ್ದಪ್ಪ ಬಸಲಿಂಗಪ್ಪ ಹಂಚಲಿ ದತ್ತಿ . ಶ್ರೀಮತಿ ಕಸ್ತೂರಿ ಮತ್ತು ಗಿರಿಮಲ್ಲಪ್ಪ ಬೆಣ್ಣೂರ ಸ್ಮರಣಾರ್ಥ ದತ್ತಿನಿಧಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಾ ಡಾ. ಅಶೋಕ ಸೂರ್ಯವಂಶಿ ಮಾತನಾಡಿ, ಯುವ ವಿದ್ಯಾರ್ಥಿ ಬಸವಾದಿ ಶರಣರ ಸಾಹಿತ್ಯ ಅಧ್ಯಯನ ಮಾಡಬೇಕು. ಕನ್ನಡ ಸಾಹಿತ್ಯ ಲೋಕಕ್ಕೆ ವಚನ ಸಾಹಿತ್ಯದ ಕೊಡುಗೆ ಅಪಾರ ಎಂದರು. ವಚನ ಸಾಹಿತ್ಯ , ಶರಣ ಸಾಹಿತ್ಯದ ಸಾಮಾಜಿಕ ಮೌಲ್ಯಗಳು ಕುರಿತು ಡಾ ಸವಿತಾ ಝುಳಕಿ ಉಪನ್ಯಾಸ ನೀಡಿದರು. ಯಾದಗಿರಿ ಶ್ರೀ ಮೈಲಾರಲಿಂಗೇಶ್ವರನ ಚರಿತ್ರೆ ಕುರಿತು ಕವಯಿತ್ರಿ ಶಾಂತಾ ಬಿರಾದಾರ ಉಪನ್ಯಾಸ ನೀಡಿ ಯಾದಗಿರಿ ಜಿಲ್ಲೆಯ ಐತಿಹಾಸಿಕ ಪ್ರಸಿದ್ಧ ಮೈಲಾರಲಿಂಗೇಶ್ವರ ದೇವಾಲಯ 15 ನೇ ಶತಮಾನಕ್ಕೆ ಸೇರಿದೆ ಎಂದರು. ಸಿದ್ದಲಿಂಗ ಸ್ವಾಮೀಜಿ, ಸಾಹಿತಿ ಅಶೋಕ ಹಂಚಲಿ. ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ. ತಾಲ್ಲೂಕ ಕಸಾಪ ಅಧ್ಯಕ್ಷ ಶಿವಾನಂದ ಡೋಣೂರ ಮಾತನಾಡಿದರು.

ಪ್ರಕಾಶ ಗಿರಿಮಲ್ಲಪ್ಪ ಬೆಣ್ಣೂರ. ಈರನಗೌಡ ಶಿವನಗೌಡ ಪಾಟೀಲ. ವೇದಿಕೆಯ ಮೇಲಿದ್ದರು. ನಾಟಕ ಬರಹಗಾರರ ಕವಿ ವಾಯ್ ಎಚ್ ಅಂಗಡಗೇರಿ ಇವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಕಾಲೇಜನಲ್ಲಿ ಜರುಗಿದ ಜಾನಪದ ಉತ್ಸವ 2026 ಹಾಗೂ ಮೋಜಿನ ಆಟಗಳ ಮುಕ್ತಾಯ ಸಮಾರಂಭದ ಮತ್ತು ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಕಾರ್ಯಕ್ರಮ ಜರುಗಿತು.



ಉದಯವಾಹಿನಿ ಚಿತ್ರ

## ಕೃಷ್ಣಾ ತೀರದ ರೈತರ ದಶಕಗಳ ನೀರಿನ ಸಂಕಷ್ಟಕ್ಕೆ ಬ್ರೇಕ್ :216.50 ಕೋಟಿ ಮಹಾಯೋಜನೆಗೆ ಗ್ರೀನ್ ಸಿಗ್ನಲ್: ಮಾಜಿ ಶಾಸಕ ಆನಂದ ನ್ಯಾಮಗೌಡ

• ಉದಯವಾಹಿನಿ, ಜಮಖಂಡಿ

ಪ್ರತಿ ಬೇಸಿಗೆಯಲ್ಲಿ ಕೃಷ್ಣಾ ನದಿಯಲ್ಲಿ ನೀರಿನ ಮಟ್ಟ ಕುಸಿತವಾಗುವುದರಿಂದ ನದಿ ತೀರದ ರೈತರು ಹಾಗೂ ಜನ ಜಾನುವಾರುಗಳು ತೀವ್ರ ಸಂಕಷ್ಟ ಅನುಭವಿಸುವ ಪರಿಸ್ಥಿತಿ ವರ್ಷಂಪ್ರತಿ ಎದುರಾಗುತ್ತಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ತಾಲ್ಲೂಕಿನ ಚಿಕ್ಕಪಡಸಲಗಿ ಗ್ರಾಮದ ಸಮೀಪ ಕೃಷ್ಣಾ ನದಿಗೆ ಅಡ್ಡವಾಗಿ 1989ರಲ್ಲಿ ದಿ.ಸಿದ್ದು ನ್ಯಾಮಗೌಡರ ನೇತೃತ್ವದಲ್ಲಿ ರೈತರ ಸಹಕಾರದಿಂದ ಬ್ಯಾರೇಜ್ ನಿರ್ಮಿಸಲಾಗಿತ್ತು.

ಆರಂಭದಲ್ಲಿ ಬ್ಯಾರೇಜ್‌ನ ಹಿನ್ನೀರಿನಿಂದ ಸುಮಾರು 30 ಸಾವಿರ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಲಭಿಸುತ್ತಿತ್ತು. ನಂತರ ಇದರ ವ್ಯಾಪ್ತಿ ವಿಸ್ತರಿಸಿಕೊಂಡು 70 ಸಾವಿರ ಎಕರೆಗೂ ಹೆಚ್ಚು ಜಮೀನಿಗೆ ನೀರು ಪೂರೈಕೆಯಾಗತೊಡಗಿತು. ಆದರೆ ಬೇಸಿಗೆಯಲ್ಲಿ ನೀರಿನ ಕೊರತೆ ಹೆಚ್ಚಾದ ಹಿನ್ನೆಲೆ 2013ರಲ್ಲಿ ಬ್ಯಾರೇಜ್‌ಗೆ ಮರುನೀರು ತುಂಬುವ ಕಾರ್ಯ ಆರಂಭಿಸಲಾಯಿತು. ಬ್ಯಾರೇಜ್ ಎತ್ತರವನ್ನು 1.75 ಮೀಟರ್ ಹೆಚ್ಚಿಸಿದ ಪರಿಣಾಮ ನೀರಿನ ಸಂಗ್ರಹ ಸಾಮರ್ಥ್ಯ 2.8 ಟಿಎಂಸಿಯಿಂದ 4.3 ಟಿಎಂಸಿಗೆ ಏರಿಕೆಯಾಯಿತು. ಇದರಿಂದ ಹೆಚ್ಚುವರಿಯಾಗಿ 1.5 ಟಿಎಂಸಿ ಅಡಿ ನೀರು ಸಂಗ್ರಹ ಸಾಧ್ಯವಾಯಿತು.



ಉದಯವಾಹಿನಿ ಚಿತ್ರ

**ಜನ ಜಾನುವಾರುಗಳು ತೀವ್ರ ಸಂಕಷ್ಟ**

ದಿವಂಗತ ಸಿದ್ದು ನ್ಯಾಮಗೌಡರ ಬಳಿಕ ಮಾಜಿ ಶಾಸಕ ಆನಂದ ನ್ಯಾಮಗೌಡರು ರೈತರ ಸಹಕಾರದಿಂದ ಮರುನೀರು ತುಂಬುವ ಕಾರ್ಯವನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಪ್ರತಿ ಬಾರಿ ಈ ಕಾರ್ಯಕ್ಕೆ ಸುಮಾರು ರೂ.1.5 ಕೋಟಿ ವೆಚ್ಚವಾಗುತ್ತಿದ್ದು, ಅದರಲ್ಲಿ ರೂ.1 ಕೋಟಿ ವಿದ್ಯುತ್ ಬಿಲ್ಲಿಗೆ ಖರ್ಚಾಗುತ್ತಿದೆ. ಇದರಿಂದ ಕೃಷ್ಣಾ ತೀರದ ರೈತರ ಸಂಘಕ್ಕೆ ಸುಮಾರು ರೂ.10 ಕೋಟಿ ಸಾಲದ ಹೊರೆಯೂ ಉಂಟಾಗಿದೆ ಎಂದು ತಿಳಿಸಲಾಗಿದೆ.

ಇದೀಗ ಗಲಗಲಿ-ಮರೆಗುದ್ದಿ ಏತ ನೀರಾವರಿ ಯೋಜನೆಯಡಿ ಗಲಗಲಿ ಬ್ಯಾರೇಜ್‌ನಿಂದ ಆಲಮಟ್ಟಿ ಜಲಾಶಯದ ಹಿನ್ನೀರನ್ನು ಎತ್ತಿ ಹಿಪ್ಪರಗಿ ಬ್ಯಾರೇಜ್‌ವರೆಗೆ ತಲುಪಿಸುವ ರೂ.216.50 ಕೋಟಿ ವೆಚ್ಚದ ಯೋಜನೆಗೆ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ. ಕಾಮಗಾರಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ನೀರಾವರಿ ನಿಗಮದ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ ಎಂದು ಮಾಜಿ ಶಾಸಕ ಆನಂದ ನ್ಯಾಮಗೌಡ ತಿಳಿಸಿದ್ದಾರೆ.

ಈ ಯೋಜನೆ ಪೂರ್ಣಗೊಂಡರೆ ಚಿಕ್ಕಪಡಸಲಗಿ ಬ್ಯಾರೇಜ್‌ಗೆ ಬೇಸಿಗೆಯಲ್ಲಿ ನೀರು ಎತ್ತುವ ಸಮಸ್ಯೆ ನಿವಾರಣೆಯಾಗಲಿದ್ದು, ಮುಂದಿನ ಬೇಸಿಗೆಯೊಳಗೆ ಕಾಮಗಾರಿ ಪೂರ್ಣಗೊಳ್ಳುವ ವಿಶ್ವಾಸ ವ್ಯಕ್ತವಾಗಿದೆ.

## ನೀರಿನ ಕೊರತೆಯಾಗದಂತೆ ಮುನ್ನೆಚ್ಚರಿಕೆ ಕ್ರಮ ವಹಿಸಿ: ಡಾ.ಬೆಲ್ದಾಳೆ

• ಉದಯವಾಹಿನಿ, ಬೀದರ್

ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಸ್ಥಳದಲ್ಲಿಯೂ ನೀರಿನ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಜಾರಿಗೆ ತರಬೇಕು. ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು, ಬೋರ್‌ವೆಲ್ ದುರಸ್ತಿ ಹಾಗೂ ಹೊಸ ನೀರಿನ ಮೂಲಗಳನ್ನು ಗುರುತಿಸುವ ಕಾರ್ಯವನ್ನು ತಕ್ಷಣ ಆರಂಭಿಸಬೇಕು ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ಚಿಟ್ಟಗುಪ್ಪ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳ ಸಭೆಯನ್ನು ನಡೆಸಿ, ಬೇಸಿಗೆಯ ಸಮಯದಲ್ಲಿ ಉಂಟಾಗುವ ಕುಡಿಯುವ ನೀರಿನ ಸಮಸ್ಯೆಯನ್ನು ತಡೆಯಲು ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶಗಳಲ್ಲಿ ಯಾವುದೇ ಸ್ಥಳದಲ್ಲಿಯೂ ನೀರಿನ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಜಾರಿಗೆ ತರುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು, ಬೋರ್‌ವೆಲ್ ದುರಸ್ತಿ ಹಾಗೂ ಹೊಸ ನೀರಿನ ಮೂಲಗಳನ್ನು ಗುರುತಿಸುವ ಕಾರ್ಯವನ್ನು ತಕ್ಷಣ ಆರಂಭಿಸಬೇಕು ಎಂದು ತಿಳಿಸಿದರು.

ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಎಲ್ಲಾ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಿ, ಸಮಸ್ಯೆಯನ್ನು ಶೀಘ್ರದಲ್ಲಿ ಪರಿಹರಿಸಲು ಬದ್ಧರಾಗಿರಬೇಕು ನೀರೇ ಜೀವ. ನೀರಿಲ್ಲದೆ ಬದುಕು ಸಾಧ್ಯವಿಲ್ಲ. ಬೇಸಿಗೆಯ ಸಮಯದಲ್ಲಿ ನಮ್ಮ ಗ್ರಾಮಗಳಲ್ಲಿ ಮತ್ತು ಪಟ್ಟಣಗಳಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗುವುದು ಹೆಚ್ಚಾಗದಂತೆ ತುರ್ತು ಕ್ರಮಗಳನ್ನು ಕೈಗೊಳ್ಳುವ ಮೂಲಕ ಪರಿಹರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ, ಎಲ್ಲಾ ಅಧಿಕಾರಿಗಳು ಯಾವುದೇ ಗ್ರಾಮದಲ್ಲಿ ನೀರಿನ ಕೊರತೆ ಉಂಟಾಗದಂತೆ ಮುಂಚಿತವಾಗಿಯೇ ನೀರಿನ ಮೂಲಗಳನ್ನು ಪರಿಶೀಲಿಸಿ, ಬೋರ್‌ವೆಲ್‌ಗಳ ದುರಸ್ತಿ ಕಾರ್ಯಗಳನ್ನು ತಕ್ಷಣ ಕೈಗೊಳ್ಳಬೇಕು. ಹಾಳಾಗಿರುವ ಪಂಪ್‌ಗಳು, ಮೋಟಾರ್ಗಳು, ಪೈಪ್ ಲೈನ್‌ಗಳನ್ನು ಸರಿಪಡಿಸಬೇಕು.

ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ಕುಡಿಯುವ ನೀರನ್ನು ಸರಬರಾಜು ಮಾಡುವ ವ್ಯವಸ್ಥೆಯನ್ನು ಕೂಡ ತಕ್ಷಣ ಜಾರಿಗೆ ತರಬೇಕು. ಜನರಿಗೆ ನೀರು ಸಿಗದೇ ಸಂಕಷ್ಟ ಅನುಭವಿಸುವ ಪರಿಸ್ಥಿತಿ ಬರಬಾರದು. ಇದು ನಮ್ಮೆಲ್ಲರ ಜವಾಬ್ದಾರಿ ಎಂದರು. ರಸ್ತೆ, ಕುಡಿಯುವ ನೀರು ವಿದ್ಯುತ್‌ಸೇರಿದಂತೆ ಯಾವುದೇ ರೀತಿಯ ಮೂಲ ಸೌಕರ್ಯ ಕೊರತೆಯಾಗದಂತೆ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಉದಯವಾಹಿನಿ ಚಿತ್ರ

> ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಬೇಕು. ಗ್ರಾಮ ಪಂಚಾಯಿತಿ, ತಾಲ್ಲೂಕು ಆಡಳಿತ ಮತ್ತು ಎಲ್ಲಾ ಸಂಬಂಧಪಟ್ಟ ಇಲಾಖೆಗಳು ಒಟ್ಟಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ನಾವು ಈ ಸಮಸ್ಯೆಯನ್ನು ಯಶಸ್ವಿಯಾಗಿ ಎದುರಿಸಬಹುದು. -ಡಾ.ಬೆಲ್ದಾಳೆ

## ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಶ್ರಮಿಸಿ

• ಉದಯವಾಹಿನಿ, ಚಿತ್ತಾಪುರ

ನಗರ, ಗ್ರಾಮೀಣ ಪ್ರದೇಶದಲ್ಲಿ ಬಹುತೇಕ ಕುಟುಂಬಗಳು ತಮ್ಮ ಬಡತನದ ಕಾರಣಕ್ಕೆ ಅಪ್ರಾಪ್ತ ಮಕ್ಕಳನ್ನು ದುಡಿಯಲು ಕಳುಹಿಸಿ, ಬಾಲ ಕಾರ್ಮಿಕ ಪದ್ಧತಿಗೆ ದೂಡಲಾಗುತ್ತಿದೆ. ಅವರ ಬಾಲ್ಯವನ್ನು ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ಮತ್ತು ಜಿಲ್ಲಾ ಹಿರಿಯ ಸಿವಿಲ್ ನ್ಯಾಯಧೀಶ ಶ್ರೀನಿವಾಸ ನವಲೆ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ನೇತೃತ್ವದಲ್ಲಿ ಬಾಲ್ಯ ವಿವಾಹ ಮತ್ತು ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಯ ಕುರಿತು ತಾಲ್ಲೂಕಿನ ಗ್ರಾ.ಪಂ.ಪಿಡಿಓಗಳಿಗೆ ಹಮ್ಮಿಕೊಂಡ ಒಂದು ದಿನದ ಉಚಿತ ಕಾನೂನು ಅರಿವು ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

**ಬಾಲ ಕಾರ್ಮಿಕ ಪದ್ಧತಿ ನಿಷೇಧ:** 14 ವರ್ಷದೊಳಗಿನ ಮಕ್ಕಳನ್ನು ಯಾವುದೇ ಉದ್ಯೋಗದಲ್ಲಿ ತೊಡಗಿಸಿಕೊಳ್ಳುವುದನ್ನು ಬಾಲ ಕಾರ್ಮಿಕ ಕಾಯ್ದೆ ನಿಷೇಧಿಸುತ್ತದೆ. 14ರಿಂದ 18 ವರ್ಷದೊಳಗಿನ ಕಿಶೋರರನ್ನು ಅಪಾಯಕಾರಿ ಕೆಲಸಗಳಲ್ಲಿ ಬಳಸುವಂತಿಲ್ಲ. ಆದರೂ ಪಾಲಕರು ಬಡವರು ಎನ್ನುವ ಕಾರಣ ಕೊಟ್ಟು ಮಕ್ಕಳನ್ನು ಬಾಲಕಾರ್ಮಿಕರನ್ನಾಗಿ ಮಾಡುತ್ತಿದ್ದಾರೆ. ಇಂತಹ ಕಾರಣ ಹೇಳುವ ತಂದೆ ತಾಯಿಗಳಿಗೆ ಇದರ ಬಗ್ಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಪಿಡಿಓಗಳಿಗೆ ಸೂಚಿಸಿದರು.

**ಬಾಲ್ಯ ವಿವಾಹ ನಿಷೇಧ:** 18 ವರ್ಷದೊಳಗಿನ ಹೆಣ್ಣು ಮಕ್ಕಳು ಮತ್ತು 21 ವರ್ಷದೊಳಗಿನ ಗಂಡು ಮಕ್ಕಳಿಗೆ ವಿವಾಹ ಮಾಡುವುದು ಕಾನೂನು ಬಾಹಿರವಾಗಿದೆ. ಬಾಲ್ಯ ವಿವಾಹ ಮಾಡುವುದು, ಮಾಡಿಸುವುದು ಅಥವಾ ಪ್ರೇರೇಪಿಸುವುದು ಬಾಲ್ಯ ವಿವಾಹ ನಿಷೇಧ ಕಾನೂನು ಪ್ರಕಾರ ಶಿಕ್ಷಾರ್ಹ ಅಪರಾಧವಾಗಿದೆ. ಆದರೂ ಗ್ರಾಮೀಣ ಪ್ರದೇಶಗಳಲ್ಲಿ ಬಾಲ್ಯ ವಿವಾಹ ಕಂಡು ಬರುತ್ತಿವೆ. ಆದ್ದರಿಂದ ಬಾಲ್ಯ ವಿವಾಹ ಪಿಡಿಓಗಳ ಗಮನಕ್ಕೆ ಬಂದರೇ ತಕ್ಷಣ ಮಕ್ಕಳ ಹಕ್ಕುಗಳ ಆಯೋಗ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಗಮನಕ್ಕೆ ತಂದು, ಅಧಿಕಾರಿಗಳ ಜೊತೆ ನಿಂತು, ಬಾಲ್ಯ ವಿವಾಹ ತಡೆಯಬೇಕಾಗಿದೆ ಎಂದು ಪಿಡಿಓಗಳಿಗೆ ತಾಕೀತು ಮಾಡಿದರು. ಮನರೇಗಾ ತಾಲ್ಲೂಕು ಸಹಾಯಕ ನಿರ್ದೇಶಕ ಪಂಡಿತ ಸಿಂಧೆ, ಶ್ರೀಮಂತ ಸಂಗಾವಿ ಇದ್ದರು.



ಉದಯವಾಹಿನಿ ಚಿತ್ರ

## ಆಲಿಕಲ್ಲು ಮಳೆ, ಬಿರುಗಾಳಿ: 10 ಲಕ್ಷಕ್ಕೂ ಹೆಚ್ಚು ಅಡಿಕೆ, ತೆಂಗಿನ ಮರ ಧರೆಗೆ

• ಉದಯವಾಹಿನಿ, ಶಿವಮೊಗ್ಗ

ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಹೊಳೆಹೊನ್ನೂರು ಸೇರಿದಂತೆ ಪಕ್ಕದ ಆನವೇರಿ ಹಾಗೂ ಕಲ್ಲಿಹಾಳ ಹೋಬಳಿ ವ್ಯಾಪ್ತಿಯ ಗ್ರಾಮಗಳು ಸಂಜೆ ಸುರಿದ ಆಲಿಕಲ್ಲು ಮಳೆ ಹಾಗೂ ರಣಸ್ವರೂಪಿ ಬಿರುಗಾಳಿಗೆ ಅಕ್ಷರಶಃ ನಲುಗಿವೆ.

ಜಿಲ್ಲಾಡಳಿತದ ಪ್ರಾಥಮಿಕ ಅಂದಾಜಿನಂತೆ ಅಂದಾಜು 10 ಲಕ್ಷಕ್ಕೂ ಹೆಚ್ಚು ಅಡಿಕೆ ಹಾಗೂ ತೆಂಗಿನ ಮರಗಳು ನೆಲಕಚ್ಚಿವೆ. ಈ ಸಂಖ್ಯೆ ಇನ್ನೂ ಹೆಚ್ಚಾಗಬಹುದು ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿದ್ದು, ಪರಿಸ್ಥಿತಿಯ ಭೀಕರತೆಯನ್ನು ಬಿಂಬಿಸುತ್ತದೆ.

ಭದ್ರಾ ನದಿ ದಂಡೆಯಲ್ಲಿರುವ ಈ ಮೂರು ಹೋಬಳಿಗಳಲ್ಲೂ ಅಡಿಕೆ ಬೆಳೆಯೇ ಜೀವನಾಡಿ. ಸಂಜೆ ಅರ್ಧ ಗಂಟೆ ಸುರಿದ ಮಳೆ-ಗಾಳಿ, ಇಲ್ಲಿನ ಜನರ ಆರ್ಥಿಕತೆಯನ್ನೇ ಆಪೋಷನ ತೆಗೆದುಕೊಂಡಿದೆ.

ಆಲಿಕಲ್ಲು ಮಳೆ ಹಾಗೂ ಬಿರುಗಾಳಿಯಿಂದ 450 ಮನೆಗಳಿಗೆ ಹಾನಿಯಾಗಿದ್ದು, ಹೆಂಚು, ಛಾವಣಿ ಹಾರಿಹೋಗಿವೆ. ಅರಹತೊಳಲು ಕೈಮರದಲ್ಲಿರುವ ಗಿರಿಜಮ್ಮ ಅವರ ಮನೆಯ ಶೀಟ್ ಛಾವಣಿ ಕಬ್ಬಿಣದ ಕಂಬಿ ಸಹಿತ 50 ಮೀಟರ್‌ವರೆಗೆ ಹಾರಿ ಹೋಗಿ ಪಕ್ಕದ ಅಡಿಕೆ ತೋಟದಲ್ಲಿ ಬಿದ್ದಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಬಿಂಬಿಸುತ್ತದೆ. 350 ವಿದ್ಯುತ್ ಕಂಬಗಳು ಮುರಿದುಬಿದ್ದಿದ್ದು, 50 ಟಿಸಿ ಕಿತ್ತು ಹೋಗಿವೆ. 36 ಹಳ್ಳಿಗಳಲ್ಲಿ ಶೇ 40ರಷ್ಟು ಅಡಿಕೆ ತೆಂಗಿನ ಬೆಳೆ ನಾಶವಾಗಿದೆ. ಆ ಲೆಕ್ಕದಲ್ಲಿ ಅಂದಾಜು 3,000 ಹೆಕ್ಟೇರ್‌ನಲ್ಲಿ ಬೆಳೆದು ನಿಂತ ಅಡಿಕೆ ಮರಗಳು ನೆಲಕಚ್ಚಿವೆ ಎಂದು ಪ್ರಭಾರ ಜಿಲ್ಲಾಧಿಕಾರಿಯೂ ಆದ ಜಿಲ್ಲಾ ಪಂಚಾಯಿತಿ ಸಿಇಒ ಎನ್. ಹೇಮಂತ್ ತಿಳಿಸಿದರು.

**ವಿಶೇಷ ಪ್ಯಾಕೇಜ್‌ಗೆ ಪ್ರಸ್ತಾವ;** ಅಡಿಕೆ ದೀರ್ಘ ಕಾಲದ ಬೆಳೆ. ಈಗ ನಾಶವಾಗಿರುವ ಎಲ್ಲವೂ 10 ವರ್ಷಗಳ ಮೇಲೆ ಬೆಳೆದ ಅಡಿಕೆ ಮರ. ಬೆಳೆಗಾರರ ಒಂದು ದಶಕದ ಶ್ರಮ ಒಂದೇ ದಿನದಲ್ಲಿ ನಷ್ಟವಾಗಿದೆ. ಅಲ್ಪಾವಧಿ ಬೆಳೆ ಆದರೆ ಮತ್ತೊಂದು ಬೆಳೆ ಬೆಳೆದುಕೊಳ್ಳಬಹುದು. ಆದ್ದರಿಂದ ರೈತರಿಗೆ ಆಗಿರುವ ನಷ್ಟ ತುಂಬಾ ದೊಡ್ಡದಾಗಿದೆ ಎಂದು ಅವರು ಹೇಳಿದರು. ಎನ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಶೇ.33ಕ್ಕಿಂತ ಹೆಚ್ಚು ಬೆಳೆ ನಷ್ಟವಾದರೆ ಗರಿಷ್ಠ ಎರಡು ಹೆಕ್ಟೇರ್‌ಗೆ ಮಾತ್ರ ಪರಿಹಾರ ನೀಡಲಾಗುತ್ತದೆ. ಪ್ರತೀ ಎಕರೆಗೆ ರೂ. 22,500ರಂತೆ ಐದು ಎಕರೆಗೆ ಪರಿಹಾರ ದೊರೆಯಲಿದೆ. ಇಲ್ಲಿ ಸಮಸ್ಯೆ ಹೆಚ್ಚೇ ಇದೆ. ಅದನ್ನು ಅರ್ಥ ಮಾಡಿಕೊಂಡು ವಿಶೇಷ ಪರಿಹಾರದ ಪ್ಯಾಕೇಜ್ ನೀಡಲು ಸರ್ಕಾರಕ್ಕೆ ಮನವಿ ಸಲ್ಲಿಸಲಿದ್ದೇವೆ ಎಂದು ಅವರು ವಿವರಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಅವರಿಗೆ ಇಲ್ಲಿನ ಪರಿಸ್ಥಿತಿ ಮನದಟ್ಟು ಮಾಡುವೆ ಎಂದು ಮಂಗಳವಾರ ಸ್ಥಳ ಪರಿಶೀಲಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ಅದು ನಮಗೆ ನೆರವಾಗಲಿದೆ ಎಂದು ಹೇಳಿದರು.



ಉದಯವಾಹಿನಿ ಚಿತ್ರ

## ಮಿನಿ ನ್ಯೂಸ್

### ಗ್ರಾಮದ ಹತ್ತಿರ ರಸ್ತೆ ಬದಿಗೆ ನುಗ್ಗಿದ ಸಾರಿಗೆ ಬಸ್: ಪ್ರಯಾಣಿಕರು ಪಾರು

• ಉದಯವಾಹಿನಿ, ಅಫಜಲಪುರ

ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸೊಂದು ರಸ್ತೆ ಬಿಟ್ಟು ಹೊಲಕ್ಕೆ ನುಗ್ಗಿದ ಘಟನೆ ಬೆಳಿಗ್ಗೆ ತಾಲ್ಲೂಕಿನ ಅತನೂರು ಗ್ರಾಮದ ಆರ್‌ಎಂಎಸ್ ಶಾಲೆಯ ಬಳಿ ಸಂಭವಿಸಿದೆ. ರಸ್ತೆ ಇಕ್ಕಟ್ಟಾಗಿದ್ದು, ಎದುರಿನಿಂದ ಬರುವ ವಾಹನಗಳಿಗೆ ಅಪಘಾತ ಸಂಭವಿಸುವ ಸಲುವಾಗಿ ಮುನ್ನೆಚ್ಚರಿಕೆಯ ಕ್ರಮವಾಗಿ ಬಸ್ಸಿನ ಚಾಲಕನು ತಕ್ಷಣವೇ ರಸ್ತೆ ಕೆಳಭಾಗದ ಹೊಲದ ಕಡೆಗೆ ಬಸ್ ತಿರುಗಿಸಿದ್ದು, ಹೊಲದ ಜಮೀನಿನಲ್ಲಿ ಬಸ್ ನಿಲುಗಡೆಯಾಗಿದೆ.

ಇದರಿಂದಾಗಿ ಬಸ್ಸಿನೊಳಗಿದ್ದ ಪ್ರಯಾಣಿಕರು ತೀವ್ರ ಆತಂಕಕ್ಕೆ ಒಳಗಾಗಿದ್ದರು. ಬಸ್ ಸುರಕ್ಷಿತವಾಗಿ ಹೊಲದಲ್ಲಿ ನಿಂತುಕೊಂಡಿದ್ದರಿಂದ ಒಳಗಿದ್ದ ಎಲ್ಲಾ ಪ್ರಯಾಣಿಕರು ಸುರಕ್ಷಿತವಾಗಿ ಹೊರಬಂದರು. ಯಾರಿಗೂ ಯಾವುದೇ ರೀತಿಯಲ್ಲಿ ತೊಂದರೆ ಆಗಿಲ್ಲ. ಸಾರಿಗೆ ಘಟಕದ ವ್ಯವಸ್ಥಾಪಕ ಎ.ವಿ. ಭೋವಿ ಅವರು ಚಾಲಕನ ಮುನ್ನೆಚ್ಚರಿಕೆಯ ಕ್ರಮವನ್ನು ಶ್ಲಾಘಿಸಿದ್ದಾರೆ. ಯಾವುದೇ ರೀತಿಯಲ್ಲಿ ಪ್ರಾಣಾಪಾಯವಾಗದೇ ಇರುವುದರಿಂದ ಸಾರ್ವಜನಿಕ ವಲಯದಲ್ಲಿ ಪ್ರಶಂಸನೆಗೆ ಒಳಗಾಗಿದೆ. ಅಫಜಲಪುರದಿಂದ ಕಲಬುರ್ಗಿಗೆ ಹೊರಟಿದ್ದ ಬಸ್ ಇದಾಗಿತ್ತು.

### ಶಾಮನೂರು ಕುಟುಂಬ ಓಲೈಸಲು ಯತ್ನ

• ಉದಯವಾಹಿನಿ, ದಾವಣಗೆರೆ

ಧೂಡಾ ಅಧ್ಯಕ್ಷ ದಿನೇಶ್ ಶೆಟ್ಟಿ ಅವರು ಶಾಮನೂರು ಕುಟುಂಬವನ್ನು ಓಲೈಸುವ ಉದ್ದೇಶದಿಂದ ಶಾಸಕ ಬಿ.ಪಿ. ಹರೀಶ್ ವಿರುದ್ಧ ನಿರಾಧಾರ ಆರೋಪ ಮಾಡುತ್ತಿದ್ದಾರೆ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ದೊಗ್ಗಳ್ಳಿ ವೀರೇಶ್ ಆರೋಪಿಸಿದರು.

ತಮ್ಮ ಕುರ್ಚಿಗೆ ಕುತ್ತು ಬರುವ ಮುನ್ಸೂಚನೆ ದಿನೇಶ್ ಅವರಿಗೆ ಸಿಕ್ಕಿದ್ದು, ಅಭಿವೃದ್ಧಿ ವಿಚಾರ ಮುಂದಿಟ್ಟುಕೊಂಡು ಶಾಸಕರ ವಿರುದ್ಧ ವಿನಾಕಾರಣ ಆರೋಪ ಹೊರಿಸುತ್ತಿದ್ದಾರೆ. ಇದರಲ್ಲಿ ಸತ್ಯಾಂಶವಿಲ್ಲ' ಎಂದರು. ನಗರದಲ್ಲಿ ಜರ್ಮನ್ ಶೈಲಿಯ ವೃತ್ತ ನಿರ್ಮಾಣ, ಗುಂಡಿ ವೃತ್ತದ ನವೀಕರಣ ಹೆಸರಿನಲ್ಲಿ ಹಣವನ್ನು ಪೋಲು ಮಾಡಲಾಗುತ್ತಿದೆ. ಈ ಅನುದಾನವನ್ನು ಬೇರೆ ಕಾಮಗಾರಿಗಳಿಗೆ ಬಳಸಬಹುದಿತ್ತು' ಎಂದು ಅವರು ಹೇಳಿದರು. ಉಪಚುನಾವಣೆಯಲ್ಲಿ ಟಿಕೆಟ್ ಕೇಳಿದ ಅಲ್ಪಸಂಖ್ಯಾತರ ಮೇಲೆ ಕಾಂಗ್ರೆಸ್ ಗದಾಪ್ರಹಾರ ಮಾಡಿದೆ. ಇದನ್ನು ನೋಡಿದರೆ ಪಕ್ಷದ ಮುಖಂಡರು ಸೋಲನ್ನು ಒಪ್ಪಿಕೊಂಡಂತೆ ಕಾಣುತ್ತಿದೆ' ಎಂದು ಆರೋಪಿಸಿದರು. ಅಣಬೇರು ಜೀವನ್‌ಮೂರ್ತಿ, ವಸಂತ್ ಕುಮಾರ್, ಎ.ವೈ ಪ್ರಕಾಶ್, ಕಾಡಪ್ಪ, ಮಂಜುನಾಥ್ ಇದ್ದರು.

### ಜಾತಿ ನಿಂದನೆ: ಎರಡು ವರ್ಷ ಜೈಲು

• ಉದಯವಾಹಿನಿ, ಭದ್ರಾವತಿ

ಜಾತಿ ನಿಂದನೆ. ಜೀವ ಬೆದರಿಕೆ, ಹಲ್ಲೆ ನಡೆಸಿದ ಆರೋಪದ ಮೇಲೆ ಇಲ್ಲಿನ ನಾಲ್ಕನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಇಬ್ಬರು ಆರೋಪಿಗಳಿಗೆ ಎರಡು ವರ್ಷ ಕಠಿಣ ಕಾರಾಗೃಹ ಶಿಕ್ಷೆ ನೀಡಿದೆ.

ತಾಲ್ಲೂಕಿನ ಕೆ.ಎಚ್. ನಗರ ಗ್ರಾಮದ ಉಮೇಶ್ (49) ಹಾಗೂ ನಂದನ್ ಶಿಕ್ಷೆಗೊಳಗಾದವರು. ಈ ಇಬ್ಬರು 2022ರ ಸೆಪ್ಟೆಂಬರ್ 9ರಂದು, ಅದೇ ಗ್ರಾಮದ ಮಹಿಳೆಯ ಮನೆಗೆ ಅಕ್ರಮ ಪ್ರವೇಶಿಸಿ, ಆಕೆಯ ಮೇಲೆ ಹಲ್ಲೆ ನಡೆಸಿ, ಜೀವ ಬೆದರಿಕೆ ಹಾಕಿ, ಜಾತಿ ಹೆಸರಿನಿಂದ ಆಕೆಯನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದರು ಎಂದು ಆರೋಪಿಸಲಾಗಿತ್ತು.

ನೊಂದ ಮಹಿಳೆ ನೀಡಿದ ದೂರಿನ ಅನ್ವಯ ಹೊಸಮನೆ ಪೊಲೀಸರು ಇಬ್ಬರ ವಿರುದ್ಧ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯ ಅಡಿ ಪ್ರಕರಣ ದಾಖಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ, ಇಬ್ಬರ ವಿರುದ್ಧದ ಆರೋಪ ಸಾಬೀತಾದ ಹಿನ್ನಲೆ ಅವರಿಗೆ ಎರಡು ವರ್ಷ ಕಠಿಣ ಜೈಲು ವಾಸ ಹಾಗೂ ರೂ. 62 ಸಾವಿರ ದಂಡ ವಿಧಿಸಿದೆ.

### ಅನಾನಸ್ ಬೇಡಿಕೆ ಕುಸಿತ: ಬೆಳೆಗಾರರಿಗೆ ಸಂಕಷ್ಟ

• ಉದಯವಾಹಿನಿ, ಉಡುಪಿ

ಒಂದೆಡೆ ಬಿಸಿಲಿನ ತೀವ್ರತೆ ಹೆಚ್ಚಾಗಿ ಇಳುವರಿ ಕುಸಿತವಾದರೆ ಮತ್ತೊಂದೆಡೆ ಮಧ್ಯ ಪ್ರಾಚ್ಯ ದೇಶಗಳಲ್ಲಿ ಯುದ್ಧದ ಕಾರ್ಮೋಡ ಆವರಿಸಿರುವುದರಿಂದ ರಫ್ತು ಸ್ಥಗಿತವಾಗಿ ಅನಾನಸ್ ಬೆಳೆಗಾರರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಜಿಲ್ಲೆಯ ಕುಂದಾಪುರ, ಬೈಂದೂರು, ಕಾರ್ಕಳ ಮೊದಲಾದೆಡೆ ಸಾಕಷ್ಟು ಅನಾನಸ್ ಬೆಳೆಗಾರರಿದ್ದಾರೆ. ಅನಾನಸ್ ಬೆಳೆ ಲಾಭದಾಯಕವಾಗಿರುವ ಕಾರಣ ಹೆಚ್ಚಿನವರು ಬೇರೆ ಕೃಷಿಯನ್ನು ತೊರೆದು ಅನಾನಸ್ ಬೆಳೆಯನ್ನು ನೆಚ್ಚಿಕೊಂಡಿದ್ದಾರೆ. ಈ ಬಾರಿ ಬಿಸಿಲಿನ ತೀವ್ರತೆ ಹೆಚ್ಚಾಗಿರುವುದರಿಂದ ಅನಾನಸ್‌ನ ಬೆಳವಣಿಗೆ ಕುಂಠಿತವಾಗಿ ಇಳುವರಿ ಕುಸಿತವಾಗಿದೆ ಎಂದು ರೈತರು ತಿಳಿಸಿದ್ದಾರೆ. ಅನಾನಸ್ ಬೆಳೆಯಲ್ಲಿ ವರ್ಷವಿಡೀ ಹಣ್ಣುಗಳು ಕೊಯ್ಲಿಗೆ ಸಿಗುತ್ತವೆ. ಕೆಲವು ಋತುಗಳಲ್ಲಿ ಈ ಹಣ್ಣಿಗೆ ಎಲ್ಲಿಲ್ಲದ ಬೇಡಿಕೆ ಕುದುರುತ್ತದೆ. ರಂಜಾನ್ ತಿಂಗಳಲ್ಲಿ, ಹಬ್ಬಗಳ ಋತುವಲ್ಲಿ ಸ್ಥಳೀಯ ಮಾರುಕಟ್ಟೆಗಳಲ್ಲೂ ಅನಾನಸ್ ಹಣ್ಣಿಗೆ ಎಲ್ಲಿಲ್ಲದೆ ಬೇಡಿಕೆ ಕುದುರುತ್ತದೆ. ಇದೀಗ ಮಾವಿನ ಹಣ್ಣು, ಹಲಸಿನ ಹಣ್ಣು, ಕಲ್ಲಂಗಡಿ ಹಣ್ಣು, ಮಾರುಕಟ್ಟೆಗೆ ಲಗ್ಗೆ ಇಟ್ಟಿರುವುದರಿಂದ ಅನಾನಸ್ ಹಣ್ಣಿಗೆ ಬೇಡಿಕೆ ಕುಸಿದಿದೆ ಎನ್ನುತ್ತಾರೆ ರೈತರು. ಜಿಲ್ಲೆಯಲ್ಲಿ ಬೆಳೆಯುವ ಅನಾನಸ್ ಹಣ್ಣುಗಳು ಮಹಾರಾಷ್ಟ್ರ, ಗುಜರಾತ್, ದೆಹಲಿ ಮೊದಲಾದಡೆಗೆ ಮಾರಾಟವಾಗುತ್ತದೆ. ವ್ಯಾಪಾರಿಗಳು ರೈತರ ತೋಟಕ್ಕೆ ಬಂದು ಅನಾನಸ್ ಹಣ್ಣುಗಳನ್ನು ಖರೀದಿಸಿಕೊಂಡು ಹೋಗುತ್ತಾರೆ. ಅನಾನಸ್ ಕೃಷಿಗೆ ಹೆಚ್ಚು ಕಾರ್ಮಿಕ ಅಗತ್ಯವಿದ್ದು, ಅನ್ಯ ರಾಜ್ಯಗಳ ಕಾರ್ಮಿಕರನ್ನೇ ಬೆಳೆಗಾರರು ಆಶ್ರಯಿಸಿದ್ದಾರೆ.

# ಮೀಸಲಾತಿ, ಭೂ ಸುಧಾರಣೆಗಳು ಸಾಮಾಜಿಕ ನ್ಯಾಯದ ಎರಡು ಪರಿಕಲ್ಪನೆಗಳು: ಜಾಲವಾದಿ

## ಜಾತೀಯ ಕಾರಣದಿಂದ ಮಾತ್ರ ಅಂಬೇಡ್ಕರರನ್ನು ಹೊರಗಿಟ್ಟ ನಮ್ಮ ಓಬಿಸಿ ಸಮಾಜ ಇಂದು ಪಶ್ಚಾತಾಪ ಪಡುತ್ತಿದೆ

• ಉದಯವಾಹಿನಿ, ಕೊಲ್ಹಾರ

ಅಂಬೇಡ್ಕರರ ಆರಂಭದ ದಿನಗಳಲ್ಲಿ ಅವರೆಲ್ಲಾ ಹೋರಾಟವು ಹಿಂದುಳಿದ ವರ್ಗದವರಿಗೆ ಮೀಸಲಾಗಿತ್ತು ಏಕೆಂದರೆ ಭೂ ಸುಧಾರಣೆ ಮತ್ತು ಮೀಸಲಾತಿ ಸಾಮಾಜಿಕ ನ್ಯಾಯದ ಎರಡು ಪರಿಕಲ್ಪನೆಗಳು ಎಂಬುವುದು ಅಂಬೇಡ್ಕರ್ ಅವರಿಗೆ ಚೆನ್ನಾಗಿ ಗೊತ್ತಿತ್ತು ಎಂದು ವಿಜಯಪುರದ ಪ್ರಗತಿಪರ ಚಿಂತಕ ಪ್ರೊ.ಪಿ.ಬಸವರಾಜ ಜಾಲವಾದಿ ಹೇಳಿದರು.

ಅವರು ನಿನ್ನೆ ಕೊಲ್ಹಾರ ತಾಲ್ಲೂಕಿನ ಮಸೂತಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ , ಮತ್ತು ಭಾರತರತ್ನ ಡಾ. ಬಿ ಆರ್ ಅಂಬೇಡ್ಕರ್ ವಿದ್ಯಾಚೇತನ ಯುವಕ ಸಂಘ ಮಸೂತಿ ಇವರ ಸಹಯೋಗದಲ್ಲಿ ನಡೆದ ಭಾರತರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135 ನೇ ಜಯಂತೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು.

ಮಾತು ಮುಂದುವರಿಸಿದ ಅವರು ಮೀಸಲಾತಿಗೆ ಮೂಲವಾಗಿರುವ 340ನೇ ಕಲಂ ಅನ್ನು ಸಂವಿಧಾನದಲ್ಲಿ ಸೇರ್ಪಡೆ ಮಾಡುವುದರ ಮೂಲಕ ವಿಶೇಷವಾಗಿ ಬಿ.ಪಿ ಮಂಡಲ ಆಯೋಗದ ಮೂಲಕ ಮೀಸಲಾತಿ ದೊರಕುವಂತೆ ಮಾಡಿದವರು. ಅಂಬೇಡ್ಕರ್ ಈ ಮೊದಲು ಡಾ. ಸಾಹೇಬ್ ಕಾಲೇಲ್ಕರ್ ಆಯೋಗ ರಚನೆಗೆ ಮೂಲ ಕಾರಣೀಕರ್ತರೇ ಅಂಬೇಡ್ಕರರೆಂಬುದನ್ನು ಓಬಿಸಿ ಜನಾಂಗದವರು ಎಂದೂ ಮರೆಯಬಾರದು. ಹಾಗೂ ಯಾವ ಬಿ.ಪಿ ಮಂಡಲ ಆಯೋಗದಿಂದ ಇಡೀ ಓಬಿಸಿ ಜನಾಂಗಕ್ಕೆ ಮೀಸಲಾತಿ ದೊರಕುವುದಿತ್ತೋ ಪ್ರಜ್ಞೆ ಇಲ್ಲದೆ ಅದನ್ನು ವಿರೋಧಿಸಿದವರು ಇದೇ ಓಬಿಸಿಗಳು.ಆದರೆ ಅದರ ಪರ ನಿಂತು ಬಿಪಿ ಮಂಡಲ್ ಆಯೋಗದ ಮೂಲಕ ಓಬಿಸಿಗಳಿಗೆ ಮೀಸಲಾತಿ ಕೊಡಬೇಕೆಂದು ಗಟ್ಟಿಯಾಗಿ ನಿಂತವರು ದಲಿತರು. ಹಿಂದುಳಿದವರು ಅದನ್ನು ವಿರೋಧಿಸಿ ಭಾರತದಾದ್ಯಂತ ಅದರಲ್ಲೂ ವಿಶೇಷವಾಗಿ ಉತ್ತರ ಪ್ರದೇಶ ಮಧ್ಯಪ್ರದೇಶದಲ್ಲಿ ಹೋರಾಟ ಮಾಡಿದ ಉದಾಹರಣೆ ಇದೆ. ವೇದಿಕೆಯ ಮೇಲೆ ಸಂತೋಷ ಗಣಾಚಾರಿ, ಎಚ್.ಎಸ್ ಘರಸಂಗಿ, ಶಂಕರ್ ಬರಗಿ ಎಸ್ ಕೆ .ಹಂಗರಗಿ, ಸಂತೋಷ ಚನಗೊಂಡ, ಬಿ.ಜಿ.ಬಿಸ್ಟಗೊಂಡ, ಈರಣ್ಣ ತಳವಾರ, ರಾಜು ಬೆಸ್ಟಗೊಂಡ, ಚಂದಪ್ಪ ತಳವಾರ್, ಸಿಪಿ ಪಾಟೀಲ, ಬಿ.ಎ ಪಾಟಿಲ, ಪ್ರಕಾಶ್ ಕಾಗಲ, ಪ್ರಕಾಶ್ ಘರಸಂಗಿ, ಬಸವರಾಜ ಸಾಲಹಳ್ಳಿ ಯಮನಪ್ಪ ತಳವಾರ, ಶ್ರೀಶೈಲ್ ಚಿಮ್ಮಲಗಿ, ಮಲ್ಲು ದಳವಾಯಿ, ಶ್ರೀಶೈಲ್ ಡೆಂಗಿ, ಎಸ್ ಎಸ್ ಗೌರಿಮಠ, ಯಲ್ಲಪ್ಪ ಛಲವಾದಿ, ಬಸವರಾಜ ಚಲವಾದಿ, ರಾಜು ದೊಡ್ಡಮನಿ ಸುನಿಲ್ ಹಾಗೂ ವಿದ್ಯಾಚೇತನ ಯುವಕ ಸಂಘದ ಯುವಕರು ಪದಾಧಿಕಾರಿಗಳು ಮುಂತಾದವರು ಹಾಜರಿದ್ದರು.

ಆರಂಭದಲ್ಲಿ ಸಂವಿಧಾನದ ಪೀಠಿಕೆಯನ್ನು ಓದುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆ ಆಯಿತು ಕಾರ್ಯಕ್ರಮದಲ್ಲಿ ಕ್ರಾಂತಿಗೀತೆಯ ಮೂಲಕ ಸ್ವಾಗತಿಸಲಾಯಿತು, ಶ್ರೀ ನವೀನ್ ಸಾಲಹಳ್ಳಿ ಕಾರ್ಯಕ್ರಮ ನಿರೂಪಿಸಿದರು.



ಉದಯವಾಹಿನಿ ಚಿತ್ರ

**ನದಿ ಪಾತ್ರ ಖಾಲಿಯಾದ ಕಾರಣಕ್ಕಾಗಿ ಬಂದ್**

> ಇವತ್ತಿಗೂ ಅಸ್ಪೃಶ್ಯತೆ ತಾಂಡವ ವಾಡುತ್ತಿರುವುದನ್ನು ನೋಡಿದರೆ ಭಾರತೀಯ ಮೇಲ್ವರ್ಗದ ಮನಸ್ಸುಗಳು ಮನುಷ್ಯರನ್ನು ಹಾಗೂ ದೇಶವನ್ನು ಕಡೆಗಣಿಸಿದ್ದಾರೆ ಎಂಬುದು ಸಾಬೀತಾಗುತ್ತದೆ. ಅಂಬೇಡ್ಕರ್ ಅವರ ವಿಚಾರಧಾರೆಗಳೆಲ್ಲ ತಳ ಸಮುದಾಯದ ಹಿಂದುಳಿದ, ದಲಿತ ,ಮಹಿಳೆ ಹಾಗೂ ಕಾರ್ಮಿಕರ ಪರವಾಗಿಯೇ ಇದ್ದವು. -ಅನಿಲ್ ಕುಮಾರ್ ದೊಡಮನಿ

> ಜಾತೀಯ ಕಾರಣದಿಂದ ಮಾತ್ರ ಅಂಬೇಡ್ಕರರನ್ನು ಹೊರಗಿಟ್ಟ ನಮ್ಮ ಓಬಿಸಿ ಸಮಾಜ ಇಂದು ಪಶ್ಚಾತಾಪ ಪಡುತ್ತಿದೆ. ಮುಂದಿನ ದಿನಮಾನಗಳಲ್ಲಿ ಅಂಬೇಡ್ಕರರ ಜಯಂತಿಯನ್ನು ಊರ ಗಣ್ಯರ ಸಮ್ಮುಖದಲ್ಲಿ ಆಚರಿಸುವ ಮೂಲಕ ಅವರ ಮನುಷ್ಯಪರ ಕಾಳಜಿಯನ್ನ ಇಡೀ ದೇಶಕ್ಕೆ ಮುಟ್ಟಿಸುವುದು ನಮ್ಮ ಜವಾಬ್ದಾರಿಯಾಗಬೇಕು. -ಶಂಕರ್ ಹೆಚ್. ಬರಗಿ

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 10:30 ರಿಂದ 12:00 |
| ಗುಳಿಕ ಕಾಲ | ಬೆಳಿಗ್ಗೆ | 07:30 ರಿಂದ 09:00 |
| ಯಮಗಂಡ ಕಾಲ | ಮಧ್ಯಾಹ್ನ | 03:00 ರಿಂದ 04:30 |

**ಮೇಷ** ಮಾತನಾಡುವ ಮುನ್ನ ಯೋಚಿಸಿ. ತಿಳಿಯದೆ ನಿಮ್ಮ ಅಭಿಪ್ರಾಯಗಳು ಬೇರೊಬ್ಬರ ಭಾವನೆಗಳಿಗೆ ಧಕ್ಕೆಯುಂಟು ಮಾಡಬಹುದು. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು.

**ವೃಷಭ** ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ನಿಮ್ಮ ಸ್ನೇಹಿತರೊಬ್ಬರು ಇಂದು ದೊಡ್ಡ ಸಾಲವನ್ನು ಕೇಳಬಹುದು.

**ಮಿಥುನ** ಜೀವನದೆಡೆಗೆ ಉದಾರವಾದ ಮನೋಭಾವ ಹೊಂದಿ. ದೂರು ನೀಡುವುದು ಮತ್ತು ನಿಮ್ಮ ಜೀವನಮಟ್ಟದ ಬಗೆಗೆ ಅಸಮಾಧಾನ ಹೊಂದುವುದರಿಂದ ಯಾವುದೇ ಪ್ರಯೋಜನವಿಲ್ಲ.

**ಕರ್ಕಾಟಕ** ನಿಮ್ಮ ಅಪಾರ ವಿಶ್ವಾಸ ಮತ್ತು ಸುಲಭದ ಕೆಲಸದ ವೇಳಾಪಟ್ಟಿ ಇಂದು ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಹೊಂದಿರುವ ಸಾಧ್ಯತೆ ಇದೆ.

**ಸಿಂಹ** ಪೂರ್ತಿ ದಿನ ನೀವು ಹಣದ ಬಗ್ಗೆ ಹೋರಾಟ ಮಾಡುತ್ತಿದ್ದೀರಿ, ಸಂಜೆಯ ಸಮಯದಲ್ಲಿ ನೀವು ಹಣದ ಲಾಭವನ್ನು ಪಡೆಯಬಹುದು. ಸ್ನೇಹಿತರು ನಿಮ್ಮ ವೈಯಕ್ತಿಕ ಜೀವನದಲ್ಲಿ ಹೆಚ್ಚು ಹಸ್ತಕ್ಷೇಪ ಮಾಡುತ್ತಾರೆ.

**ಕನ್ಯಾ** ನಿಮ್ಮ ಆಹಾರ ಕ್ರಮದ ಬಗ್ಗೆ, ವಿಶೇಷವಾಗಿ ಮೈಗ್ರೇನ್ ರೋಗಿಗಳು ಸೂಕ್ತ ಎಚ್ಚರ ತೆಗೆದುಕೊಳ್ಳಬೇಕು. ಅವರು ತಮ್ಮ ಊಟ ತಪ್ಪಿಸಿಕೊಂಡಲ್ಲಿ ಅದು ಅವರಿಗೆ ಅನಗತ್ಯ ಭಾವನಾತ್ಮಕ ಒತ್ತಡವನ್ನು ಉಂಟುಮಾಡಬಹುದು.

**ತುಲಾ** ನೀವು ಜೀವನವನ್ನು ಸಂತೋಷದಿಂದ ಅನುಭವಿಸಲು ಸಿದ್ಧವಾಗುತ್ತಿದ್ದ ಹಾಗೆ ನಿಮಗೆ ಸಂತೋಷ ಹಾಗೂ ಆನಂದ. ನಿಮಗಾಗಿ ಹಣವನ್ನು ಉಳಿಸುವ ನಿಮ್ಮ ಬಯಕೆ ಇಂದು ಪೂರ್ಣಗೊಳ್ಳಬಹುದು.

**ವೃಶ್ಚಿಕ** ಮಾನಸಿಕ ದೃಢತೆಗಾಗಿ ಧ್ಯಾನ ಮತ್ತು ಯೋಗ ಪ್ರಾರಂಭಿಸಿ. ನಿಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದರೂ ಹಣದಹೊರಹರಿವು ನಿಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ತೊಂದರೆಯುಂಟುಮಾಡುತ್ತದೆ.

**ಧನಸ್ಸು** ಇಂದು ನೀವು ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು.

**ಮಕರ** ಇಂದು ನೀವು ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು.

**ಕುಂಭ** ಸ್ವತಃ ಔಷಧಿ ತೆಗೆದುಕೊಳ್ಳುವುದು ಅವಲಂಬನೆಯನ್ನು ಉಂಟುಮಾಡಬಹುದು. ಯಾವುದೇ ಔಷಧ ತೆಗೆದುಕೊಳ್ಳುವ ಮೊದಲು ವೈದ್ಯರ ಸಲಹೆ ಪಡೆಯಿರಿ. ಇಲ್ಲದಿದ್ದಲ್ಲಿ ಔಷಧ ಅವಲಂಬನೆಯ ಸಾಧ್ಯತೆ ಅಧಿಕವಾಗಿದೆ.

**ಮೀನ** ನಿಮ್ಮ ಕುಟುಂಬಕ್ಕೆ ಸೂಕ್ತ ಸಮಯ ನೀಡಿ. ನೀವು ಅವರ ಸಲುವಾಗಿ ಕಾಳಜಿ ವಹಿಸುತ್ತೀರೆಂದು ಅವರಿಗೆ ಅರ್ಥವಾಗಲಿ. ಅವರೊಂದಿಗೆ ನಿಮ್ಮ ಗುಣಮಟ್ಟದ ಸಮಯ ಕಳೆಯಿರಿ.

### ಗ್ರಾಮಗಳಲ್ಲಿ ನೀರಿನ ಕೊರತೆಯಾಗದಂತೆ ನೋಡಿಕೊಳ್ಳಬೇಕು ಶಾಸಕ ಕಟ್ಟುನಿಟ್ಟಿನ ಸೂಚನೆ

# ಕುಡಿಯುವ ನೀರು ಪೂರೈಕೆಯಲ್ಲಿ ನಿರ್ಲಕ್ಷ್ಯವಾದರೆ ಕ್ರಮ: ಚವ್ಹಾಣ

• ಉದಯವಾಹಿನಿ ಔರಾದ್

ಬೇಸಿಗೆಯ ರಣಬಿಸಿಲು ತೀವ್ರವಾಗಿ ಹೆಚ್ಚುತ್ತಿರುವ ಹಿನ್ನೆಲೆ ಕ್ಷೇತ್ರದ ಅನೇಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರ ರೂಪ ಪಡೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದೆಂದು ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಎಚ್ಚರಿಸಿದರು.


ಉದಯವಾಹಿನಿ ಚಿತ್ರ

ಔರಾದ(ಬಿ) ತಾಲ್ಲೂಕು ಪಂಚಾಯತ ಕಛೇರಿ ಸಭಾಂಗಣದಲ್ಲಿ ಏ.30 ರಂದು ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ತಹಶೀಲ್ದಾರರು, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಸಮನ್ವಯತೆಯಿಂದ ಕೆಲಸ ಮಾಡಿ ಕ್ಷೇತ್ರದ ಯಾವೊಂದು ಗ್ರಾಮದಲ್ಲಿಯೂ ನೀರಿನ ಕೊರತೆಯಾಗದಂತೆ ನೋಡಿಕೊಳ್ಳಬೇಕು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ನೀರಿನ ಸಮಸ್ಯೆ ಕಂಡುಬಂದ ಕೂಡಲೇ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಬೇಕು. ಕೆಟ್ಟಿರುವ ಬೋರ್‌ವೆಲ್‌ಗಳನ್ನು ತಕ್ಷಣ ದುರಸ್ತಿ ಮಾಡಬೇಕು, ಅಗತ್ಯವಿದ್ದಲ್ಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಸಬೇಕು. ಪೈಪ್‌ಲೈನ್ ದುರಸ್ತಿ ಸೇರಿದಂತೆ ಎಲ್ಲಾ ಕಾಮಗಾರಿಗಳನ್ನು ಗಡುವಿನೊಳಗೆ ಪೂರ್ಣಗೊಳಿಸಬೇಕು. ವಿಳಂಬ ಅಥವಾ ನಿರ್ಲಕ್ಷ್ಯ ಕಂಡುಬಂದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಸಾಕಷ್ಟು ಬಿಸಲಿನ ಕಾರಣ ಪಶು ಪಕ್ಷಿಗಳಿಗೆ ನೀರಿನ ತೊಂದರೆಯಾಗುತ್ತಿದೆ. ಹಾಗಾಗಿ ಸಣ್ಣ ನೀರಾವರಿ ಇಲಾಖೆಯ ಕೆರೆಗಳಿಂದ ನಾಲಾಗಳಿಗೆ ನೀರು ಹರಿಸಿ ಅನುಕೂಲ ಮಾಡಿಕೊಡಬೇಕು. ಇನ್ನೊಂದು ತಿಂಗಳು ನೀರಿನ ಸಮಸ್ಯೆ ಹೆಚ್ಚಾಗಿ ಕಾಣಿಸುವುದರಿಂದ ಎಲ್ಲಾ ಅಧಿಕಾರಿಗಳು ಚುರುಕಿನಿಂದ ಕೆಲಸ ಮಾಡಬೇಕು. ಜನ, ಜಾನುವಾರುಗಳಿಗೆ ನೀರಿನ ಕೊರತೆಯಾಗದಂತೆ ಎಚ್ಚರ ವಹಿಸಬೇಕು ಎಂದರು. ಈ ವರ್ಷ ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಸುಧಾರಣೆ ಕಾಣಿಸಿರುವುದಕ್ಕೆ ಸಂತೋಷವಾಗಿದೆ. ಆದರೆ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಕೊರತೆಯಿರುವುದನ್ನು ಕಂಡು ಬೇಸರವಾಗುತ್ತಿದೆ. ಎಲ್ಲಾ ಮುಖ್ಯಗುರುಗಳು ಮತ್ತು ಶಿಕ್ಷಕರು ಮನೆ-ಮನೆಗೆ ಭೇಟಿ ನೀಡಿ ಪೋಷಕರ ಮನವೊಲಿಸಬೇಕು. ಸರಿಯಾಗಿ ಪಾಠ ಮಾಡುತ್ತೇವೆಂದು ಭರವಸೆ ನೀಡಿ ದಾಖಲಾತಿ ಪ್ರಮಾಣವನ್ನು ಹೆಚ್ಚಿಸಬೇಕು. ಮುಂದಿನ ಪರೀಕ್ಷೆ ವೇಳೆಗೆ ಕನಿಷ್ಟ 5 ಸಾವಿರ ಮಕ್ಕಳು ಪರೀಕ್ಷೆ ಬರೆಯುವಂತಾಗಬೇಕು. ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಬೇಕಾದಷ್ಟು ಅನುದಾನ ನೀಡುತ್ತಿದ್ದೇನೆ. ಇನ್ನೂ ಅವಶ್ಯಕತೆಯಿದ್ದಲ್ಲಿ ಕೇಳಿ ಕೊಡುತ್ತೇನೆ. ಆದರೆ ಶಿಕ್ಷಣದ ವಿಷಯದಲ್ಲಿ ಕೊರತೆಯಾದರೆ ಸುಮ್ಮನೆ ಬಿಡುವುದಿಲ್ಲ ಎಂದು ಎಚ್ಚರಿಸಿದರು.

ಸರ್ಕಾರಿ ಶಾಲೆಗಳಿಗೆ ಕಳಪೆ ಆಹಾರ ಪೂರೈಕೆಯಾಗಿರುವುದು ಗ್ರಾಮ ಸಂಚಾರದ ಸಂದರ್ಭದಲ್ಲಿ ಪತ್ತೆಯಾಗಿದೆ. ಜಮಾಲಪೂರನಲ್ಲಿ ಕಳಪೆ ಮಟ್ಟದ ಆಹಾರ ಪದಾರ್ಥಗಳಿಂದ ಸಿದ್ದಪಡಿಸಿದ ಆಹಾರ ಸೇವಿಸಿ ಅನೇಕ ಮಕ್ಕಳು ಅನಾರೋಗ್ಯಕ್ಕೆ ಒಳಗಾಗಿದ್ದರು. ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಿದರು.

ಸರ್ಕಾರಿ ಆಸ್ಪತ್ರೆಗಳಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸುತ್ತಿದ್ದೇನೆ. ಎಕ್ಸರೇ, ಡಯಾಲಿಸಿಸ್ ಸೇರಿದಂತೆ ಎಲ್ಲಾ ಯಂತ್ರಗಳು ಸರಿಯಾಗಿ ಕೆಲಸ ಮಾಡುವಂತಾಗಬೇಕು. ಸಣ್ಣ-ಸಣ್ಣ ವಿಷಯಗಳಿಗೆ ಜಿಲ್ಲಾಸ್ಪತ್ರೆಗೆ ಶಿಫಾರಸ್ಸು ಮಾಡುವುದು ನಿಲ್ಲಬೇಕು. ಆಸ್ಪತ್ರೆಗೆ ಬರುವ ಎಲ್ಲಾ ರೋಗಿಗಳಿಗೆ ಸರಿಯಾಗಿ ಚಿಕಿತ್ಸೆ ಕಲ್ಪಿಸಬೇಕೆಂದು ತಾಲ್ಲೂಕು ಆರೋಗ್ಯಾಧಿಕಾರಿಗೆ ಸೂಚಿಸಿದರು.

ಸಭೆಯಲ್ಲಿ ಕೃಷಿ, ತೋಟಗಾರಿಕೆ, ಲೋಕೋಪಯೋಗಿ, ಪಂಚಾಯತ್ ರಾಜ್, ಪಶು ಸಂಗೋಪನೆ, ಕಂದಾಯ, ಅರಣ್ಯ, ಸಮಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಜೆಸ್ಕಾಂ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಲಾಯಿತು.

ತಾಲ್ಲೂಕು ಪಂಚಾಯತ ಆಡಳಿತಾಧಿಕಾರಿಯಾದ ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕರಾದ ಸೂರ್ಯಕಾಂತ ಬಿರಾದಾರ, ಔರಾದ(ಬಿ) ತಹಶೀಲ್ದಾರ ಮಹೇಶ ಪಾಟೀಲ, ಕಮಲನಗರ ತಹಶೀಲ್ದಾರ ಅಮಿತ ಕುಲಕರ್ಣಿ, ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕಿರಣ ಪಾಟೀಲ, ಹಣಮಂತರಾವ ಕೌಟಗೆ ಸೇರಿದಂತೆ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

**ಅಧಿಕಾರಿಗಳು ಮತ್ತು ಗುತ್ತಿಗೆದಾರರಿಂದ ಲೂಟಿ**

ಔರಾದ(ಬಿ) ವಿಧಾನಸಭಾ ಕ್ಷೇತ್ರದಲ್ಲಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಲು 250 ಕೋಟಿಗಿಂತ ಹೆಚ್ಚು ಅನುದಾನ ತಂದಿದ್ದೇನೆ. 276 ಕಾಮಗಾರಿಗಳ ಪೈಕಿ ಸುಮಾರು 50 ಕೆಲಸಗಳು ಸರಿಯಾಗಿ ಆಗಿವೆ. ಉಳಿದಂತೆ ಎಲ್ಲವೂ ಕಳಪೆಯಾಗಿವೆ. ಅಧಿಕಾರಿಗಳು ಮತ್ತು ಗುತ್ತಿಗೆದಾರರು ಸೇರಿಕೊಂಡು ಲೂಟಿ ಮಾಡಿದ್ದಾರೆ. ಹಣದ ಆಮೀಷವೊಡ್ಡಿ ಕಾಮಗಾರಿ ಕಳಪೆಯಾದರೂ ಹ್ಯಾಂಡೋವರ್ ಮಾಡಲಾಗಿದೆ. ಇದರ ಪರಿಣಾಮ ಜನತೆ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು, ಗ್ರಾಮೀಣಾಭಿವೃದ್ಧಿ ಸಚಿವರು, ಜಿಲ್ಲಾಧಿಕಾರಿಗಳು ಒಳಗೊಂಡು ಸಂಬಂಧಪಟ್ಟ ಎಲ್ಲರಿಗೂ ದೂರು ಸಲ್ಲಿಸಲಾಗಿದೆ. ಆದರೆ ಇಲ್ಲಿವರೆಗೆ ಯಾವ ಕ್ರಮವೂ ಆಗಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

**ಟ್ಯಾಂಕರ್ ಮೂಲಕ ನೀರು ಪೂರೈಕೆ**

## ಪರಿಶ್ರಮ ಇಲ್ಲದೇ ಪರೀಕ್ಷೆ ಗೆಲ್ಲಲು ಸಾಧ್ಯವಿಲ್ಲ

• ಉದಯವಾಹಿನಿ ಜೇವರ್ಗಿ

ಸತತ ಪರಿಶ್ರಮ ಇಲ್ಲದಿದ್ದರೆ ಯಾವ ಪರೀಕ್ಷೆಯನ್ನು ಗೆಲ್ಲಲು ಸಾಧ್ಯವಿಲ್ಲ ಎಂದು ಬಸವಶ್ರೀ ಪದವಿ ಮಹಾವಿದ್ಯಾಲಯದ ಪಾಂಶುಪಾಲ ಪ್ರೊ.ಬಸವರಾಜ ಕೋರೆ ಹೇಳಿದರು.


ಉದಯವಾಹಿನಿ ಚಿತ್ರ

ಪಟ್ಟಣದ ಬಸವೇಶ್ವರ ಸರ್ಕಲ್ ಹತ್ತಿರದ ಬಸವಶ್ರೀ ಪದವಿ ಕಾಲೇಜಿನಲ್ಲಿ ಮೋರಟಗಿಯ ಕಲ್ಪವೃಕ್ಷ ವಿದ್ಯಾ ಸಂಸ್ಥೆಯ ಕಾಲೇಜಿನ ಉಪನ್ಯಾಸಕರಾದ ಬಿ.ಎಸ್. ಸಾಲಿಮಠ ಅವರ ರಚಿತ ಇತಿಹಾಸ ಬಿಂಬ ಸ್ಪರ್ಧಾತ್ಮಕ ಪರೀಕ್ಷೆಗಳ ಕೈಪಿಡಿ ಬಿಡುಗಡೆ ಮಾಡಿ ಅವರು ಮಾತನಾಡಿದರು. ಓದುವಾಗ ಯಾವುದನ್ನೂ ಓದಬೇಕು, ಯಾವುದನ್ನೂ ಓದಬಾರದು ಎನ್ನುವುದನ್ನು ತಿಳಿದುಕೊಂಡರೆ ಉತ್ತಮ. ಪ್ರತಿದಿನ ಪತ್ರಿಕೆ ಓದಿ, ನಾಲ್ಕೈದು ವರ್ಷಗಳ ಸಾಮಾನ್ಯ ಜ್ಞಾನ ನಿಮಗೆ ತಿಳಿದಿರಲಿ. ಓದಲು ಸಮಯ ಇಟ್ಟುಕೊಂಡು ಕೂತಾಗ ಬೇರೆ ಕೆಲಸಗಳ ಬಗ್ಗೆ ಗಮನ ಕೊಡಬೇಡಿ' ಎಂದು ಸಲಹೆ ನೀಡಿದರು. ಲೇಖಕ ಬಿ.ಎಸ್. ಸಾಲಿಮಠ ಮಾತನಾಡಿ, ಓದುವಾಗ ಯಾವಾಗಲೂ ಒಬ್ಬ ವ್ಯಕ್ತಿಯನ್ನು ಮಾದರಿಯನ್ನಾಗಿ ಇಟ್ಟುಕೊಳ್ಳಬೇಕು. ಆವಾಗ ನಿಮಗೆ ಓದಲು ಆಸಕ್ತಿ ಹೆಚ್ಚಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆ ಎನ್ನುವುದು ದೂರದ ಪಯಣ ಇದ್ದಂತೆ. ಇಲ್ಲಿ ಪರಿಶ್ರಮ ಮುಖ್ಯ. ಧೈರ್ಯ ಇದ್ದರೆ ಏನನ್ನಾದರೂ ಸಾಧಿಸಬಹುದು' ಎಂದರು.

ಶ್ರೀ ನೂರಂದೇಶ್ವರ ಕಾಲೇಜಿನ ಪ್ರಾಚಾರ್ಯರಾದ ವೆಂಕಟರಾವ ಮುಜುಮದಾರ, ಸಿದ್ದಲಿಂಗ ಪದವಿ ಕಾಲೇಜಿನ ಪ್ರಾಚಾರ್ಯರಾದ ನಿಂಬೆಣ್ಣ ರುದ್ರಪ್ಪಗೋಳ, ಉಪನ್ಯಾಸಕರಾದ ಸಂಜಯ ಪಾಟೀಲ, ಹಣಮಂತರಾಯ ಬಿರಾದಾರ, ಆನಂದ ಹರಸೂರ, ದೇವಪ್ಪ, ರಾಜ ಕುಮಾರ, ವಾಹಬ್, ಸಂತೋಷ, ಅಯ್ಯಣ್ಣ, ಅಶೋಕ ಪೂಜಾರಿ, ಅರ್ಚನಾ, ಪ್ರಿಯಾಂಕಾ ಇದ್ದರು.

## ಮೇ 10ರಂದು ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಅರ್ಥಪೂರ್ಣ ಆಚರಣೆ

• ಉದಯವಾಹಿನಿ ಚಿತ್ರದುರ್ಗ

ಜಿಲ್ಲಾ ಕೇಂದ್ರದಲ್ಲಿ ಮೇ 10ರಂದು ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಉಪವಿಭಾಗಾಧಿಕಾರಿ ಡಾ.ಕೆ.ಜೆ.ಕಾಂತರಾಜು ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಿಸುವ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮೇ.10 ರಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೆಳಿಗ್ಗೆ 11 ಗಂಟೆಗೆ ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಗುವುದು. ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆ ಮುದ್ರಣ, ವಿತರಣೆ ನಡೆಯಲಿದೆ ಎಂದು ಹೇಳಿದರು. ಹೇಮರೆಡ್ಡಿ ಮಲ್ಲಮ್ಮ ಸಮಾಜ ಕಾರ್ಯದರ್ಶಿ ಡಿ.ಟಿ.ಶಿವಾನಂದಪ್ಪ ಮಾತನಾಡಿ, ಸಮಾಜದ ವತಿಯಿಂದಲೂ ಮೇ 25ರಂದು ಶಿವಶರಣೆ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಯಂತಿ ಅಂಗವಾಗಿ ಅದ್ದೂರಿ ಮೆರವಣಿಗೆ, ಸಮಾಜದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಸಮಾಜದ ಸಾಧಕರಿಗೆ ಸನ್ಮಾನ ಮಾಡಲಾಗುವುದು.


ಉದಯವಾಹಿನಿ ಚಿತ್ರ

ಸಮಾಜದ ವತಿಯಿಂದ ನಡೆಯುವ ಜಯಂತಿ ಕಾರ್ಯಕ್ರಮಕ್ಕೂ ಅಗತ್ಯ ಸಹಕಾರ ನೀಡುವಂತೆ ಜಿಲ್ಲಾಡಳಿತಕ್ಕೆ ಮನವಿ ಮಾಡಿದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಬಿ.ಎಂ.ಗುರುನಾಥ, ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಚಿದಾನಂದಸ್ವಾಮಿ, ನಗರಸಭೆಯ ಪುಟ್ಟಪ್ಪ, ಹೇಮರೆಡ್ಡಿ ಮಲ್ಲಮ್ಮ ಸಮಾಜದ ಅಧ್ಯಕ್ಷ ಡಾ.ಎಲ್.ಪಾಲಾಕ್ಷಯ್ಯ, ನಗರಸಭೆ ಮಾಜಿ ಅಧ್ಯಕ್ಷೆ ಸುನಿತಾ ಮಲ್ಲಿಕಾರ್ಜುನ್, ಮುಖಂಡರಾದ ಮಲ್ಲಿಕಾರ್ಜುನ, ರವಿಂದ್ರನಾಥ, ನಾಗಭೂಷಣ, ಶಶಿಧರ ಇದ್ದರು.

## ಹಾಸನದಲ್ಲಿ ಕಲಾ ಗ್ಯಾಲರಿ ಅಗತ್ಯ: ಬಿ.ಎಸ್. ದೇಸಾಯಿ ಕದಂಬ ಸೈನ್ಯಯಿಂದ ಕಲಾಸಾಧಕರಿಗೆ ಗೌರವ ಸನ್ಮಾನ

• ಉದಯವಾಹಿನಿ ಹಾಸನ

ಚಿತ್ರಕಲಾ ಶಿಕ್ಷಕರಾದ ಬಿ.ಎಸ್. ದೇಸಾಯಿ ಅವರು ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡೆಮಿ ವತಿಯಿಂದ 2025-26ನೇ ಸಾಲಿನ ಗೌರವ ಪ್ರಶಸ್ತಿಗೆ ಭಾಜನರಾಗಿದ್ದು, ಇವರನ್ನು ಕದಂಬ ಸೇನೆ ಕನ್ನಡ ಸಂಘಟನೆ ಹಾಸನ ಜಿಲ್ಲಾ ಘಟಕದ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.


ಉದಯವಾಹಿನಿ ಚಿತ್ರ

ದೇಸಾಯಿಯವರ ನಿವಾಸದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಸಾಹಿತಿ ಮತ್ತು ಲೇಖಕರಾದ ಗೊರೂರು ಅನಂತರಾಜು ಮಾತನಾಡಿ, ಸಾಧಕರನ್ನು ಗುರುತಿಸಿ ಗೌರವಿಸುವುದು ಸಮಾಜದ ಸಂಸ್ಕೃತಿಯ ಪ್ರತಿಬಿಂಬ. ದೇಸಾಯಿಯವರು ತಮ್ಮ ಕಲೆ ಮೂಲಕ ಸಮಾಜದ ಅಂತರಂಗವನ್ನು ಮುಟ್ಟುವ ಪ್ರಯತ್ನ ಮಾಡಿದ್ದಾರೆ ಎಂದು ಹೇಳಿದರು. ಕದಂಬ ಸೈನ್ಯ ಕನ್ನಡ ಸಂಘಟನೆಯ ಹಾಸನ ಜಿಲ್ಲಾಧ್ಯಕ್ಷರಾದ ಹೆಚ್.ಎ. ಗಣೇಶ್ ಅಂಕಪುರ ಮಾತನಾಡಿ, ಕಲೆ ಎಲ್ಲರಿಗೂ ಸ್ಪರ್ಶಿಸಿದರೂ, ಅದನ್ನು ಆಳವಾಗಿ ಅರಿಯುವವರು ವಿರಳ. ದೇಸಾಯಿಯವರ ಚಿತ್ರಗಳು ನೋಡುಗರ ಮನಸ್ಸಿನಲ್ಲಿ ಚಿಂತನೆ ಮೂಡಿಸುವ ಶಕ್ತಿಯನ್ನು ಹೊಂದಿವೆ'' ಎಂದು ಅಭಿಪ್ರಾಯಪಟ್ಟರು.

ಈ ಸಂದರ್ಭದಲ್ಲಿ ಕದಂಬ ಸೈನ್ಯ ಕನ್ನಡ ಸಂಘಟನೆಯ ಸಕಲೇಶಪುರ ತಾಲ್ಲೂಕು ಅಧ್ಯಕ್ಷರಾದ ಮತ್ತು ಸಾಹಿತಿ ವಿಶ್ವಾಸ್.ಡಿ .ಗೌಡ ಮಾತನಾಡಿ, ''ದೇಸಾಯಿಯವರ ಕಲಾಸಾಧನೆ ನಮ್ಮ ಜಿಲ್ಲೆಯ ಹೆಮ್ಮೆ. ಅವರ ಚಿತ್ರಗಳು ಕೇವಲ ಕಲೆ ಮಾತ್ರವಲ್ಲ, ಸಮಾಜಕ್ಕೆ ಸಂದೇಶ ನೀಡುವ ದಾರಿದೀಪವಾಗಿವೆ. ಯುವ ಪೀಳಿಗೆಗೆ ಇದು ಪ್ರೇರಣೆಯಾಗಬೇಕು ಎಂದು ತಿಳಿಸಿದರು. ಗೌರವ ಸ್ವೀಕರಿಸಿದ ದೇಸಾಯಿಯವರು ಮಾತನಾಡಿ, ಕಳೆದ ಮೂವತ್ತಾರು ವರ್ಷಗಳಿಂದ ಚಿತ್ರಕಲಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದು, ಅದು ತಮ್ಮಗೆ ಅಪಾರ ತೃಪ್ತಿ ನೀಡಿದೆ ಎಂದರು. ಹಾಸನದಲ್ಲಿ ಒಂದು ಕಲಾ ಗ್ಯಾಲರಿ ಸ್ಥಾಪನೆಯಾಗಿ, ಸ್ಥಳೀಯ ಕಲಾವಿದರಿಗೆ ಉತ್ತೇಜನ ಸಿಗುವಂತಾಗಬೇಕು ಎಂದು ಆಶಿಸಿದರು.

**ಯುವ ಪೀಳಿಗೆಗೆ ಪ್ರೇರಣೆ**

ಈ ಸಂದರ್ಭದಲ್ಲಿ ಶಿಕ್ಷಕರಾದ ಕೆ.ಎನ್. ಚಿದಾನಂದ, ಅಂಕಪುರ ಕುಮಾರ್ ಮತ್ತು ಗಾಯಕ ಜಿ.ಆರ್. ಶ್ರೀಕಾಂತ್ ಅವರು ದೇಸಾಯಿಯವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

## ಬಿಸಿಲಿಗೆ ತತ್ತರಿಸಿದ ಗಿರಿನಾಡು: ಯಾದಗಿರಿಯಲ್ಲಿ ಮಿನಿ ಏರ್ ಕೂಲರ್ ಹಿಡಿದು ಓಡಾಡುತ್ತಿರುವ ಯುವಕ!

• ಉದಯವಾಹಿನಿ ಯಾದಗಿರಿ

ರಾಜ್ಯದ ಬಿಸಿಲ ನಾಡು ಎಂದೇ ಖ್ಯಾತಿಯಾಗಿರುವ ಗಿರಿನಾಡು ಯಾದಗಿರಿಯಲ್ಲಿ ಸೂರ್ಯನ ಅಬ್ಬರ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಅಕ್ಷರಶಃ ಬೆಂಕಿಯ ಉಂಡೆಯಂತಿರುವ ಇಲ್ಲಿನ ವಾತಾವರಣಕ್ಕೆ ಜನರು ತತ್ತರಿಸಿ ಹೋಗಿದ್ದಾರೆ. ಈ ಸುಡುವ ಬಿಸಿಲಿನಿಂದ ಬಚಾವಾಗಲು ಜನರು ನಾನಾ ಕಸರತ್ತುಗಳನ್ನು ನಡೆಸುತ್ತಿದ್ದು, ಈಗ ಯುವಕನೊಬ್ಬನ ವಿಭಿನ್ನ ಐಡಿಯಾ ಎಲ್ಲರ ಗಮನ ಸೆಳೆಯುತ್ತಿದೆ.

**ನಡೆದಾಡುವ ಕೂಲರ್!:** ಸಾಮಾನ್ಯವಾಗಿ ಜನರು ಬಿಸಿಲಿನಿಂದ ತಪ್ಪಿಸಿಕೊಳ್ಳಲು ಛತ್ರಿ ಮೊರೆ ಹೋಗುತ್ತಾರೆ ಅಥವಾ ತಂಪು ಪಾನೀಯಗಳ ಮೊರೆ ಹೋಗುತ್ತಾರೆ. ಆದರೆ, ಈ ಯುವಕ ಮಾತ್ರ ಒಂದು ಹೆಜ್ಜೆ ಮುಂದೆ ಹೋಗಿ ತನ್ನೊಂದಿಗೆ ಪೋರ್ಟಬಲ್ ಮಿನಿ ಏರ್ ಕೂಲರ್ ಅನ್ನೇ ಹಿಡಿದುಕೊಂಡು ಓಡಾಡುತ್ತಿದ್ದಾನೆ. ಕೈಯಲ್ಲಿ ಹಿಡಿಯಬಹುದಾದ ಈ ಪುಟ್ಟ ಕೂಲರ್ ಅನ್ನು ತನ್ನೊಂದಿಗೆ ಕೊಂಡೊಯ್ಯುವ ಮೂಲಕ ಎಲ್ಲಿದ್ದರೂ ತಂಪಾದ ಗಾಳಿ ಪಡೆಯುತ್ತಿದ್ದಾನೆ.

**ವೈರಲ್ ಆದ ಫೋಟೋ:** ಬಿಳಿ ಬಣ್ಣದ ಪಟ್ಟೆ ಅಂಗಿ ತೊಟ್ಟು, ಮರದ ಕೆಳಗೆ ಕುಳಿತಿರುವ ಈ ಯುವಕ, ತನ್ನ ಪಕ್ಕದಲ್ಲೇ ಆಧುನಿಕ ತಂತ್ರಜ್ಞಾನದ ಮಿನಿ ಕೂಲರ್ ಹಿಡಿದು ಮುಗುಳ್ನಗುತ್ತಿರುವ ದೃಶ್ಯ ಈಗ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಗೆ ಕಾರಣವಾಗಿದೆ. ಬಿಸಿಲಿಗೆ ಹೆದರಿ ಮನೆಯಲ್ಲಿ ಕೂರುವ ಬದಲು, ತಂಪನ್ನು ನಾವೇ ಜೊತೆಗೆ ಕೊಂಡೊಯ್ಯುವುದು ಉತ್ತಮ ಎಂಬ ಸಂದೇಶ ಈ ಫೋಟೋ ನೀಡುವಂತಿದೆ.

ಒಟ್ಟಿನಲ್ಲಿ, ಬಿಸಿಲ ಬೇಗೆಯಿಂದ ತಪ್ಪಿಸಿಕೊಳ್ಳಲು ಯಾದಗಿರಿ ಯುವಕನ ಈ ಕೂಲ್ ಐಡಿಯಾ ಮಾತ್ರ ಸಖತ್ ಸ್ಮಾರ್ಟ್ ಆಗಿದೆ ಎನ್ನುತ್ತಿದ್ದಾರೆ ಸ್ಥಳೀಯರು.


ಉದಯವಾಹಿನಿ ಚಿತ್ರ

**ಯಾದಗಿರಿಯಲ್ಲಿ ಕೆಂಡದಂತಹ' ವಾತಾವರಣ**

ಪ್ರಸ್ತುತ ಯಾದಗಿರಿ ಜಿಲ್ಲೆಯಲ್ಲಿ ತಾಪಮಾನ ಗರಿಷ್ಠ ಮಟ್ಟಕ್ಕೆ ತಲುಪಿದ್ದು, ಮಧ್ಯಾಹ್ನ 12 ಗಂಟೆಯ ನಂತರ ರಸ್ತೆಗಿಳಿಯುವುದೇ ಸವಾಲಾಗಿ ಪರಿಣಮಿಸಿದೆ. ಇಂತಹ ಸಂದರ್ಭದಲ್ಲಿ ಇಂತಹ ಪುಟ್ಟ ಗ್ಯಾಜೆಟ್‌ಗಳು ಜನಸಾಮಾನ್ಯರಿಗೆ ಕೊಂಚ ಮಟ್ಟಿನ ಸಮಾಧಾನ ನೀಡುತ್ತಿವೆ.

## ದೇವಸ್ಥಾನಕ್ಕೆ ಕನ್ನ: ಆರೋಪಿಯ ಬಂಧನ

• ಉದಯವಾಹಿನಿ ಕಲಬುರಗಿ

ಮಹಾನಗರದ ಅಡ್ವೋಕೇಟ್ ಕಾಲೋನಿಯ ಶ್ರೀಮಹಾಲಕ್ಷ್ಮೀ ದೇವಸ್ಥಾನದ ಬೀಗ ಮುರಿದು ಚಿನ್ನಾಭರಣ ಕದ್ದ ಕಳ್ಳನನ್ನು ಬಂಧಿಸುವಲ್ಲಿ ಸ್ಟೇಷನ್ ಬಜಾರ ಪೊಲೀಸರು ಯಶಸ್ವಿಯಾಗಿದ್ದಾರೆ. ಕಳೆದ ತಿಂಗಳು ಶ್ರೀಮಹಾಲಕ್ಷ್ಮೀ ದೇವಸ್ಥಾನದ ಬೀಗ ಮುರಿದ ಕಳ್ಳನೊಬ್ಬ, ದೇವಿಯ ಮೂರ್ತಿಯ 7 ಗ್ರಾಂ ಚಿನ್ನದ ತಾಳಿ (90 ಸಾವಿರ), ಮತ್ತೊಂದು ಸಣ್ಣ ಮೂರ್ತಿಯ 2 ಗ್ರಾಂ ಚಿನ್ನದ ತಾಳಿ (20 ಸಾವಿರ) ಹಾಗೂ 100 ಗ್ರಾಂ ಬೆಳ್ಳಿಯ ದೇವಿಯ ಮೂರ್ತಿ (20 ಸಾವಿರ) ಒಟ್ಟು 1.37 ಮೌಲ್ಯದ ಚಿನ್ನಾಭರಣ ಕದ್ದು ಪರಾರಿಯಾಗಿರುವ ಪ್ರಕರಣ ಸ್ಟೇಷನ ಬಜಾರ ಠಾಣೆಯಲ್ಲಿ ದಾಖಲಾಗಿತ್ತು.

ನಗರ ಪೊಲೀಸ ಆಯುಕ್ತ ಶರಣಪ್ಪ ಎಸ್.ಡಿ, ಉಪ ಆಯುಕ್ತ ಪ್ರವೀಣ ನಾಯಕ ಅವರ ಮಾರ್ಗದರ್ಶನದಲ್ಲಿ ಸಹಾಯಕ ಪೊಲೀಸ ಆಯುಕ್ತ ಎನ್.ಎಚ್.ಸುಬೇದಾರ ಮತ್ತು ಸ್ಟೇಷನ ಬಜಾರ ಠಾಣೆಯ ಪಿಐ ಗುರುಲಿಂಗಪ್ಪಗೌಡ ಪಾಟೀಲ ನೇತೃತ್ವದ ತಂಡ ದಾಳಿ ನಡೆಸಿ ಕಳ್ಳತನದ ಆರೋಪಿ ಮೊಹ್ಮದ ಅಹ್ಮದ ತಂದೆ ಮೊಹ್ಮದ ನಯಿಮ್ ಸಾ.ಅಫಜಲಪೂರ ಹಾಲಿ ವಸ್ತಿ ಹಾಗರಗಾ ಕಲಬುರಗಿ ಎಂಬುವವರನ್ನು ಬಂಧಿಸಿ ಆತನಿಂದ 1.37 ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಿಕೊಂಡು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

## ಕಾರ್ಮಿಕ ದಿನಾಚರಣೆಯಂದು ರಜೆ ಘೋಷಿಸಲು ಒತ್ತಾಯಿಸಿ ಅಧಿಕಾರಿಗೆ ದೂರು

• ಉದಯವಾಹಿನಿ ಬೀದರ

ಬೀದರ ಜಿಲ್ಲೆಯ ವಿವಿಧ ಉದ್ಯೋಗ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಾವಿರಾರು ಕಾರ್ಮಿಕರಿಗೆ ಕಾರ್ಮಿಕ ದಿನಾಚರಣೆಯಂದು ಕಡ್ಡಾಯ ರಜೆ ಘೋಷಿಸುವಂತೆ ಆಗ್ರಹಿಸಿ ಜಿಲ್ಲಾ ಕಾರ್ಮಿಕ ಅಧಿಕಾರಿಗೆ ಕರ್ನಾಟಕ ರಾಜ್ಯ ಕಾರ್ಮಿಕ ಪಡೆ ವತಿಯಿಂದ ದೂರು ಸಲ್ಲಿಸಲಾಗಿದೆ.

ಜಿಲ್ಲೆಯ ವಿವಿಧ ಕೈಗಾರಿಕೆಗಳು, ಸಂಸ್ಥೆಗಳು , ಉದ್ಯೋಗ ಕ್ಷೇತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರಿಗೆ ಸಾಮಾನ್ಯ ರಜೆಗಳಲ್ಲಿಯೂ ರಜೆ ನೀಡದೆ ದುಡಿಸಿಕೊಳ್ಳಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಜೊತೆಗೆ ಸರ್ಕಾರ ನಿಗದಿಪಡಿಸಿದ ದಿನ ಕೂಲಿ ಪಾವತಿಸದೆ, ತಮ್ಮ ಇಚ್ಛೆಯಂತೆ ಕಡಿಮೆ ಕೂಲಿ ನೀಡುವ ಮೂಲಕ ಕಾರ್ಮಿಕರ ಮೇಲೆ ಅನ್ಯಾಯ ನಡೆಯುತ್ತಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪ್ರತಿ ವರ್ಷ ಮೇ 1ರಂದು ಕಾರ್ಮಿಕ ದಿನಾಚರಣೆ ಆಚರಿಸಲಾಗುತ್ತಿದ್ದರೂ, ಆ ದಿನವೇ ಕಾರ್ಮಿಕರಿಗೆ ರಜೆ ನೀಡದಿರುವುದು ವಿಷಾದನೀಯವಾಗಿದ್ದು, ಇದು ಕಾರ್ಮಿಕರ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಸಂಘದ ಮುಖಂಡರು ತಿಳಿಸಿದ್ದಾರೆ.

## ಕಟ್ಟಡ ಕಾರ್ಮಿಕರಿಗೆ ವಿಶ್ರಾಂತಿ ನೀಡಲು ಸೂಚನೆ

• ಉದಯವಾಹಿನಿ ಮಂಗಳೂರು

ಕಾರ್ಮಿಕ ಇಲಾಖೆ, ದಕ್ಷಿಣ ಕನ್ನಡ ಮಂಗಳೂರು ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನ ಅತೀ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಕಟ್ಟಡ ಕಾರ್ಮಿಕರಿಗೆ ಮಧ್ಯಾಹ್ನದ ಬಿಸಿಲಿನ ಸಮಯದಲ್ಲಿ ವಿಶ್ರಾಂತಿ ನೀಡುವುದು ಗುತ್ತಿಗೆದಾರರು/ಮಾಲೀಕರ ಜವಾಬ್ದಾರಿಯಾಗಿದೆ

ಕಟ್ಟಡ ಕಾಮಗಾರಿ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಂಭವ ಇರುವುದರಿಂದ, ಕಾರ್ಮಿಕರ ಆರೋಗ್ಯದ ಹಿತದೃಷ್ಟಿ ಹಿನ್ನಲೆಯಲ್ಲಿ ಮಧ್ಯಾಹ್ನದ ವೇಳೆ ವಿಶ್ರಾಂತಿಗೆ ಅವಕಾಶ ನೀಡುವಂತೆ ಸೂಚಿಸಿದ್ದಾರೆ. ಕಾರ್ಮಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಮಾಡುವುದು ಹಾಗೂ ಕಾಲಕಾಲಕ್ಕೆ ಆರೋಗ್ಯ ತಪಾಸಣೆಯನ್ನು ಮಾಡಿಸುವುದು ಗುತ್ತಿಗೆದಾರರು/ಮಾಲೀಕರ ಜವಾಬ್ದಾರಿಯಾಗಿದ್ದು ಈ ಬಗ್ಗೆ ಸೂಕ್ತ ಕ್ರಮವಹಿಸಲು ಸೂಚಿಸಿದೆ.

ಈ ಕುರಿತು ಯಾವುದೇ ಅಹಿತಕರ ಘಟನೆಗಳು ನಡೆದಲ್ಲಿ ಸಂಬಂಧಿಸಿದ ಗುತ್ತಿಗೆದಾರರು/ಮಾಲೀಕರುಗಳೇ ನೇರ ಹೊಣೆಗಾರರಾಗಿರುತ್ತಾರೆಂದು ಎಂದು ದಕ್ಷಿಣ ಕನ್ನಡ ಜಿಲ್ಲಾ ಸಹಾಯಕ ಕಾರ್ಮಿಕ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಿಲಿಂಡರ್ ಸಿಗದೆ ಗ್ರಾಹಕರ ಆಕ್ರೋಶ

• ಉದಯವಾಹಿನಿ ಮುಂಡಗೋಡ

ಅಡುಗೆ ಅನಿಲ ಸಿಲಿಂಡರ್ ಪಡೆಯಲು ಮಧ್ಯರಾತ್ರಿಯಿಂದಲೇ ಪಾಳಿ ಹಚ್ಚಿದ ಗ್ರಾಹಕರು, ಸಿಲಿಂಡರ್ ವಿತರಣೆ ಮಾಡುವಂತೆ ಒತ್ತಾಯಿಸಿ, ಇಲ್ಲಿಯ ಕಲಘಟಗಿ ರಸ್ತೆಯ ಎಚ್.ಪಿ ಗ್ಯಾಸ್ ಗೋದಾಮಿನ ಎದುರು ಬುಧವಾರ ಪ್ರತಿಭಟಿಸಿದರು. ಗೋದಾಮಿನ ಎದುರು ಖಾಲಿ ಸಿಲಿಂಡರ್‌ಗಳನ್ನು ಇಟ್ಟು, ತುಂಬಿದ ಸಿಲಿಂಡರ್‌ಗಾಗಿ ಕಾಯುತ್ತ ಕುಳಿತಿದ್ದರು. ಆದರೆ, ಒಟಿಪಿ ಬಂದರೂ ಸಿಲಿಂಡರ್ ದಾಸ್ತಾನು ಇಲ್ಲ ಎಂಬ ಮಾತು ಕೇಳಿ ಬರುತ್ತಿದ್ದಂತೆ, ಗ್ರಾಹಕರು ರಸ್ತೆ ಮೇಲೆ ಕುಳಿತು ಪ್ರತಿಭಟಿಸಿದರು. ಹಗಲು ರಾತ್ರಿ ಎನ್ನದೇ ಖಾಲಿ ಸಿಲಿಂಡರ್ ತೆಗೆದುಕೊಂಡು ದೂರದ ಹಳ್ಳಿಯಿಂದ ಗೋದಾಮಿನ ಎದುರು ನಿದ್ದೆಗೆಟ್ಟು ಕಾಯುತ್ತಿದ್ದೇವೆ. ಒಟಿಪಿ ಬಂದು ವಾರ ಕಳೆದರೂ, ಸಿಲಿಂಡರ್ ನೀಡುತ್ತಿಲ್ಲ' ಎಂದು ಪ್ರತಿಭಟನೆ ನಿರತರು ದೂರಿದರು. ಓಣಿ, ವಾರ್ಡ್‌ಗಳಿಗೆ ಬಂದು ಸಿಲಿಂಡರ್ ವಿತರಣೆ ಮಾಡುತ್ತೇವೆ ಎನ್ನುತ್ತಾರೆ. ಆದರೆ ಒಂದು ವಾರದಿಂದ ಕಾದರೂ, ಮನೆಗಳಿಗೆ ಬಂದು ಸಿಲಿಂಡರ್ ವಿತರಣೆ ಮಾಡಿಲ್ಲ. ಹೀಗಾಗಿ ಗೋದಾಮಿಗೆ ಬಂದಿದ್ದೇವೆ. ಇಲ್ಲಿಯೂ ಸಿಲಿಂಡರ್ ನೀಡುತ್ತಿಲ್ಲ ಎಂದು ನೂರಾರು ಸಂಖ್ಯೆಯಲ್ಲಿ ಜಮಾವಣೆಗೊಂಡಿದ್ದ ಗ್ರಾಹಕರು ಆಕ್ರೋಶದಿಂದ ಹೇಳಿದರು.


ಉದಯವಾಹಿನಿ ಚಿತ್ರ

# ಕರ್ನಾಟಕ-ಕೇರಳ ಸಂಪರ್ಕ ಸೇತುವೆಗೆ 20 ಕೋಟಿ ಮಂಜೂರು

### ಎರಡು ರಾಜ್ಯಗಳನ್ನು ಸಂಪರ್ಕಿಸುವ ಸಿರಿಯ ನದಿಗೆ ಮಾಣಿಲ ಎಂಬಲ್ಲಿ ನೂತನ ಸೇತುವೆಯ ಕನಸು ಇದೀಗ ನನಸು

• ಉದಯವಾಹಿನಿ ಪುತ್ತೂರು

ಎರಡು ರಾಜ್ಯಗಳನ್ನು ಸಂಪರ್ಕಿಸುವ ಸಿರಿಯ ನದಿಗೆ ಮಾಣಿಲ ಎಂಬಲ್ಲಿ ನೂತನ ಸೇತುವೆಯ ಕನಸು ಇದೀಗ ನನಸಾಗಿದೆ. ಸಿರಿಯ ನದಿಯ ಈ ಸಂಪರ್ಕ ಸೇತುವೆಗೆ ರಾಜ್ಯ ಸರ್ಕಾರ ರೂ.20 ಕೋಟಿ ಅನುದಾನ ಮಂಜೂರು ಮಾಡಿದೆ. ಮಾಣಿಲ ಗ್ರಾಮದ ಕಾಮಜಾಲು-ಪೂವನಡ್ಕ ಎಂಬಲ್ಲಿ ಸಿರಿಯ ನದಿಗೆ ಸೇತುವೆ ನಿರ್ಮಾಣ ಮಾಡಬೇಕು ಎನ್ನುವುದು ಈ ಭಾಗದ ಜನತೆಯ 30ವರ್ಷಗಳ ಕನಸಾಗಿತ್ತು. ಕಳೆದ ಚುನಾವಣೆಯ ಸಂದರ್ಭ ಶಾಸಕ ಅಶೋಕ್ ರೈ ಸೇತುವೆ ನಿರ್ಮಿಸುವ ಭರವಸೆ ನೀಡಿದ್ದರು. ಅನುದಾನ ಮಂಜೂರುಗೊಳ್ಳುವುದರೊಂದಿಗೆ ಶಾಸಕರು ಕೊಟ್ಟ ಮಾತನ್ನು ಉಳಿಸಿಕೊಂಡಂತಾಗಿದೆ.


ಉದಯವಾಹಿನಿ ಚಿತ್ರ

**ಸಿರಿಯ ನದಿಗೆ ಸೇತುವೆ ನಿರ್ಮಾಣ**

ನೂತನ ಸೇತುವೆ ನಿರ್ಮಾಣದಿಂದ ಕರ್ನಾಟಕಕ್ಕೆ ಸೇರಿದ ಮಾಣಿಲ, ವಿಟ್ಲ ಭಾಗದ ಜನರು ನದಿಯ ಆಚೆ ದಡದಲ್ಲಿರುವ ಗ್ರಾಮಕ್ಕೆ ಭೇಟಿಯಾಗಬೇಕಾದಲ್ಲಿ 28 ಕಿ ಮೀ ಸಂಚರಿಸಬೇಕಿತ್ತು. ಮಾಣಿಲದಿಂದ ಕಾಸರಗೋಡು ಜಿಲ್ಲೆಯ ಪೆರ್ಲಕ್ಕೆ ಅತೀ ಹತ್ತಿರವಿದೆ ಆದರೆ ದಾರಿ ಮಾತ್ರ ದೂರವಾಗಿತ್ತು. ಇಲ್ಲಿನ ನದಿಗೆ ಸೇತುವೆ ನಿರ್ಮಾಣ ಮಾಡಿ ಎಂದು ಎರಡೂ ರಾಜ್ಯದ ಜನತೆ ಯಾರಿಗೆಲ್ಲಾ ಮನವಿ ಕೊಡಬೇಕೋ ಅವರನ್ನೆಲ್ಲಾ ಹುಡುಕಿ ಮನವಿಯನ್ನು ನೀಡಿ ಸೇತುವೆಯ ನಿರ್ಮಾಣಕ್ಕೆ ಸಹಕರಿಸಿ ಎಂದು ಕಳೆದ 30 ವರ್ಷಗಳಿಂದ ಮನವಿ ಮಾಡುತ್ತಲೇ ಇದ್ದಾರೆ. ಆದರೆ ಸೇತುವೆ ನಿರ್ಮಾಣಕ್ಕೆ ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆ ಕಂಡುಬಂದಿತ್ತು.

**ಮತ್ತೆ ಆರು ಕೋಟಿಯ ಪ್ರಸ್ತಾವನೆ**

ಮಾಣಿಲದಲ್ಲಿ ಸಿರಿಯ ನದಿಗೆ ಸೇತುವೆ ನಿರ್ಮಾಣಕ್ಕೆ ರಾಜ್ಯ ಸರಕಾರ 20 ಕೋಟಿ ಅನುದಾನ ಮಂಜೂರು ಮಾಡಿದೆ, ಗ್ರಾಮಸ್ಥರಿಗೆ ಸೇತುವೆ ನಿರ್ಮಾಣದ ಮಾತುಕೊಟ್ಟಿದ್ದೆ ಅದನ್ನು ಈಡೇರಿಸಿದ ತೃಪ್ತಿ ನನಗಿದೆ. ಸೇತುವೆಯ ಸಂಪರ್ಕ ಮಾಡುವ ಎರಡೂ ಭಾಗದಲ್ಲಿ ಉತ್ತಮ ರಸ್ತೆಯ ನಿರ್ಮಾಣವಾಗಬೇಕಿದೆ ಇದಕ್ಕೆ ಹೆಚ್ಚುವರಿ 6 ಕೋಟಿ ಅನುದಾನದ ಪ್ರಸ್ತಾವನೆಯನ್ನು ಸಲ್ಲಿಸಿದ್ದೇನೆ ಇದು ಶೀಘ್ರವೇ ಮಂಜೂರಾತಿಯ ನಿರೀಕ್ಷೆ ಇದೆ. ಎಂದು ಶಾಸಕ ಅಶೋಕ್ ರೈ ತಿಳಿಸಿದ್ದಾರೆ.

**ಗೆದ್ದರೆ ಖಂಡಿತಾ ಬೇಡಿಕೆ ಈಡೇರಿಸುವೆ ಎಂದಿದ್ದ ಅಶೋಕ್ ರೈ**

ಕಳೆದ ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಮಾಣಿಲ ಗ್ರಾಮಕ್ಕೆ ಚುನಾವಣಾ ಪ್ರಚಾರಕ್ಕೆ ತೆರಳಿದ್ದ ಅಶೋಕ್ ರೈ ಅವರಲ್ಲಿ ಈ ಗ್ರಾಮಸ್ಥರು ಸೇತುವೆಯ ಬೇಡಿಕೆ ಇಟ್ಟಿದ್ದರು. ನನ್ನನ್ನು ಗೆಲ್ಲಿಸಿ ನಾನು ಗೆದ್ದರೆ ಖಂಡಿತವಾಗಿಯೂ ನಿಮ್ಮ ಬೇಡಿಕೆಯನ್ನು ಈಡೇರಿಸುವೆ ಎಂದು ಚುನಾವಣಾ ಸಂದರ್ಭದಲ್ಲಿ ಮಾತುಕೊಟ್ಟಿದ್ದರು. ಸಾಕಷ್ಟು ಬಾರಿ ಶಾಸಕರಿಗೆ ಸಚಿವರಿಗೆ ಮನವಿ ನೀಡಿ ನಂಬಿಕೆ ಕಳೆದುಕೊಂಡಿದ್ದ ಮಾಣಿಲ ಗ್ರಾಮಸ್ಥರ ಭರವಸೆ ಪಟ್ಟಿಗೆ ಅಶೋಕ್ ರೈ ಭರವಸೆಯೂ ಸೇರಿತ್ತು. ಆದರೆ ಅಶೋಕ್ ರೈ ಅವರು ಚುನಾವಣೆಯಲ್ಲಿ ಗೆದ್ದ ಕೆಲವೇ ತಿಂಗಳಲ್ಲಿ ಸಿರಿಯ ನದಿಗೆ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಹಾಗೂ ಇದರ ಸಾಧಕ ಬಾಧಕಗಳ ಬಗ್ಗೆ ಸರ್ವೆಯನ್ನು ಮಾಡಿಸಿದ್ದರು. ಸೇತುವೆ ನಿರ್ಮಾಣ ಖಂಡಿತಾ ಮಾಡುತ್ತೇನೆ ಎಂದು ಶಾಸಕರಾದ ಬಳಿಕ ಮತ್ತೆ ಭರವಸೆ ನೀಡಿದ್ದರು. ಇದೀಗ ಸರಕಾರದ ಮೇಲೆ ಒತ್ತಡ ಹಾಕಿ 20 ಕೋಟಿ ಮಂಜೂರು ಮಾಡಿಸಿದ್ದಾರೆ. ಈ ನೂತನ ಸೇತುವೆ ನಿರ್ಮಾಣದ ಸ್ಥಳಕ್ಕೆ ಲೋಕೋಪಯೋಗಿ ಇಲಾಖೆಯ ಸಚಿವ ಸತೀಶ್ ಜಾರಕಿಹೊಳಿ ಅವರನ್ನು ಕರೆದುಕೊಂಡು ಬಂದು ಪರಿಶೀಲನೆ ನಡೆಸಿದ್ದರು.

**80 ಮೀ ಉದ್ದ 10 ಮೀ ಅಗಲ:** ಸಿರಿಯ ನದಿಗೆ ಸುಮಾರು 80 ಮೀಟರ್ ಉದ್ದದ ಸೇತುವೆ ನಿರ್ಮಾಣವಾಗಲಿದ್ದು ಇದು 10 ಮೀಟರ್ ಅಗಲವನ್ನು ಹೊಂದಿರುತ್ತದೆ.

ಉದಯ ವಾಹಿನಿ
ದೇಶ/ವಿದೇಶ
ಶುಕ್ರವಾರ 01 ಮೇ 2026 07

## ಹೈಟೆಕ್ ಕಳ್ಳರು ಅರೆಸ್ಟ್

**ಅಹಮದಾಬಾದ್:** ಒಟಿಪಿ ಪಡೆದು ಜನರ ಖಾತೆಯಿಂದ ದುಡ್ಡು ಎಗರಿಸುತ್ತಿದ್ದ ವಂಚಕರು ಈಗ ಇನ್ನು ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ. ವಂಚಕರು ಈಗ ಸಂತ್ರಸ್ತರಿಗೆ ಒಟಿಪಿ ಬಾರದಂತೆ ತಡೆದು, ಅವರ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು ಸಾಲ ಪಡೆದ ಶಾಕಿಂಗ್ ಪ್ರಕರಣ ಬೆಳಕಿಗೆ ಬಂದಿದೆ. ದೇಶದ ಪ್ರತಿಯೊಬ್ಬ ನಾಗರೀಕನ ಅತ್ಯಂತ ಸುದೃಢ ಗುರುತಿನ ಚೀಟಿ ಎಂದೇ ಪರಿಗಣಿಸಲ್ಪಟ್ಟಿರುವ ಆಧಾರ್ ವ್ಯವಸ್ಥೆಯ ಭದ್ರತೆಯನ್ನೇ ವಂಚಕರು ಕೃತಕ ಬುದ್ಧಿಮತ್ತೆ ಮತ್ತು ಡೀಪ್‌ಫೇಕ್ ತಂತ್ರಜ್ಞಾನ ಬಳಸಿ ಭೇದಿಸಿದ್ದಾರೆ. ಅಷ್ಟೇ ಅಲ್ಲದೇ ವಂಚಕರು ಅತ್ಯಾಧುನಿಕ ತಂತ್ರಜ್ಞಾನವನ್ನು ದುರ್ಬಳಕೆ ಮಾಡಿಕೊಂಡು ಸಂತ್ರಸ್ತರಿಗೆ ಒಟಿಪಿ ಬಾರದಂತೆ ತಡೆದು ಅವರ ಹೆಸರಿನಲ್ಲಿ ಲಕ್ಷಾಂತರ ರೂಪಾಯಿ ಸಾಲ ಪಡೆದು ವಂಚಿಸಿದ್ದಾರೆ.

ಅಹಮದಾಬಾದ್ ಸೈಬರ್ ಕ್ರೈಂ ಪೊಲೀಸರು ಈ ಹೈಟೆಕ್ ವಂಚಕ ಜಾಲವನ್ನು ಯಶಸ್ವಿಯಾಗಿ ಭೇದಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನು ಪರ್ಮಾರ್, ಆಶಿಶ್ ವಾಲಂಡ್, ಮೊಹಮ್ಮದ್ ಕೈಫ್ ಪಟೇಲ್ ಮತ್ತು ದೀಪ್ ಗುಪ್ತಾ ಎಂಬ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ. ಇವರು ಆಧಾರ್ ಕಾಮನ್ ಸರ್ವಿಸ್ ಸೆಂಟರ್ ಕಿಟ್‌ಗಳನ್ನು ದುರ್ಬಳಕೆ ಮಾಡಿಕೊಂಡು ಈ ಕೃತ್ಯ ಎಸಗಿರುವುದು ತನಿಖೆಯಲ್ಲಿ ದೃಢಪಟ್ಟಿದೆ.

**ದಾಖಲೆ ಸೃಷ್ಟಿ ಹೇಗೆ?:** ಈ ಖತರ್ನಾಕ್ ಗ್ಯಾಂಗ್ ಕೇವಲ ತಂತ್ರಜ್ಞಾನವನ್ನಷ್ಟೇ ಅಲ್ಲದೆ ವ್ಯವಸ್ಥೆಯ ಲೋಪದೋಷಗಳನ್ನೂ ಅತ್ಯಂತ ಚಾಣಾಕ್ಷತನದಿಂದ ಬಳಸಿಕೊಂಡಿದೆ. ಆರೋಪಿಗಳು ಮೊದಲು ಅಕ್ರಮ ಮೂಲಗಳಿಂದ ಸಂತ್ರಸ್ತ ವ್ಯಕ್ತಿಯ ಆಧಾರ್ ವಿವರಗಳು ಮತ್ತು ಕೇವಲ ಒಂದು ಸ್ಥಿರ ಫೋಟೋವನ್ನು ಪಡೆದುಕೊಳ್ಳುತ್ತಿದ್ದರು.


ಗೂಗಲ್‌ನ ಜೆಮಿನಿ ಎಐ ಟೂಲ್ ಬಳಸಿ ಆ ಸ್ಥಿರ ಫೋಟೋವನ್ನು ಜೀವಂತ ಮನುಷ್ಯನಂತೆ ಕಣ್ಣು ಮಿಟುಕಿಸುವ ಮತ್ತು ಮುಖದ ಚಲನೆಯಿರುವ ಡೀಪ್‌ಫೇಕ್ ವಿಡಿಯೋ ಆಗಿ ಪರಿವರ್ತಿಸುತ್ತಿದ್ದರು.

ಆಧಾರ್ ನವೀಕರಣ ಕೇಂದ್ರಗಳಲ್ಲಿ ಇರುವ ಮುಖ ಗುರುತಿಸುವಿಕೆ ವ್ಯವಸ್ಥೆಗೆ ವ್ಯಕ್ತಿ ನೇರವಾಗಿ ಹಾಜರಾಗುವ ಅಗತ್ಯವಿರುತ್ತದೆ. ಆದರೆ ಇಲ್ಲಿ ಆರೋಪಿಗಳು ಕ್ಯಾಮೆರಾ ಮುಂದೆ ತಾವೇ ತಯಾರಿಸಿದ ಡೀಪ್‌ಫೇಕ್ ವಿಡಿಯೋವನ್ನು ಪ್ರದರ್ಶಿಸಿ 'ಜೀವಂತ ವ್ಯಕ್ತಿ' ಹಾಜರಿದ್ದಾನೆ ಎಂದು ವ್ಯವಸ್ಥೆಯನ್ನು ನಂಬಿಸಿ ಭದ್ರತೆಯನ್ನು ಬೇಧಿಸುತ್ತಿದ್ದರು.

ಕಾರ್ಯಾಚರಣೆ ಆರಂಭವಾದ 60 ದಿನಗಳ ಒಳಗಾಗಿ ಕಾಂಗ್ರೆಸ್‌ನಿಂದ ಅಧಿಕೃತ ಅನುಮೋದನೆ ಪಡೆಯಬೇಕು

# 60 ದಿನಗಳ ಡೆಡ್‌ಲೈನ್ ಅಂತ್ಯ: ಸಂಕಷ್ಟದಲ್ಲಿ ಟ್ರಂಪ್





**ವಾಷಿಂಗ್ಟನ್:** ಅಮೆರಿಕ ಮತ್ತು ಇರಾನ್ ನಡುವಿನ ಮಿಲಿಟರಿ ಸಂಘರ್ಷ ಈಗ ನಿರ್ಣಾಯಕ ಘಟ್ಟಕ್ಕೆ ಬಂದು ತಲುಪಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಕಾಂಗ್ರೆಸ್(ಅಮೆರಿಕದ ಸಂಸತ್) ಅನುಮತಿಯಿಲ್ಲದೆ ಆರಂಭಿಸಿದ ಈ ಕಾರ್ಯಾಚರಣೆಗೆ 'ವಾರ್ ಪವರ್ಸ್ ಆಕ್ಟ್' ಅಡಿಯಲ್ಲಿ ನೀಡಲಾದ 60 ದಿನಗಳ ಗಡುವು ನಾಳೆಗೆ (ಮೇ 1) ಅಂತ್ಯಗೊಳ್ಳಲಿದೆ.

**ಏನಿದು 60 ದಿನಗಳ ಕಾನೂನು ಗಡುವು?:** ಅಮೆರಿಕದ 1973ರ 'ವಾರ್ ಪವರ್ಸ್ ಆಕ್ಟ್' ಪ್ರಕಾರ ಅಧ್ಯಕ್ಷರು ತುರ್ತು ಸಂದರ್ಭದಲ್ಲಿ ಕಾಂಗ್ರೆಸ್‌ನ ಪೂರ್ವಾನುಮತಿಯಿಲ್ಲದೆ ಮಿಲಿಟರಿ ಕಾರ್ಯಾಚರಣೆ ಕೈಗೊಳ್ಳಬಹುದು. ಆದರೆ ಅಂತಹ ಕಾರ್ಯಾಚರಣೆಯ ಬಗ್ಗೆ 48 ಗಂಟೆಗಳ ಒಳಗಾಗಿ ಕಾಂಗ್ರೆಸ್‌ಗೆ ವರದಿ ಸಲ್ಲಿಸಬೇಕು. ಕಾರ್ಯಾಚರಣೆ ಆರಂಭವಾದ 60 ದಿನಗಳ ಒಳಗಾಗಿ ಕಾಂಗ್ರೆಸ್‌ನಿಂದ ಅಧಿಕೃತ ಅನುಮೋದನೆ ಪಡೆಯಬೇಕು. ಒಂದು ವೇಳೆ ಕಾಂಗ್ರೆಸ್ ಅನುಮೋದನೆ ನೀಡದಿದ್ದರೆ, ಅಧ್ಯಕ್ಷರು ತಮ್ಮ ಪಡೆಗಳನ್ನು ಹಿಂತೆಗೆದುಕೊಳ್ಳಬೇಕಾಗುತ್ತದೆ.

**ಇಂದಿನ ಸ್ಥಿತಿ ಏನು?:** ಇಸ್ರೇಲ್ ಮತ್ತು ಅಮೆರಿಕ ಜಂಟಿಯಾಗಿ ಇರಾನ್ ಮೇಲೆ ಫೆಬ್ರವರಿ 28 ರಂದು ಜಂಟಿಯಾಗಿ ದಾಳಿ ನಡೆಸಿತ್ತು. ಇರಾನ್‌ನ ಪರಮಾಣು ಸ್ಥಾವರಗಳು, ಮಿಲಿಟರಿ ನೆಲೆಗಳು ಮತ್ತು ಪ್ರಮುಖ ನಾಯಕರನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆದಿತ್ತು. ದಾಳಿ ನಡೆದ 48 ಗಂಟೆಯ ಒಳಗಡೆ ಅಂದರೆ ಮಾರ್ಚ್ 2 ರಂದು ಇರಾನ್ ವಿರುದ್ಧದ ಮಿಲಿಟರಿ ಕ್ರಮದ ಬಗ್ಗೆ ಕಾಂಗ್ರೆಸ್‌ಗೆ ಟ್ರಂಪ್ ಆಡಳಿತ ಅಧಿಕೃತ ಪತ್ರ ಬರೆದಿತ್ತು.

**ಸಂಕಷ್ಟದಲ್ಲಿ ಟ್ರಂಪ್**

ಇತ್ತೀಚಿನ ಸಮೀಕ್ಷೆಗಳ ಪ್ರಕಾರ ಶೇ.60ಕ್ಕಿಂತ ಹೆಚ್ಚು ಅಮೆರಿಕನ್ನರು ಇರಾನ್ ವಿರುದ್ಧದ ಯುದ್ಧವನ್ನು ವಿರೋಧಿಸುತ್ತಿದ್ದಾರೆ. ಕೆಲವು ರಿಪಬ್ಲಿಕನ್ ಸಂಸದರು (ಉದಾಹರಣೆಗೆ ಸೆನೆಟರ್ ಜಾನ್ ಕರ್ಟಿಸ್) ಮೇ 1ರ ನಂತರ ಕಾಂಗ್ರೆಸ್ ಅನುಮತಿಯಿಲ್ಲದೆ ಯುದ್ಧ ಮುಂದುವರಿಸುವುದಕ್ಕೆ ಬೆಂಬಲ ನೀಡುವುದಿಲ್ಲ ಎಂದು ಈಗಾಗಲೇ ಎಚ್ಚರಿಸಿದ್ದಾರೆ.

**ಮುಂದಿರುವ ಆಯ್ಕೆಗಳೇನು?**

- ಟ್ರಂಪ್ ಅವರು ಮಿಲಿಟರಿ ಕ್ರಮ ಮುಂದುವರಿಸಲು ಕಾಂಗ್ರೆಸ್‌ನಿಂದ 'ಯುದ್ಧ ಘೋಷಣೆ' ಅಥವಾ ಅಧಿಕೃತ ಸಮ್ಮತಿ ಪಡೆಯಬೇಕು.
- ಸೈನ್ಯವನ್ನು ಸುರಕ್ಷಿತವಾಗಿ ಹಿಂತೆಗೆದುಕೊಳ್ಳಲು ಅನಿವಾರ್ಯ ಕಾರಣಗಳಿದ್ದರೆ ಮಾತ್ರ ಅಧ್ಯಕ್ಷರು ಹೆಚ್ಚುವರಿ 30 ದಿನಗಳ ಕಾಲಾವಕಾಶ ಕೋರಬಹುದು.
- ಕಾಂಗ್ರೆಸ್ ಅನುಮೋದನೆ ನೀಡದಿದ್ದರೆ, ಕಾನೂನಿನ ಪ್ರಕಾರ ಅಮೆರಿಕ ತನ್ನ ಪಡೆಗಳನ್ನು ಇರಾನ್ ಸಂಘರ್ಷದಿಂದ ಹಿಂದಕ್ಕೆ ಕರೆಸಿಕೊಳ್ಳಬೇಕಾಗುತ್ತದೆ.

ಆ ಪತ್ರದ ಪ್ರಕಾರ 60 ದಿನಗಳ ಕಾಲಮಿತಿ ನಾಳೆಯೇ ಪೂರ್ಣಗೊಳ್ಳುತ್ತಿದೆ. ಪ್ರಸ್ತುತ ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಕದನ ವಿರಾಮ ಜಾರಿಯಲ್ಲಿದ್ದರೂ ನೌಕಾ ದಿಗ್ಬಂಧನ , ಸನ್ನದ್ಧ ಸ್ಥಿತಿಯಲ್ಲಿರುವ ಸೈನ್ಯದ ಕಾರಣದಿಂದಾಗಿ ಈ ಕಾನೂನು ಗಡುವು ಇನ್ನೂ ಅನ್ವಯಿಸುತ್ತದೆ. ಯುದ್ಧದಿಂದಾಗಿ ಏರಿಕೆಯಾಗಿರುವ ತೈಲ ಬೆಲೆಗಳು ಟ್ರಂಪ್ ಆಡಳಿತದ ಮೇಲೆ ಆರ್ಥಿಕ ಒತ್ತಡ ಹೇರುತ್ತಿವೆ.

**ರಾಜಕೀಯ ಸಂಘರ್ಷ:**

ಟ್ರಂಪ್ ಈ ಗಡುವನ್ನು ನಿರ್ಲಕ್ಷಿಸುವ ಸಾಧ್ಯತೆಯಿದೆ ಎಂದು ವಿರೋಧ ಪಕ್ಷವಾದ ಡೆಮೋಕ್ರಾಟ್ ಸದಸ್ಯರು ಆತಂಕ ವ್ಯಕ್ತಪಡಿಸಿದ್ದಾರೆ. ಒಂದು ವೇಳೆ ಟ್ರಂಪ್ ಅವರು ಕಾಂಗ್ರೆಸ್ ನಿರ್ಣಯವನ್ನು ಮೀರಿದರೆ ಇದು ಅಮೆರಿಕದಲ್ಲಿ ದೊಡ್ಡ ಮಟ್ಟದ ಸಂವಿಧಾನಾತ್ಮಕ ಬಿಕ್ಕಟ್ಟಿಗೆ ದಾರಿ ಮಾಡಿಕೊಡಲಿದೆ. ಪ್ರಸ್ತುತ ಜಗತ್ತಿನ ಕಣ್ಣು ನಾಳೆಯ ಟ್ರಂಪ್ ಸರ್ಕಾರದ ನಿರ್ಧಾರದ ಮೇಲೆ ನೆಟ್ಟಿದೆ.

## ಭೀಕರ ಅಪಘಾತ: 14 ಮಂದಿ ಸಾವು



**ಇಂದೋರ್:** ಭೋಪಾಲ್‌ನಿಂದ ನೈಋತ್ಯಕ್ಕೆ 250 ಕಿ.ಮೀ ದೂರದಲ್ಲಿರುವ ಮಧ್ಯಪ್ರದೇಶದ ಧಾರ್ ಜಿಲ್ಲೆಯ ಇಂದೋರ್ ಅಹಮದಾಬಾದ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು 35 ಕಾರ್ಮಿಕರನ್ನು ಹೊತ್ತೊಯ್ಯುತ್ತಿದ್ದ ಪಿಕಪ್ ಟ್ರಕ್ ಹೆಚ್ಚಿನ ವೇಗದಲ್ಲಿ ಪಲ್ಟಿಯಾಗಿ ಎಸ್ ಯುವಿಗೆ ಡಿಕ್ಕಿ ಹೊಡೆದ ಪರಿಣಾಮ ಕನಿಷ್ಠ ಮೂವರು ಮಕ್ಕಳು ಸೇರಿದಂತೆ 14 ಮಂದಿ ಜನರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾತ್ರಿ 8.30 ರ ಸುಮಾರಿಗೆ ಇಂದೋರ್‌ನಿಂದ ಪಶ್ಚಿಮಕ್ಕೆ ಸುಮಾರು 40 ಕಿ.ಮೀ ದೂರದಲ್ಲಿರುವ ಟಿರ್ಲಾ ಪ್ರದೇಶದ ಚಿಖಾಲಿಯಾ ಘಾಟಾ ಬಳಿ ಈ ಅಪಘಾತ ಸಂಭವಿಸಿದೆ. ತುರ್ತು ತಂಡಗಳು ಬರುವ ಮೊದಲು ಸ್ಥಳೀಯರು ಸಹಾಯ ಮಾಡಲು ಧಾವಿಸುತ್ತಿದ್ದಂತೆ ಗಾಯಾಳುಗಳು ಸಹಾಯಕ್ಕಾಗಿ ಕೂಗಿದರು. ಧಾರ್ ಎಸ್ ಪಿ ಮಯಾಂಕ್ ಅವಸ್ಥಿ ಮಾತನಾಡಿ, ವಾಹನವು ಎದುರಿನ ಬದಿಗೆ ಜಾರಿ ಎಸ್ ಯುವಿಗೆ ಡಿಕ್ಕಿ ಹೊಡೆಯುವ ಮೊದಲು ಮೂರರಿಂದ ನಾಲ್ಕು ಬಾರಿ ಪಲ್ಟಿಯಾಗಿದೆ'' ಎಂದು ಹೇಳಿದ್ದಾರೆ. 12 ಸಾವುಗಳು ಸಂಭವಿಸಿರುವುದನ್ನು ವೈದ್ಯರು ದೃಢಪಡಿಸಿದ್ದು, ಇನ್ನೂ 12 ಮಂದಿ ಗಂಭೀರವಾಗಿದ್ದು, 10 ಮಂದಿಯನ್ನು ಚಿಕಿತ್ಸೆಗಾಗಿ ಇಂದೋರ್‌ಗೆ ಸ್ಥಳಾಂತರಿಸಲಾಗಿದೆ. ಗಾಯಗಳ ತೀವ್ರತೆಯಿಂದಾಗಿ ಸಾವಿನ ಸಂಖ್ಯೆ ಹೆಚ್ಚಾಗಬಹುದು ಎಂದು ಧಾರ್ ಜಿಲ್ಲಾ ಆಸ್ಪತ್ರೆಯ ಡಾ.ಛತ್ರಪಾಲ್ ಸಿಂಗ್ ತಿಳಿಸಿದ್ದಾರೆ. ದುಃಖತಪ್ತ ಕುಟುಂಬಗಳು ಆಸ್ಪತ್ರೆಗೆ ತುಂಬಿ ತುಳುಕುತ್ತಿದ್ದವು. ಅವರ ಸಹೋದರಿ ಸುನೀತಾ ಮತ್ತು ಸೋದರ ಸೊಸೆ ಮೃತಪಟ್ಟಿದ್ದಾರೆ ಎಂದು ದೀಪಕ್ ಮೇಡಾ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಸಾವಿನ ಬಗ್ಗೆ ಸಂತಾಪ ವ್ಯಕ್ತಪಡಿಸಿದ್ದು, ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥನೆ ಸಲ್ಲಿಸಿದ್ದಾರೆ. ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಮೃತರ ಕುಟುಂಬಗಳಿಗೆ ತಲಾ 2 ಲಕ್ಷ ರೂ.ಗಳ ಪರಿಹಾರ ಮತ್ತು ಗಾಯಗೊಂಡವರಿಗೆ 50,000 ರೂ.ಗಳ ಪರಿಹಾರವನ್ನು ಘೋಷಿಸಿದ್ದಾರೆ.

ಮಧ್ಯಪ್ರದೇಶ ಸಿಎಂ ಮೋಹನ್ ಯಾದವ್ ಸಂತಾಪ ಸೂಚಿಸಿದ್ದು, ಮೃತರ ಕುಟುಂಬಗಳಿಗೆ ತಲಾ 4 ಲಕ್ಷ ರೂ., ಗಂಭೀರವಾಗಿ ಗಾಯಗೊಂಡವರಿಗೆ 1 ಲಕ್ಷ ರೂ., ಇತರ ಗಾಯಗೊಂಡವರಿಗೆ 50,000 ರೂ.ಗಳ ಪರಿಹಾರವನ್ನು ಘೋಷಿಸಿದ್ದಾರೆ.

## ಬಂಗಾಳದಲ್ಲಿ 92.47ರಷ್ಟು ದಾಖಲೆ ಮತದಾನ

**ಕೊಲ್ಕತ್ತಾ:** ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯ ಎರಡನೇ ಮತ್ತು ಅಂತಿಮ ಹಂತದ ಮತದಾನದಲ್ಲಿ ದಾಖಲೆಯ 92.65% ಮತದಾನವಾಗಿದೆ.

ಅಶಾಂತಿ ಮತ್ತು ಹಿಂಸಾಚಾರದ ಪ್ರತ್ಯೇಕ ಘಟನೆಗಳ ನಡುವೆಯೂ ಇದು ದಾಖಲಾಗಿದೆ . ಇದರರ್ಥ ರಾಜ್ಯದಲ್ಲಿ ಎರಡು ಹಂತಗಳ ಮತದಾನದಲ್ಲಿ ಒಟ್ಟು ಮತದಾನವು ಸುಮಾರು 93% ರಷ್ಟಿದೆ,ಇದು ಸ್ವಾತಂತ್ರ್ಯದ ನಂತರ ಯಾವುದೇ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ನಡೆದ ಅತ್ಯಧಿಕ ಮತದಾನವಾಗಿದೆ ಎಂದು ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿ ತಿಳಿಸಿದ್ದಾರೆ.

ಎರಡನೇ ಹಂತದಲ್ಲಿ, ದಕ್ಷಿಣ ಬಂಗಾಳದ ಏಳು ಜಿಲ್ಲೆಗಳಲ್ಲಿ ಹರಡಿರುವ 142 ವಿಧಾನಸಭಾ ಸ್ಥಾನಗಳಿಗೆ ಮತದಾನ ನಡೆದಿದೆ. ಗ್ರಾಮೀಣ ಪ್ರಾಬಲ್ಯವಿರುವ ಪುರ್ಬಾ ಬರ್ಧಮಾನ್ (93.39%), ಹೂಗ್ಲಿ (91.41%), ದಕ್ಷಿಣ 24 ಪರಗಣಗಳು (91.45%), ಉತ್ತರ 24 ಪರಗಣಗಳು (91.39%), ಮತ್ತು ನಾಡಿಯಾ (91.35%) ಜಿಲ್ಲೆಗಳಲ್ಲಿ ಅತಿ ಹೆಚ್ಚು ಮತದಾನ ದಾಖಲಾಗಿದೆ. ಕೋಲ್ಕತ್ತಾ ದಕ್ಷಿಣ ಆಡಳಿತ ಜಿಲ್ಲೆಯಲ್ಲಿ ಅತಿ ಕಡಿಮೆ ಮತದಾನವಾಗಿದ್ದು, ಅಲ್ಲಿ ಶೇ. 87.25 ರಷ್ಟು ಮತದಾರರು ತಮ್ಮ ಮತ ಚಲಾಯಿಸಿದ್ದಾರೆ.



ಪಕ್ಕದ ಕೋಲ್ಕತ್ತಾ ಉತ್ತರ ಆಡಳಿತ ಜಿಲ್ಲೆಯಲ್ಲಿ ಶೇ. 88.91 ರಷ್ಟು ಮತದಾನವಾಗಿದ್ದರೆ, ಹೌರಾದಲ್ಲಿ ಶೇ. 90.93 ರಷ್ಟು ಮತದಾನವಾಗಿದೆ. ಚುನಾವಣಾ ಆಯೋಗವು ಪ್ರಕಟಣೆಯ ಸಮಯದಲ್ಲಿ ಅಂತಿಮ ಅಂಕಿಅಂಶಗಳನ್ನು ಇನ್ನೂ ಬಿಡುಗಡೆ ಮಾಡದ ಕಾರಣ ಮತದಾನದ ಪ್ರಮಾಣ ಹೆಚ್ಚಾಗುವ ನಿರೀಕ್ಷೆಯಿದೆ. ಏಪ್ರಿಲ್ 23 ರಂದು ನಡೆದ ಮೊದಲ ಹಂತದ 152 ಸ್ಥಾನಗಳಲ್ಲಿ ಶೇ. 93.19 ರಷ್ಟು ಮತದಾರರು ತಮ್ಮ ಮತ ಚಲಾಯಿಸಿದ ದಾಖಲೆಯ ಮತದಾನಕ್ಕೆ ಇದು ಹೊಂದಿಕೆಯಾಗಿದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು, ಸ್ವಾತಂತ್ರ್ಯದ ನಂತರ ಪಶ್ಚಿಮ ಬಂಗಾಳದಲ್ಲಿ ಮೊದಲ ಮತ್ತು ಎರಡನೇ ಹಂತಗಳಲ್ಲಿ ಇದುವರೆಗಿನ ಅತ್ಯಧಿಕ ಶೇಕಡಾವಾರು ಮತದಾನ ಎನ್ನುವ ಮಾಹಿತಿ ನೀಡಿದ್ದಾರೆ.

## ಅಮೆರಿಕ ಸೈನಿಕರ ವೈಯಕ್ತಿಕ ಮಾಹಿತಿ ಸೋರಿಕೆ

**ದುಬೈ:** ಸಾಂಪ್ರದಾಯಿಕ ಯುದ್ಧ ಮತ್ತು ರಾಜತಾಂತ್ರಿಕ ಕ್ರಮಗಳ ಜೊತೆಗೆ ಸೈಬರ್ ಅಥವಾ ಡಿಜಿಟಲ್ ದಾಳಿಗಳು ಈಗ ಪ್ರಮುಖ ಪಾತ್ರವಹಿಸುತ್ತಿದ್ದು ಇದನ್ನು ಅಮೆರಿಕ ಇರಾನ್ ನಡುವಿನ ಸಂಘರ್ಷದಲ್ಲಿ ಕಾಣಬಹುದು.

ವ್ಯಕ್ತಿಗತ ಮಾಹಿತಿ, ಮೂಲಸೌಕರ್ಯ ಮತ್ತು ಸಂವಹನ ವ್ಯವಸ್ಥೆಗಳ ಮೇಲೆ ದಾಳಿ ನಡೆಸುವುದು ಇಂದಿನ ದಿನಗಳಲ್ಲಿ ನಡೆಯುತ್ತಿರುವ ಯುದ್ಧಗಳ ಹೊಸ ಮುಖ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ. ಸೈನಿಕರ ವೈಯಕ್ತಿಕ ಮಾಹಿತಿಗಳನ್ನು ಗುರಿಯಾಗಿಸುವ ಮೂಲಕ ಅವರಲ್ಲಿ ಮಾನಸಿಕ ಭಯ ಹುಟ್ಟಿಸುವುದು ಮತ್ತು ಕಾರ್ಯಾಚರಣೆ ರಹಸ್ಯ ಅರಿಯುವುದು ಇಂತಹ ದಾಳಿಗಳ ಮುಖ್ಯ ಉದ್ದೇಶ ಎಂದು ತಜ್ಞರು ಹೇಳುತ್ತಾರೆ. ಇರಾನ್ ಮೂಲದ ಅಥವಾ ಇರಾನ್ ಪರ ಒಲವು ಹೊಂದಿರುವ ಹ್ಯಾಕರ್‌ಗಳ ಗುಂಪೊಂದು ಪರ್ಷಿಯನ್ ಕೊಲ್ಲಿಯಲ್ಲಿ ನಿಯೋಜನೆಗೊಂಡಿರುವ ಅಮೆರಿಕ ನೌಕಾಪಡೆ ಯೋಧರ ವೈಯಕ್ತಿಕ ಮಾಹಿತಿಯನ್ನು ಸೋರಿಕೆ ಮಾಡಿದೆ.



ಹಂಡಲಾ ಎಂಬ ಹ್ಯಾಕರ್‌ಗಳ ಗುಂಪು ಈ ಕೃತ್ಯದ ಹೊಣೆ ಹೊತ್ತುಕೊಂಡಿದ್ದು, ಈ ಘಟನೆ ಅಮೆರಿಕದ ರಕ್ಷಣಾ ವಲಯದಲ್ಲಿ ಆತಂಕ ಮೂಡಿಸಿದೆ. ಇರಾನ್ ಜೊತೆ ನಂಟು ಹೊಂದಿರುವುದಾಗಿ ಕೇಳಿಕೊಂಡಿರುವ ಹಂಡಲಾ ಗುಂಪು ತನ್ನ ಟೆಲಿಗ್ರಾಮ್ ಚಾನಲ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ಪರ್ಷಿಯನ್ ಕೊಲ್ಲಿಯಲ್ಲಿರುವ ಸುಮಾರು 2,379 ಅಮೆರಿಕ ಯೋಧರ ಹೆಸರು ಮತ್ತು ಇನ್ನಿತರ ವಿವರಗಳನ್ನು ಬಹಿರಂಗಪಡಿಸಿದೆ. ಕೇವಲ ಹೆಸರುಗಳು ಮಾತ್ರವಲ್ಲದೆ, ಸೈನಿಕರ ಮನೆ ವಿಳಾಸ, ಕುಟುಂಬದ ಮಾಹಿತಿ ಮತ್ತು ಅವರ ದೈನಂದಿನ ಚಟುವಟಿಕೆಗಳ ಸಂಪೂರ್ಣ ವಿವರ ನಮ್ಮ ಬಳಿ ಇದೆ ಎಂದು ಹಂಡಲಾ ಗುಂಪು ಪ್ರತಿಪಾದಿಸಿದೆ.

## ತಂಟೆಗೆ ಬಂದರೆ ಹುಷಾರ್: ಅಮೆರಿಕಕ್ಕೆ ಇರಾನ್ ಬೆದರಿಕೆ

**ಟೆಹರಾನ್ :** ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಹೊಸ ಅಸ್ತ್ರ ಬಳಸುವುದಾಗಿ ಇರಾನ್ ಬೆದರಿಕೆ ಹಾಕಿದೆ, ಇದರಿಂದ ಸದ್ಯ ಶಮನಗೊಂಡಿರುವ ಬಿಕ್ಕಟ್ಟು ಮತ್ತೆ ಉಲ್ಬಣಗೊಳ್ಳುವ ಲಕ್ಷಣಗಳು ಗೋಚರಿಸಿವೆ. ಇರಾನ್ ಬಳಸುವ ಹೊಸ ಅಸ್ತ್ರ ಇಸ್ಲಾಮಿಕ್ ಗಣರಾಜ್ಯದ ಶತ್ರುಗಳಿಗೆ ಹೃದಯಾಘಾತ ಉಂಟುಮಾಡಬಹುದು.

ನಮ್ಮ ತಂಟೆಗೆ ಬಂದರೆ ಹುಷಾರು ಎಂದು ಇರಾನ್ ಎಚ್ಚರಿಕೆ ನೀಡಿದೆ. ಇರಾನ್ ಕಳುಹಿಸಿದ್ದ ಮೂರು ಅಂಶಗಳ ಪ್ರಸ್ತಾವನೆಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿರಸ್ಕರಿಸಿದ್ದು, ಇಸ್ಲಾಮಿಕ್ ಗಣರಾಜ್ಯವು ಎಂದಿಗೂ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದಲು ಅನುಮತಿಸುವುದಿಲ್ಲ ಎಂದು ಬೆದರಿಕೆ ಹಾಕಿದೆ

ಇರಾನ್ ನೀಡಿದ ಮೂರು ಅಂಶಗಳ ಪ್ರಸ್ತಾಪವನ್ನು ಅಮೆರಿಕ ತಿರಸ್ಕರಿಸಿದ ನಂತರ ಮಧ್ಯಪ್ರಾಚ್ಯ ರಾಷ್ಟ್ರದ ತೈಲ ಪೈಪ್‌ಲೈನ್‌ಗಳು ಶೀಘ್ರದಲ್ಲೇ ''ಸ್ಫೋಟಗೊಳ್ಳಬಹುದು'' ಎಂದು ಹೇಳಿದ ಬೆನ್ನಲ್ಲೇ ಇರಾನ್ ಈ ಬೆದರಿಕೆ ಹಾಕಿದೆ

ಇರಾನ್ ನೌಕಾಪಡೆಯ ಕಮಾಂಡರ್ ರಿಯರ್



ಅಡ್ಮಿರಲ್ ಶಹರಾಮ್ ಇರಾನಿ ಪ್ರತಿಕ್ರಿಯಿಸಿ ಮಧ್ಯಪ್ರಾಚ್ಯ ರಾಷ್ಟ್ರ ತೀವ್ರವಾಗಿ ಹೆದರುವ ಹೊಸ ಆಯುಧದೊಂದಿಗೆ ಬಹಳ ಬೇಗ ಶತ್ರುಗಳನ್ನು ಎದುರಿಸಲಿದೆ ಎಂದು ಹೇಳಿದ್ದಾರೆ. ಡೊನಾಲ್ಡ್ ಟ್ರಂಪ್ ಮತ್ತು ಇರಾನ್ ಸೇನೆಯ ಸಂಪೂರ್ಣ ನಾಶ ಮಾಡುವುದಾಗಿ ನೀಡಿರುವ ಹೇಳಿಕೆ ಅಪಹಾಸ್ಯ ಎಂದು ಕರೆದ ಅವರು ಇರಾನ್ ಶತ್ರುಗಳು ಸಂಘರ್ಷದಲ್ಲಿ ಅಪೇಕ್ಷಿತ ಫಲಿತಾಂಶಗಳನ್ನು ಸಾಧಿಸುತ್ತೇವೆ ಎಂದು ಹೇಳಿದ್ದಾರೆ. ಇರಾನ್ ವಿರುದ್ಧದ ಇತ್ತೀಚಿನ ಅಪ್ರಚೋದಿತ ಆಕ್ರಮಣದ ಮೂಲಕ ತಮ್ಮ ಗುರಿ ಸಾಧಿಸಲು ಕಡಿಮೆ ಸಮಯದಲ್ಲಿ ಪ್ರಯತ್ನಿಸಿದ್ದ ರೀತಿಯಲ್ಲಿ .ಮಿಲಿಟರಿ ಅಕಾಡೆಮಿಗಳಲ್ಲಿ ತಮಾಷೆಯಾಗಿ ಮಾರ್ಪಟ್ಟಿದೆ ಎಂದು ಹೇಳಿದ್ದಾರೆ. ಮಧ್ಯಪ್ರಾಚ್ಯ ರಾಷ್ಟ್ರದ ಸೇನೆ ಸಂಪೂರ್ಣವಾಗಿ ನಾಶವಾಗಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪದೇ ಪದೇ ಹೇಳುತ್ತಿರುವಂತೆಯೇ ಇರಾನ್ ಕಮಾಂಡರ್ ಅವರ ಹೇಳಿಕೆಗಳು ಬಂದಿವೆ.

**ಇರಾನ್ ವಿರುದ್ಧ ದಿಗ್ಬಂಧನ; ಎಚ್ಚರಿಕೆ**

ಇದಕ್ಕೂ ಮುನ್ನ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಮೆರಿಕದ ಮಿಲಿಟರಿಯ ದಿಗ್ಬಂಧನದಿಂದಾಗಿ ಇರಾನ್‌ನ ಅನಿಲ ಪೈಪ್ ಲೈನ್‌ಗಳು ಮತ್ತು ತೈಲ ಮೂಲಸೌಕರ್ಯಗಳು ಶೀಘ್ರದಲ್ಲೇ ಸ್ಫೋಟಗೊಳ್ಳುತ್ತವೆ .ಇರಾನ್‌ನ ಪರಮಾಣು ಕಾರ್ಯಕ್ರಮದ ಬಗ್ಗೆ ಒಪ್ಪಂದ ಮಾಡಿಕೊಳ್ಳದ ಹೊರತು ದಿಗ್ಬಂಧನ ಮುಂದುವರಿಯುತ್ತದೆ ಎಂದು ಅವರು ಪುನರುಚ್ಚರಿಸಿದ್ದಾರೆ.

## ಜಮ್ಮು ಕಾಶ್ಮೀರವನ್ನು ಪಾಕಿಸ್ತಾನದ ಭಾಗವೆಂದು ನಕ್ಷೆಯಲ್ಲಿ ತೋರಿಸಿ ವಿವಾದಕ್ಕೀಡಾದ ನೇಪಾಳ

**ನವದೆಹಲಿ:** ಇತ್ತೀಚಿನ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಇಡೀ ಜಮ್ಮು ಮತ್ತು ಕಾಶ್ಮೀರವನ್ನು ತನ್ನ ನೆಟ್‌ವರ್ಕ್ ನಕ್ಷೆಯಲ್ಲಿ ಪಾಕಿಸ್ತಾನದ ಭಾಗವೆಂದು ತೋರಿಸಿದ ನಂತರ ನೇಪಾಳ ಏರ್‌ಲೈನ್ಸ್ ಟೀಕೆಗೆ ಗುರಿಯಾಗಿದೆ. ಏರ್‌ಲೈನ್ಸ್ ಸಾಮಾಜಿಕ ಮಾಧ್ಯಮ ಹ್ಯಾಂಡಲ್ ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನ ಸಂಪೂರ್ಣ ಕೇಂದ್ರಾಡಳಿತ ಪ್ರದೇಶಗಳನ್ನು ಪಾಕಿಸ್ತಾನದ ಪ್ರದೇಶದ ಭಾಗವಾಗಿ ತೋರಿಸಿರುವ ನಕ್ಷೆಯನ್ನು ಹಂಚಿಕೊಂಡ ನಂತರ ವಿವಾದ ಭುಗಿಲೆದ್ದಿತು. ಈ ಫೋಟೋ ಎಕ್ಸ್ ಮತ್ತು ಫೇಸ್‌ಬುಕ್‌ನಲ್ಲಿ ವೈರಲ್ ಆಗಲು ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ಇದು ಭಾರತೀಯ ಬಳಕೆದಾರರಿಂದ ಟೀಕೆಗೆ ಗುರಿಯಾಯಿತು. ಈ ವಿಷಯ ವೈರಲ್ ಆದ ಕೂಡಲೆ ಸೋಷಿಯಲ್ ಮೀಡಿಯಾದಲ್ಲಿ ಹ್ಯಾಶ್‌ಟ್ಯಾಗ್ ಟ್ರೆಂಡಿಂಗ್‌ಗೆ ಬರಲು ಪ್ರಾರಂಭಿಸಿತು. ಸೋಷಿಯಲ್ ಮೀಡಿಯಾ ಬಳಕೆದಾರರು ವಿದೇಶಾಂಗ ವ್ಯವಹಾರಗಳ ಸಚಿವಾಲಯ , ವಿಮಾನಯಾನ ಸಚಿವಾಲಯವನ್ನು ನೇಪಾಳದೊಂದಿಗೆ ರಾಜತಾಂತ್ರಿಕ ಪ್ರತಿಭಟನೆ ಸಲ್ಲಿಸುವಂತೆ ಒತ್ತಾಯಿಸಿದರು. ಭಾರತ ಹಲವು ದಶಕಗಳಿಂದ ಲಕ್ಷಾಂತರ ನೇಪಾಳಿಗಳಿಗೆ ಉದ್ಯೋಗ ನೀಡುವ ಮೂಲಕ, ವ್ಯಾಪಾರ ಪ್ರವೇಶವನ್ನು ನೀಡುವ ಮೂಲಕ, ಇಂಧನ ನೀಡುವ ಮೂಲಕ, ವಿದ್ಯುತ್ ಯೋಜನೆಗಳಿಗೆ ಹಣಕಾಸು ಒದಗಿಸುವ ಮೂಲಕ ಮತ್ತು ವಿಪತ್ತು ಪರಿಹಾರವನ್ನು ಒದಗಿಸುವ ಮೂಲಕ ನೇಪಾಳದ ಆರ್ಥಿಕತೆಗೆ ಹೇಗೆ ಸಹಾಯ ಮಾಡುತ್ತಿದೆ ಎಂಬುದನ್ನು ಹಲವಾರು ಬಳಕೆದಾರರು ಎತ್ತಿ ತೋರಿಸಿದ್ದಾರೆ. ವಿಮಾನಯಾನ ಸಂಸ್ಥೆಯ ವಿರುದ್ಧ ವಾಗ್ದಾಳಿ ನಡೆಸಿದ ಹಲವಾರು ಭಾರತೀಯ ಬಳಕೆದಾರರಲ್ಲಿ ಭೋಜ್‌ಪುರಿ ನಟ-ಗಾಯಕ ಖೇಸರಿಲಾಲ್ ಯಾದವ್ ಕೂಡ ಇದ್ದರು. ಅವರು ಇದು ಉದ್ದೇಶಪೂರ್ವಕವಾಗಿ ಪ್ರಚೋದಿಸಲು ಉದ್ದೇಶಿಸಲಾದ ಕೃತ್ಯವಾಗಿರಬಹುದು ಎಂದು ಆರೋಪ ಮಾಡಿದ್ದರು. ಈ ವಿಚಾರ ವಿವಾದಕ್ಕೆ ಕಾರಣವಾಗುತ್ತಿದ್ದಂತೆ ನೇಪಾಳ ಏರ್‌ಲೈನ್ಸ್ ಪೋಸ್ಟ್ ಅನ್ನು ಡಿಲೀಟ್ ಮಾಡಿ ಕ್ಷಮೆಯಾಚಿಸಿತು.

# ಹರ್ಮುಜ್ ತೈಲ ಇಕ್ಕಟ್ಟಿನಿಂದ ಪಾರಾದ ಭಾರತ

### ಅಬುಧಾಬಿಯ ಹಬ್ಶಾನ್ ಕರವಾಳಿಯಿಂದ ಪುಜೈರಾ ಬಂದರಿಗೆ ನಿರ್ಮಿಸಲಾದ ಪುಜೈರಾ ಪೈಪ್‌ಲೈನ್ ಬಳಸಿಕೊಳ್ಳಲು ಯುಎಇ ನಿರ್ಧಾರ


**ಅಬುಧಾಬಿ:** ಮಧ್ಯಪ್ರಾಚ್ಯ ಸಂಘರ್ಷದ ನಡುವೆ ಪೆಟ್ರೋಲಿಯಂ ರಫ್ತು ದೇಶಗಳ ಸಂಘಟನೆ (ಒಪೆಕ್)ಯಿಂದ ನಿರ್ಗಮಿಸಿರುವ ಸಂಯುಕ್ತ ಅರಬ್ ರಾಷ್ಟ್ರ ಒಕ್ಕೂಟ (ಯುಎಇ) ಜಾಗತಿಕ ತೈಲ ಸರಬರಾಜಿಗೆ ಹೊಸ ಮಾರ್ಗ ಕಂಡುಕೊಂಡಿದೆ. ಹರ್ಮುಜ್ ಜಲಸಂಧಿಯನ್ನು ತಪ್ಪಿಸಿ ಭಾರತ ಸೇರಿದಂತೆ ಜಗತ್ತಿಗೆ ತೈಲ ರಫ್ತು ಮಾಡಲು ರೂಪಿಸಲಾದ ಹೊಸ ಹಾದಿಯನ್ನು ಮೇ 1 ರಿಂದ ಅಧಿಕೃತವಾಗಿ ಬಳಸಿಕೊಳ್ಳಲು ಮುಂದಾಗಿದೆ.

ಒಪೆಕ್‌ನಿಂದ ನಿರ್ಗಮಿಸಿರುವುದರಿಂದ ಯುಎಇ ಈಗ ತೈಲ ಉತ್ಪಾದನೆ ಮಿತಿ ನಿಯಂತ್ರಣದಿಂದ ಮುಕ್ತವಾಗಿದೆ. ಪೂರ್ಣ ಪ್ರಮಾಣದ ಕಚ್ಚಾ ತೈಲ ಉತ್ಪಾದಿಸುವ ಮೂಲಕ ಜಾಗತಿಕ ತೈಲ ಮಾರುಕಟ್ಟೆಗೆ ಸ್ವಯಂ ಮರ್ಬನ್ ಕಚ್ಚಾ ತೈಲ ರಫ್ತು ಮಾಡಲು

**ಭಾರತಕ್ಕೇನು ಪ್ರಯೋಜನ?**

ಪುಜೈರಾ ಬಂದರು ಮೂಲಕ ತೈಲ ಸರಬರಾಜು ಮಾಡುವ ಯುಎಇ ಉದ್ದೇಶದಿಂದ ಭಾರತದ ತೈಲ ಆಮದು ಹಾದಿ ಸುಗಮಗೊಳ್ಳಲಿದೆ. ಭಾರತೀಯ ವಾಣಿಜ್ಯ ಹಡಗುಗಳು ಹರ್ಮುಜ್ ಸಂಪರ್ಕಿಸದೇ ತೈಲವನ್ನು ತರಬಹುದಾಗಿದೆ.






- ಪುಜೈರಾ ಬಂದರು' ಇಂಧನ ರಫ್ತಿಗೆ ಹೊಸ ಮಾರ್ಗ ಕಂಡುಕೊಂಡ ಯುಎಇ
- ಒಪೆಕ್‌ನಿಂದ ನಿರ್ಗಮಿಸಿರುವುದರಿಂದ ಯುಎಇ ಈಗ ತೈಲ ಉತ್ಪಾದನೆ ಮಿತಿ ನಿಯಂತ್ರಣದಿಂದ ಮುಕ್ತವಾಗಿದೆ.
- ಅಮೆರಿಕ ದಾಳಿ ಬಳಿಕ ಹರ್ಮುಜ್ ಜಲಸಂಧಿ ಮೇಲಿನ ಇರಾನ್ ದಿಗ್ಬಂಧನದಿಂದ ಜಾಗತಿಕ ತೈಲ ಮಾರುಕಟ್ಟೆ ತಲ್ಲಣಗೊಂಡಿತ್ತು

ಯೋಜನೆ ರೂಪಿಸಿದೆ. ಪುಜೈರಾ ಪೈಪ್‌ಲೈನ್ ಮೂಲಕ ಭಾರತ ಸೇರಿದಂತೆ ವಿವಿಧ ದೇಶಗಳಿಗೆ ಕಚ್ಚಾ ತೈಲ ರಫ್ತು ಮಾಡಲು ನಿರ್ಧರಿಸಿದೆ. ಅಮೆರಿಕ ದಾಳಿ ಬಳಿಕ ಹರ್ಮುಜ್ ಜಲಸಂಧಿ ಮೇಲಿನ ಇರಾನ್ ದಿಗ್ಬಂಧನದಿಂದ ಜಾಗತಿಕ ತೈಲ ಮಾರುಕಟ್ಟೆ ತಲ್ಲಣಗೊಂಡಿತ್ತು. ಹರ್ಮುಜ್ ಜಲಸಂಧಿಯ ಬಂಧ ತಪ್ಪಿಸಿ ತೈಲ ರಫ್ತಿಗೆ ಪರ್ಯಾಯ ಮಾರ್ಗ ಕಂಡುಕೊಂಡಿದೆ. ಅಬುಧಾಬಿಯ ಹಬ್ಶಾನ್ ಕರವಾಳಿಯಿಂದ ಪುಜೈರಾ ಬಂದರಿಗೆ ನಿರ್ಮಿಸಲಾದ ಪುಜೈರಾ ಪೈಪ್‌ಲೈನ್ ಬಳಸಿಕೊಳ್ಳಲು ಯುಎಇ ನಿರ್ಧರಿಸಿದೆ.

ಪುಜೈರಾ ಬಂದರು ಬಹುದೊಡ್ಡ ತೈಲ ಸಂಗ್ರಹಾಗಾರ ಹೊಂದಿದ್ದು, ಹಡಗುಗಳ ನಿಲುಗಡೆಗೆ ಸೂಕ್ತ ವ್ಯವಸ್ಥೆ ಹೊಂದಿದೆ. ಪ್ರಾದೇಶಿಕ ಸಂಘರ್ಷದ ಬಿಸಿಯಿಂದ ಮುಕ್ತವಾಗಿರುವ ಬಂದರಿನಿಂದ ತೈಲ ಸರಬರಾಜು ಸುಲಭವಾಗಲಿದೆ. ಭಾರತ ಸೇರಿದಂತೆ ಏಷ್ಯಾದ ಇತರೆ ದೇಶಗಳ ತೈಲ ಸರಬರಾಜು ಸರಪಳಿ ಬಲಗೊಳ್ಳಲಿದೆ.

**ರಫ್ತಿಗೆ ಪರ್ಯಾಯ ಮಾರ್ಗ**

ಸಮಗ್ರ ಕಾರ್ಯತಂತ್ರ ಪಾಲುದಾರಿಕೆ ಬಂಧ ಹೊಂದಿರುವ ಭಾರತ-ಯುಎಇ ನಡುವೆ ವಾರ್ಷಿಕ 200 ಶತಕೋಟಿ ಡಾಲರ್ ವ್ಯವಹಾರ ನಡೆಯುತ್ತಿದೆ.

ಭಾರತದ ಒಟ್ಟು ತೈಲ ಆಮದಿನಲ್ಲಿ ಯುಎಇ ಪಾಲು ಶೇ.10ರಷ್ಟಿದ್ದು, ಪುಜೈರಾ ಬಂದರು ಮೂಲಕ ಆಮದು ಪ್ರಮಾಣ ಮತ್ತಷ್ಟು ಹೆಚ್ಚಳವಾಗುವ ನಿರೀಕ್ಷೆಯಿದೆ.

ಭಾರತ 3 ಶತಕೋಟಿ ಡಾಲರ್ ಮೌಲ್ಯದ ಎಲ್‌ಎನ್‌ಜಿ ಆಮದು ಒಪ್ಪಂದಕ್ಕೆ ಸಹಿ ಹಾಕಿದ್ದು, ಯುಎಇ ತೈಲ ಕ್ಷೇತ್ರಗಳಿಂದ ಹೆಚ್ಚಿನ ಪ್ರಮಾಣದ ಆಮದು ನಿರೀಕ್ಷೆ ಹೊಂದಲಾಗಿದೆ.

**ಏನಿದು ಪುಜೈರಾ ಪೈಪ್‌ಲೈನ್ ?**

ಪುಜೈರಾ ಪೈಪ್‌ಲೈನ್ ಸುಮಾರು 406 ಕಿ.ಮೀ. ಉದ್ದವಿದೆ. ಪರ್ಶಿಯನ್ ಕೊಲ್ಲಿಯ ಅಬುಧಾಬಿಯ ಹಬ್ಶಾನ್ ಕರಾವಳಿಯಿಂದ ಆರಂಭವಾಗುವ ಪೈಪ್‌ಲೈನ್ ಒಮನ್ ಕೊಲ್ಲಿಯ ಪುಜೈರಾ ಬಂದರು ಸಂಪರ್ಕಿಸುತ್ತದೆ. ಪುಜೈರಾ ಬಂದರಿನಿಂದ ಬೇರೆಡೆ ಸುಲಭವಾಗಿ ತೈಲ ಸಾಗಿಸಬಹುದು. ಪುಜೈರಾ ಪೈಪ್ ಲೈನ್ 48 ಇಂಚು ವ್ಯಾಸ ಹೊಂದಿದ್ದು, ಪ್ರತಿ ದಿನ 15 ಲಕ್ಷ ಬ್ಯಾರಲ್ ತೈಲ ಸರಬರಾಜು ಮಾಡಬಹುದಾಗಿದೆ. 18 ಲಕ್ಷ ಬ್ಯಾರಲ್‌ಗೆ ಹೆಚ್ಚಿಸುವ ಸಾಮರ್ಥ್ಯ ಹೊಂದಿದೆ. ಪುಜೈರಾ ಬಂದರಿನಲ್ಲಿ 110 ಮೀ. ವ್ಯಾಸದ ಎಂಟು ತೈಲ ಸಂಗ್ರಹ ಟ್ಯಾಂಕರ್‌ಗಳಿದ್ದು, ಪ್ರತಿ ದಿನ 19 ಲಕ್ಷ ಬ್ಯಾರಲ್ ತೈಲವನ್ನು ರಫ್ತು ಮಾಡುವ ಸಾಮರ್ಥ್ಯವಿದೆ.

## ಮಿನಿ ನ್ಯೂಸ್

### ಕ್ಲೋರಿನ್ ಸೋರಿಕೆ, 24 ಮಂದಿ ಆಸ್ಪತ್ರೆಗೆ ದಾಖಲು

**ಪುಣೆ:** ಪುಣೆಯ ಕೊಂಧ್ವಾದಲ್ಲಿ ಕ್ಲೋರಿನ್ ಅನಿಲ ಸೋರಿಕೆಯಾದ ನಂತರ ಕನಿಷ್ಠ 22 ನಿವಾಸಿಗಳು ಮತ್ತು ಇಬ್ಬರು ಅಗ್ನಿಶಾಮಕ ದಳದವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಗ್ನಿಶಾಮಕ ಅಧಿಕಾರಿಗಳು ತಿಳಿಸಿದ್ದಾರೆ. ಗಂಗಾಧಾಮ್ ಪ್ರದೇಶದ ನಿಷ್ಕ್ರಿಯ ನೀರು ಶುದ್ಧೀಕರಣ ಘಟಕದ ಗೋಡೌನ್‌ನಲ್ಲಿ ಕ್ಲೋರಿನ್ ಹೊಂದಿರುವ ಕೈಬಿಟ್ಟ ಟ್ಯಾಂಕ್‌ನಿಂದ ಸೋರಿಕೆ ಉಂಟಾಗಿದೆ ಎಂದು ಅವರು ಹೇಳಿದರು. ಸೋರಿಕೆ ಮತ್ತು ನಂತರದ ಅನಿಲ ಹರಡುವಿಕೆಯ ನಂತರ, ಸುತ್ತಮುತ್ತಲಿನ ನಿವಾಸಿಗಳು ಉಸಿರಾಟದ ತೊಂದರೆ ಅನುಭವಿಸಿದರು.

ಕರೆ ಸ್ವೀಕರಿಸಿದ ನಂತರ, ಅಗ್ನಿಶಾಮಕ ತಂಡಗಳನ್ನು ಕಳುಹಿಸಲಾಯಿತು. ಹಲವಾರು ನಾಗರಿಕರನ್ನು ಸ್ಥಳಾಂತರಿಸಲಾಯಿತು ಮತ್ತು ಸೋರಿಕೆಯಾಗುವ ಟ್ಯಾಂಕ್ ಅನ್ನು ಸುರಕ್ಷತಾ ಸಾಧನಗಳನ್ನು ಬಳಸಿ ಸರಿಪಡಿಸಲಾಯಿತು ಎಂದು ಅಗ್ನಿ ಶಾಮಕ ಅಧಿಕಾರಿಯೊಬ್ಬರು ಹೇಳಿದರು. ಕಾರ್ಯಾಚರಣೆಯ ಸಮಯದಲ್ಲಿ, 22 ನಿವಾಸಿಗಳು ಮತ್ತು ಇಬ್ಬರು ಅಗ್ನಿಶಾಮಕ ದಳದ ಸಿಬ್ಬಂದಿ ಉಸಿರಾಟದ ತೊಂದರೆಯ ಬಗ್ಗೆ ದೂರು ನೀಡಿದ್ದು, ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು ಎಂದು ಅವರು ಹೇಳಿದರು.ಸ್ಥಳದಲ್ಲಿ ನೀರು ಶುದ್ಧೀಕರಣ ಘಟಕವನ್ನು ಈ ಹಿಂದೆ ನಿರ್ವಹಿಸುತ್ತಿದ್ದ ವ್ಯಕ್ತಿಯೊಬ್ಬರು ಘಟಕವನ್ನು ಕಿತ್ತುಹಾಕಿರುವುದಾಗಿ ಹೇಳಿದರು, ಆದರೆ ಕ್ಲೋರಿನ್ ಹೊಂದಿರುವ ಟ್ಯಾಂಕ್ ಗಮನಿಸದೆ ಉಳಿದು ಸೋರಿಕೆಯಾಗಿ ಕಂಡುಬಂದಿದೆ.

### ಲಡಾಖ್‌ನಲ್ಲಿ 4.1 ತೀವ್ರತೆಯ ಭೂಕಂಪ

**ಲೇಹ್:** ಗುರುವಾರ ಮುಂಜಾನೆ ಲಡಾಖ್‌ನಲ್ಲಿ 4.1 ತೀವ್ರತೆಯ ಭೂಕಂಪ ಸಂಭವಿಸಿದೆ ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ತಿಳಿಸಿದೆ. ಮುಂಜಾನೆ 3:54ರ ಸುಮಾರಿಗೆ ಭೂಕಂಪ ಸಂಭವಿಸಿದ್ದು, ಲೇಹ್‌ನಲ್ಲಿ 150 ಕಿ.ಮೀ ಆಳದಲ್ಲಿ ಕೇಂದ್ರಬಿಂದು ಪತ್ತೆಯಾಗಿದೆ. ಭೂಕಂಪದಿಂದ ಯಾವುದೇ ಪ್ರಾಣಹಾನಿಯಾಗಿಲ್ಲ. ಮಧ್ಯಮ ತೀವ್ರತೆಯ ಭೂಕಂಪ ಇದಾಗಿದೆ ಎಂದು ವರದಿಯಾಗಿದೆ. ಭೂಕಂಪ ಹಿನ್ನೆಲೆ ಮನೆಯೊಳಗಿದ್ದ ನಿವಾಸಿಗಳು ತಕ್ಷಣವೇ ಹೊರಗೆ ಓಡಿ ಬಂದಿದ್ದಾರೆ. ಸ್ವಲ್ಪ ಸಮಯದ ಬಳಿಕ ಮತ್ತೆ ಸಹಜ ಸ್ಥಿತಿಗೆ ಮರಳಿದೆ. ಇನ್ನು ಅಫ್ಘಾನಿಸ್ತಾನದಲ್ಲೂ 4.3 ತೀವ್ರತೆಯ ಭೂಕಂಪವಾಗಿದೆ ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರ ಮಾಹಿತಿ ನೀಡಿದೆ.

### ಮದುವೆಯ ಡಿಜೆ ಸೌಂಡ್‌ನಿಂದ 140 ಕೋಳಿಗಳಿಗೆ ಹೃದಯಾಘಾತ

**ಸುಲ್ತಾನ್‌ಪುರ:** ಮದುವೆಗಳಲ್ಲಿ ಡಿಜೆ ಶಬ್ದ ಸಾಮಾನ್ಯ. ಆದರೆ, ಉತ್ತರ ಪ್ರದೇಶದ ಸುಲ್ತಾನ್‌ಪುರದ ಬಲ್ದಿರಾಯ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಘಟನೆಯೊಂದರಲ್ಲಿ ಈ ಡಿಜೆ ಶಬ್ದವೇ ನೂರಾರು ಕೋಳಿಗಳ ಸಾವಿಗೆ ಕಾರಣವಾಗಿದೆ. ಮದುವೆ ಮೆರವಣಿಗೆಯ ಸಮಯದಲ್ಲಿ ಜೋರಾಗಿ ಡಿಜೆ ಸಂಗೀತ ಹಾಕಿದ್ದರಿಂದ ದರಿಯಾಪುರ ಗ್ರಾಮದ ಕೋಳಿ ಸಾಕಣೆ ಕೇಂದ್ರದಲ್ಲಿ 140 ಕೋಳಿಗಳು ಸಾವನ್ನಪ್ಪಿವೆ. ಈ ವಿಚಿತ್ರ ಪ್ರಕರಣ ಈಗ ಕಾನೂನು ತಿರುವು ಪಡೆದುಕೊಂಡಿದೆ.

ದರಿಯಾಪುರ ಗ್ರಾಮದ ನಿವಾಸಿ ಬಬ್ಬನ್ ವಿಶ್ವಕರ್ಮ ಅವರ ವಿವಾಹವು ಏಪ್ರಿಲ್ 25ರಂದು ನಿಗದಿಯಾಗಿತ್ತು. ಕುಡ್ವಾರ್‌ನ ರಾಮ್ ಭದ್ರ, ಪೂರ್ವಾ ಗ್ರಾಮದಿಂದ ವಿವಾಹ ಮೆರವಣಿಗೆ ಬಂದಿತು. ಡಿಜೆ ಪೂರ್ಣ ಪ್ರಮಾಣದಲ್ಲಿ ನುಡಿಸುತ್ತಿತ್ತು. ಮೆರವಣಿಗೆ ಸಬೀರ್ ಅಲಿಯವರ ಕೋಳಿ ಸಾಕಣೆ ಕೇಂದ್ರದ ಮೂಲಕ ಹಾದು ಹೋದಾಗ ಸಂಗೀತವು ತುಂಬಾ ಜೋರಾಗಿತ್ತು. ಅದು ಫಾರಂನಲ್ಲಿನ ಕೋಳಿಗಳಲ್ಲಿ ಭಯವನ್ನು ಉಂಟುಮಾಡಿತು. ತೋಟದ ಮಾಲೀಕ ಸಬೀರ್ ಅಲಿ ಅವರ ಪ್ರಕಾರ, ಡಿಜೆ ಸಂಗೀತದ ಕಂಪನಗಳು ಮತ್ತು ವಿಪರೀತವಾದ ಶಬ್ದ ಕೋಳಿಗಳನ್ನು ಭಯಭೀತಗೊಳಿಸಿತು. ಇದರಿಂದ ಕ್ಷಣಾರ್ಧದಲ್ಲಿ 140 ಕೋಳಿಗಳು ಸತ್ತವು. ಡಿಜೆಗೆ ಧ್ವನಿಯನ್ನು ಕಡಿಮೆ ಮಾಡಲು ವಿನಂತಿಸಿದರೂ ಮದುವೆ ಮನೆಯವರು ಒಪ್ಪಿರಲಿಲ್ಲ ಅವರ ಮನವಿಗಳನ್ನು ನಿರ್ಲಕ್ಷಿಸಲಾಯಿತು ಎಂದು ಸಬೀರ್ ಆರೋಪಿಸಿದ್ದಾರೆ. ಇದರಿಂದಾದ ನಷ್ಟದಿಂದ ನೊಂದ ಸಬೀರ್ ಸ್ಥಳೀಯ ಪೊಲೀಸ್ ಠಾಣೆಗೆ ಮೇಲ್ಮನವಿ ಸಲ್ಲಿಸಿದರು. ಡಿಜೆಯಿಂದ ಬಂದ ತೀವ್ರವಾದ ಶಬ್ದವು ಕೋಳಿಗಳಲ್ಲಿ ಭಯಭೀತತೆಯನ್ನು ಉಂಟುಮಾಡಿತು. ಪಕ್ಷಿಗಳು ಆ ಶಬ್ದವನ್ನು ಸಹಿಸಲಾರದೆ 140 ಪಕ್ಷಿಗಳು ಸಾವನ್ನಪ್ಪಿದವು ಎಂದು ಅವರು ಹೇಳಿದರು.

### ಮತ್ತೆ ನಾವೇ ಸರ್ಕಾರ ರಚಿಸುತ್ತೇವೆ; ಮಮತಾ

**ಕೊಲ್ಕತ್ತಾ:** ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಇಂದು ವಿಡಿಯೋ ಸಂದೇಶ ಬಿಡುಗಡೆ ಮಾಡಿದ್ದು, ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷವು ನಿರ್ಣಾಯಕ ಗೆಲುವಿನ ಹಾದಿಯಲ್ಲಿದೆ ಎಂದು ಹೇಳಿದ್ದಾರೆ. ಚುನಾವಣೆಯ ಫಲಿತಾಂಶವು ಈಗಾಗಲೇ ತಮ್ಮ ಪಕ್ಷದ ಪರವಾಗಿ ಸ್ಪಷ್ಟವಾಗಿದೆ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಇತ್ತೀಚೆಗೆ ಮುಕ್ತಾಯಗೊಂಡ ವಿಧಾನಸಭಾ ಚುನಾವಣೆಗೆ ತಮ್ಮ ವಿಶ್ವಾಸವನ್ನು ಬಲಪಡಿಸುತ್ತಾ, ನಾವು 226ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತೇವೆ ಎಂದು ಅವರು ಹೇಳಿದ್ದಾರೆ.

ಎಕ್ಸಿಟ್ ಪೋಲ್‌ಗಳು ಬಿಜೆಪಿ ಕಚೇರಿಯಿಂದ ಬಂದಿವೆ. ಅದರಲ್ಲಿ ಹೇಳಿರುವ ಸಂಖ್ಯೆಗಳು ಕಟ್ಟುಕಥೆಯಾಗಿದ್ದು, ಟಿಎಂಸಿ ಕಾರ್ಯಕರ್ತರನ್ನು ನಿರಾಶೆಗೊಳಿಸುವ ಉದ್ದೇಶವನ್ನು ಹೊಂದಿವೆ'' ಎಂದು ಮಮತಾ ಬ್ಯಾನರ್ಜಿ ವಿಡಿಯೋ ಸಂದೇಶದಲ್ಲಿ ಹೇಳಿದ್ದಾರೆ. ತಮ್ಮ ಕ್ಷೇತ್ರವಾದ ಭವಾನಿಪುರದಲ್ಲಿ ಇಡೀ ರಾತ್ರಿ ದಾಳಿಗಳನ್ನು ನಡೆಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಬಿಜೆಪಿ ಅಂತಿಮ ಆಟವಾಡಿದೆ. ನಿಜವಾದ ಅಂಕಿಅಂಶಗಳನ್ನು ಬಿಡುಗಡೆ ಮಾಡಿದ್ದರೆ ಷೇರು ಮಾರುಕಟ್ಟೆಗಳು ಉರುಳುತ್ತಿದ್ದವು. ಜನರು ಒಟ್ಟಾಗಿರಬೇಕು. ಮತ ಎಣಿಕೆಯ ಮೇಲೆ ನಿಗಾ ಇಡಬೇಕು. ರಾತ್ರಿಯಿಡೀ ಎಚ್ಚರವಾಗಿರಿ ಎಂದು ಅವರು ಹೇಳಿದ್ದಾರೆ.

### ಆರ್‌ಎಸ್‌ಎಸ್ ಕಚೇರಿ ಸ್ಫೋಟಿಸುವುದಾಗಿ ಬೆದರಿಕೆ

**ನಾಗಪುರ:** ಮಹಾರಾಷ್ಟ್ರದ ನಾಗಪುರದಲ್ಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಧಾನ ಕಚೇರಿ ಮತ್ತು ಭಾರತೀಯ ಜನತಾ ಪಕ್ಷದ ಕಚೇರಿಯನ್ನು ಗುರಿಯಾಗಿಸಿಕೊಂಡು ವಿಕಿರಣಶೀಲ ವಸ್ತುಗಳ ಮೂಲಕ ದಾಳಿ ನಡೆಸುವ ಬೆದರಿಕೆ ಪತ್ರವೊಂದು ಪೊಲೀಸ್ ಇಲಾಖೆಗೆ ಲಭ್ಯವಾಗಿದೆ. ಪತ್ರದ ಗಂಭೀರತೆಯನ್ನು ಅರಿತ ಪೊಲೀಸ್ ಆಯುಕ್ತರು ತಕ್ಷಣವೇ ಕಾರ್ಯಪ್ರವೃತ್ತರಾಗಿದ್ದಾರೆ.

ಬೆದರಿಕೆ ಪತ್ರ ಬಂದ ಬೆನ್ನಲ್ಲೇ ಭಯೋತ್ಪಾದನಾ ನಿಗ್ರಹ ದಳ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಮತ್ತು ಮುಂಬೈನಿಂದ ಆಗಮಿಸಿದ ಪರಮಾಣು ಶಕ್ತಿ ತಜ್ಞರ ವಿಶೇಷ ತಂಡವು ನಗರದ ಪ್ರಮುಖ ಸ್ಥಳಗಳಲ್ಲಿ ಜಂಟಿ ಕಾರ್ಯಾಚರಣೆ ನಡೆಸಿತು. ಸಂಘದ ಪ್ರಧಾನ ಕಚೇರಿ (ಮಹಲ್), ರೇಶಿಂಬಾಗ್ ಸ್ಮಾರಕ, ಗಣೇಶಪೇಟೆಯಲ್ಲಿರುವ ಬಿಜೆಪಿ ಕಚೇರಿ ಮತ್ತು ಮೆಟ್ರೋ ನಿಲ್ದಾಣಗಳಲ್ಲಿ ಅತ್ಯಾಧುನಿಕ ಉಪಕರಣಗಳ ಸಹಾಯದಿಂದ ಸುಮಾರು ಒಂದು ಗಂಟೆ ಕಾಲ ವ್ಯಾಪಕ ತಪಾಸಣೆ ನಡೆಸಲಾಯಿತು.

ಪತ್ರದಲ್ಲಿ ಉಲ್ಲೇಖಿಸಲಾಗಿದ್ದ ಅಪಾಯಕಾರಿ 'ಸೀಸಿಯಮ್-137' ಅಥವಾ ಯಾವುದೇ ಇತರ ವಿಕಿರಣಶೀಲ ಕಣಗಳು ತಪಾಸಣೆಯ ಸಮಯದಲ್ಲಿ ಎಲ್ಲಿಯೂ ಕಂಡುಬಂದಿಲ್ಲ. ಇದು ಇಡೀ ನಗರವು ನೆಮ್ಮದಿಯ ನಿಟ್ಟುಸಿರು ಬಿಡುವಂತೆ ಮಾಡಿದೆ. ಸದ್ಯ ಎಟಿಎಸ್ ನೀಡಿದ ದೂರಿನ ಆಧಾರದ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

# ಪೆಟ್ರೋಲ್ ಬಾಂಬ್ ರೀಲ್ಸ್: ರಜತ್ ವಿರುದ್ಧ ಎಫ್ ಐ ಆರ್ ದಾಖಲು!

ಬಿಗ್‌ಬಾಸ್ ಖ್ಯಾತಿಯ ರಜತ್ ಮತ್ತೊಂದು ಎಡವಟ್ಟು ಮಾಡಿಕೊಂಡಿದ್ದು ಸಾರ್ವಜನಿಕ ರಸ್ತೆಯಲ್ಲೇ ಪೆಟ್ರೋಲ್ ಬಾಂಬ್ ಮಾದರಿಯ ಭೀಕರ ಸ್ಫೋಟ ನಡೆಸಿ ರೀಲ್ಸ್ ಮಾಡಿದ್ದು ಈ ಸಂಬಂಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಈ ಹಿಂದೆ ಬಾಯ್ಸ್ ವರ್ಸಸ್ ಗರ್ಲ್ಸ್ ಶೋ ಶೂಟಿಂಗ್ ಮಧ್ಯೆ ಮಚ್ಚು ಹಿಡಿದು ರೀಲ್ಸ್ ಮಾಡಿದ್ದ ರಜತ್ ಹಾಗೂ ವಿನಯ್ ವಿರುದ್ಧ ಕೇಸ್ ದಾಖಲಾಗಿದ್ದು ಇಬ್ಬರೂ ಪರಪ್ಪನ ಅಗ್ರಹಾರ ಜೈಲು ದರ್ಶನ ಮಾಡಿ ಬಂದಿದ್ದರು. ಇದಾದ ಬಳಿಕ ಮೈಸೂರಿನ ಪಾರಂಪರಿಕ ಕಟ್ಟಡದ ಮುಂದೆ ಫೋಟೋಶೂಟ್ ಮಾಡಿಸಿ ರಜತ್ ಸಂಕಷ್ಟಕ್ಕೆ ಸಿಲುಕಿದ್ದರು. ಇದೀಗ ಮತ್ತೊಂದು ಅದೇ ರೀತಿಯ ಎಡವಟ್ಟು ಮಾಡಿಕೊಂಡಿದ್ದಾರೆ.

ಹಿಂದೆ ಬೆಂಕಿ.. ಮುಂದೆ ಮಾಡಿಫೈ ಆಗಿರುವ ಬುಲೆಟ್ ಓಡಿಸುತ್ತಾ ತಾವು ಬರುವ ರೀಲ್ಸ್‌ನ ರಜತ್ ಶೇರ್ ಮಾಡಿಕೊಂಡಿದ್ದಾರೆ.

ಇದಕ್ಕೆ, ಸುಮ್ಮನೆ ತಮಾಷೆಗೆ ಮಾಡಿರೋ ಶೂಟ್. ಇದಕ್ಕೂ ಒಂದು ಕೇಸ್ ಹಾಕ್ಬೇಡ್ರಪ್ಪಾ ರಾಜ ಎಂದು ರಜತ್ ಬರೆದುಕೊಂಡಿದ್ದರು. ಜೊತೆಗೆ, ಈ ಕಂಟೆಂಟ್ ಕ್ರಿಯೇಟ್ ಮಾಡಿರೋದು ಚಿತ್ರೀಕರಣದ ಸಲುವಾಗಿ ಮಾತ್ರ. ಎಲ್ಲಾ ಅವಶ್ಯಕ ಸುರಕ್ಷತಾ ಕ್ರಮಗಳನ್ನ ಕೈಗೊಂಡು, ಪರಿಣತಿ ಹೊಂದಿರುವ ತಜ್ಞರಿಂದ ಮುನ್ನೆಚ್ಚರಿಕಾ ಕ್ರಮಗಳನ್ನ ಪಾಲಿಸಿ ಈ ಚಿತ್ರೀಕರಣ ಮಾಡಿದ್ದೇವೆ. ಇದನ್ನ ಅನುಕರಿಸಬೇಡಿ. ಇದನ್ನ ಮರುಸೃಷ್ಟಿಸಬೇಡಿ.

ಬೆಂಕಿ ಅಪಾಯಕಾರಿ. ಚಿತ್ರೀಕರಣದ ವೇಳೆ ಹೆಲ್ಮೆಟ್ ಧರಿಸಿಲ್ಲ. ಇದು ಅಸುರಕ್ಷಿತ. ರಸ್ತೆ ಸುರಕ್ಷತಾ ಕ್ರಮಗಳನ್ನ ಪಾಲಿಸಿ. ವಾಹನ ಚಲಾಯಿಸುವಾಗ ತಪ್ಪದೆ ಹೆಲ್ಮೆಟ್ ಧರಿಸಿ. ಧೂಮಪಾನ ಆರೋಗ್ಯಕ್ಕೆ ಹಾನಿಕರ. ಈ ವಿಡಿಯೋ ಧೂಮಪಾನವನ್ನ ಪ್ರಮೋಟ್ ಮಾಡುವುದಿಲ್ಲ ಎಂಬ ಡಿಸ್‌ಕ್ಲೈಮರ್‌ನ ತಮ್ಮ ರೀಲ್ಸ್ ಜೊತೆಗೆ ಹಾಕಿದ್ದರು.





ಜೋಗಿ ಪ್ರೇಮ್ ನಿರ್ದೇಶನ ಮಾಡಿರುವ ಕೆಡಿ ಸಿನಿಮಾ ಅದ್ದೂರಿಯಾಗಿ ಬಿಡುಗಡೆ ಆಗಿದೆ. ಧ್ರುವ ಸರ್ಜಾ ಅಭಿಮಾನಿಗಳು ಈ ಸಿನಿಮಾ ನೋಡಿ ಎಂಜಾಯ್ ಮಾಡುತ್ತಿದ್ದಾರೆ. ಮೊದಲ ದಿನ ಭರ್ಜರಿ ರೆಸ್ಪಾನ್ಸ್ ಸಿಕ್ಕಿದೆ. ಸಿನಿಮಾ ನೋಡಲು ಹೋದವರಿಗೆ ಒಂದು ಸರ್ಪ್ರೈಸ್ ಕೂಡ ಕಾದಿತ್ತು. ಈ ಸಿನಿಮಾಗೆ ಸೀಕ್ವೆಲ್ ಕೂಡ ಬರಲಿದೆ ಎಂಬುದನ್ನು ಕ್ಲೈಮ್ಯಾಕ್ಸ್‌ನಲ್ಲಿ ತಿಳಿಸಲಾಗಿದೆ. ಅದರಿಂದಾಗಿ ಅಭಿಮಾನಿಗಳು ಎಕ್ಸೈಟ್ ಆಗಿದ್ದಾರೆ. ಆ ಬಗ್ಗೆ ಜೋಗಿ ಪ್ರೇಮ್ ಅವರು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. ಕೆಡಿ 2 ಸಿನಿಮಾದ ಶೂಟಿಂಗ್ ಆಗಿದೆಯಾ ಎಂದು ಕೇಳಿದ ಪ್ರಶ್ನೆಗೆ ಪ್ರೇಮ್ ಅವರು ಉತ್ತರ ನೀಡಿದ್ದಾರೆ. ಮೊದಲು ಬೇರೆ ಭಾಷೆಗಳಲ್ಲಿ ರಿಲೀಸ್ ಆಗಲಿ. ಆಮೇಲೆ ಹೇಳುತ್ತೇನೆ. ಸಾವು ಸುಮ್ಮನೆ ಉತ್ಪ್ರೇಕ್ಷೆಗೆ ಹೇಳಿದರೆ ಪ್ರೇಕ್ಷಕರ ಕುತೂಹಲ ಜಾಸ್ತಿ ಆಗುತ್ತದೆ. 100 ಪರ್ಸೆಂಟ್ ಈ ಸಿನಿಮಾಗೆ ಪಾರ್ಟ್ 2 ಬರುತ್ತದೆ. ಇದಕ್ಕೆಲ್ಲ ಕೆವಿಎನ್ ಪ್ರೊಡಕ್ಷನ್ಸ್ ಕಾರಣ ಎಂದು ಜೋಗಿ ಪ್ರೇಮ್ ಹೇಳಿದ್ದಾರೆ. 'ನಾವು ಈ ಸಿನಿಮಾಗಾಗಿ ತುಂಬ ಕಷ್ಟಪಟ್ಟಿದ್ದೇವೆ. ಯುಎಫ್‌ಓ ಸಮಸ್ಯೆಯಿಂದ ಬೆಳಗ್ಗೆ ಒಂದು ಶೋ ಸಮಸ್ಯೆ ಆಯಿತು. ಈಗ ಎಲ್ಲಾ ಕಡೆಗಳಲ್ಲಿ ಹೌಸ್‌ಫುಲ್ ಆಗುತ್ತಿದೆ. ಎಲ್ಲರೂ ಕೆಡಿ 2 ಎನ್ನುತ್ತಿದ್ದಾರೆ ಧನ್ಯವಾದಗಳು. ಅದಕ್ಕೆ ಇನ್ನೊಂದು ವರ್ಷ ಸಮಯ ತೆಗೆದುಕೊಳ್ಳುತ್ತೇನೆ. ಸಿನಿಮಾ ಗೆದ್ದಿದ್ದಕ್ಕೆ ಖುಷಿ ಇದೆ. ಗೀತಕ್ಕ ಕೂಡ ಸಿನಿಮಾ ನೋಡಿ ಮೆಚ್ಚಿಕೊಂಡರು' ಎಂದಿದ್ದಾರೆ ಪ್ರೇಮ್.

## ಇನ್ನು ಒಂದೇ ವರ್ಷದಲ್ಲಿ ಕೆಡಿ 2 ಬರಲಿದೆ



## ಮುಂಬೈನಲ್ಲಿ ಪ್ರಭಾಸ್ ಕ್ರೇಜ್ ಹೇಗಿದೆ ಸ್ವಂತ ಅನುಭವ ವಿವರಿಸಿದ ಕರಣ್ ಜೋಹರ್

ಪ್ರಭಾಸ್ ಭಾರತದ ಅತಿ ದೊಡ್ಡ ಪ್ಯಾನ್ ಇಂಡಿಯಾ ಸ್ಟಾರ್ ನಟರಲ್ಲಿ ಒಬ್ಬರು. ಬಾಹುಬಲಿ ಮತ್ತು ಬಾಹುಬಲಿ 2 ಸಿನಿಮಾಗಳ ಬಳಿಕ ಅವರ ಜನಪ್ರಿಯತೆ ಹತ್ತು ಪಟ್ಟು ಹೆಚ್ಚಾಗಿದೆ. ಬಾಹುಬಲಿಗೆ ಮುಂಚೆ ಪ್ರಭಾಸ್ ಇಷ್ಟು ದೊಡ್ಡ ಸ್ಟಾರ್ ಆಗಿರಲಿಲ್ಲ ಎಂಬುವವರೂ ಇದ್ದಾರೆ. ಆದರೆ ಹಿಂದೊಮ್ಮೆ ಕರಣ್ ಜೋಹರ್, ಪ್ರಭಾಸ್ ಅವರ ಕ್ರೇಜ್ ಬಗ್ಗೆ ವಿವರಿಸಿದ್ದರು. ಅದೂ 'ಬಾಹುಬಲಿ' ಬಿಡುಗಡೆಗೆ ಮುಂಚೆಯೇ ಪ್ರಭಾಸ್ ಹವಾ, ಮುಂಬೈನಲ್ಲಿ ಹೇಗಿತ್ತು ಎಂಬುದನ್ನು ಕರಣ್ ಸಂದರ್ಶನದಲ್ಲಿ ವಿವರಿಸಿದ್ದರು.

ಬಾಹುಬಲಿ ಸಿನಿಮಾವನ್ನು ಕರಣ್ ಜೋಹರ್ ವಿತರಣೆ ಮಾಡಿದ್ದರು. ಪ್ರಭಾಸ್ ಹಾಗೂ ಕರಣ್ ಜೋಹರ್ ಅವರ ಮೊದಲ ಕೊಲ್ಯಾಬರೇಷನ್ ಅದಾಗಿತ್ತು. ಸಿನಿಮಾದ ಪ್ರಚಾರಕ್ಕಾಗಿ ಪ್ರಭಾಸ್ ಮುಂಬೈನಲ್ಲಿ ಕರಣ್ ಜೋಹರ್ ಕಚೇರಿಗೆ ಹೋಗಿದ್ದರು. ಆಗ ಕರಣ್ ಹೇಳಿರುವಂತೆ, 'ನನ್ನ ಕಚೇರಿಗೆ ಸ್ಟಾರ್ ನಟ, ನಟಿಯರು ಹೊಸಬರೇನೂ ಅಲ್ಲ. ಪ್ರತಿ ದಿನವೂ ಒಬ್ಬರಲ್ಲ ಒಬ್ಬರು ಸ್ಟಾರ್ ನಟ, ನಟಿಯರು ಬರುತ್ತಲೇ ಇರುತ್ತಾರೆ. ಆದರೆ ಪ್ರಭಾಸ್ ಮೊದಲ ಬಾರಿ ನನ್ನ ಕಚೇರಿಗೆ ಬಂದಾಗ ಅಲ್ಲೋಲ-ಕಲ್ಲೋಲವೇ ಆಗಿತ್ತು' ಎಂದಿದ್ದಾರೆ ಕರಣ್.

ಕಚೇರಿಯ ಒಳಗೆ ಹೊರಗೆ ಜನ ತುಂಬಿ ಹೋಗಿದ್ದರು. ಹೊರಗಿನ ಜನರೆಲ್ಲ ಕಚೇರಿಗೆ ನುಗ್ಗಿ ಬಿಟ್ಟರು, ನಮ್ಮ ಕಚೇರಿಯ ಲಾಬಿಯಲ್ಲಿ ಸುಮಾರು 500ಕ್ಕೂ ಹೆಚ್ಚು ಜನ ನಿಂತಿದ್ದರು. ಹೊರಗಡೆ ಅದಕ್ಕಿಂತಲೂ ಹೆಚ್ಚು ಜನ ತುಂಬಿದ್ದರು. ಪ್ರಭಾಸ್, ಪ್ರಭಾಸ್ ಎಂದು ಕಿರುಚಾಡುತ್ತಿದ್ದರು. ಅದನ್ನೆಲ್ಲ ನೋಡಿ ನನಗೆ ಗಾಬರಿ ಆಗಿಬಿಟ್ಟಿತ್ತು. ಆಗ ನನಗೆ ಅರ್ಥವಾಯ್ತು, ಪ್ರಭಾಸ್ ಕ್ರೇಜ್ ಎಂಥಹದ್ದು ಮತ್ತು ಟಿವಿಗಳಲ್ಲಿ ಪ್ರಸಾರ ಆಗುವ ಡಬ್ಬಿಂಗ್ ಸಿನಿಮಾಗಳಿಗೆ ಎಷ್ಟು ದೊಡ್ಡ ಮಾರುಕಟ್ಟೆ ಇದೆ ಎಂಬುದು ಎಂದು ಕರಣ್ ಹೇಳಿದ್ದಾರೆ.

ಬಾಹುಬಲಿ ಸಿನಿಮಾ ಬಿಡುಗಡೆ ಆಗುವ ಮುಂಚೆ ಪ್ರಭಾಸ್ ಅವರ ತೆಲುಗು ಸಿನಿಮಾಗಳು ಹಿಂದಿಗೆ ಡಬ್ ಆಗಿ ಸೋನಿ, ಸೆಟ್ ಮ್ಯಾಕ್ಸ್ ಇನ್ನಿತರೆ ಚಾನೆಲ್‌ಗಳಲ್ಲಿ ಪ್ರಸಾರ ಆಗುತ್ತಿರುತ್ತಿತ್ತು. ಆ ಸಿನಿಮಾಗಳನ್ನು ನೋಡಿಯೇ ಉತ್ತರದ ಜನ ಪ್ರಭಾಸ್ ಅವರ ಫ್ಯಾನ್ಸ್ ಆಗಿಬಿಟ್ಟಿದ್ದರು. ಬಾಹುಬಲಿ ಮತ್ತು ಬಾಹುಬಲಿ 2 ಸಿನಿಮಾದ ಬಳಿಕವಂತೂ ಪ್ರಭಾಸ್ ಜನಪ್ರಿಯತೆ ಹತ್ತು ಪಟ್ಟು ಹೆಚ್ಚಾಯ್ತು. ಇದೀಗ ಪ್ರಭಾಸ್ ಹಲವು ಸಿನಿಮಾಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪ್ರಭಾಸ್ ಪ್ರಸ್ತುತ ಸಂದೀಪ್ ರೆಡ್ಡಿ ವಂಗಾ ಜೊತೆಗೆ 'ಸ್ಪಿರಿಟ್' ಸಿನಿಮಾ ಶೂಟಿಂಗ್ ಮಾಡುತ್ತಿದ್ದಾರೆ. ರಘು ಹನುಪುಡಿ ನಿರ್ದೇಶನದ 'ಫೌಜಿ' ಸಿನಿಮಾ ಬಹುತೇಕ ಮುಗಿಸಿದ್ದಾರೆ.




## ಪ್ರಿಯಾಂಕಾ-ಆಲಿಯಾ ಕಟೀನಾ ಸಿನಿಮಾ ಸೆಟ್ಟೇರ್ತಾನೇ ಇಲ್ಲ

ನಟಿ ಪ್ರಿಯಾಂಕಾ ಚೋಪ್ರಾ, ಕತ್ರೀನಾ ಕೈಫ್ ಹಾಗೂ ಆಲಿಯಾ ಭಟ್ ನಟಿಸಬೇಕಿದ್ದ ಜೀ ಲೇ ಝರಾ ಸಿನಿಮಾ ಸೆಟ್ಟೇರುತ್ತಲೇ ಇಲ್ಲ ಎಂದು ನಿರ್ದೇಶಕ ಫರ್ಹಾನ್ ಅಖ್ತರ್ ಹೇಳಿದ್ದಾರೆ. ಈ ಸಿನಿಮಾ ಸೆಟ್ಟೇರುವ ಬಗ್ಗೆ ವರ್ಷಗಳ ಹಿಂದೆ ಸುದ್ದಿಯಾಗಿತ್ತು. ಆದರೆ ಸಿನಿಮಾ ಮಾತ್ರ ಹೊರಗೆ ಬಂದಿರಲಿಲ್ಲ. ಮೂರು ಘಟಾನುಘಟಿ ನಟಿಯರನ್ನು ಇಟ್ಟುಕೊಂಡು ಸಿನಿಮಾ ಮಾಡೋದು ಅಂದ್ರೆ ತಮಾಷೆ ಅಲ್ಲ ಎಂದು ಫರ್ಹಾನ್ ಹೇಳಿದ್ದಾರೆ. ಕ್ಲಾಸಿಕ್ ಸಿನಿಮಾವಾದ ಝಿಂದಗಿ ನಾ ಮಿಲೇಗಿ ದುಬಾರಾ ರೀತಿಯ ಕತೆ ಇದಾಗಿದೆ. ಇದಕ್ಕಾಗಿ ಫರ್ಹಾನ್ ಅಖ್ತರ್, ರೋಯಾ ಅಖ್ತರ್ ಹಾಗೂ ರೀಮಾ ಕಾಗಿ ಸ್ಕ್ರಿಪ್ಟ್ ತಯಾರು ಮಾಡಿದ್ದಾರೆ. ಒಂದು ಕ್ಷಣದ ಕುತೂಹಲಕ್ಕಾಗಿ ಸಿನಿಮಾ ಒಪ್ಪಿಕೊಂಡೆ. ಅದಾದ ನಂತರ ನಾಲ್ಕು ವರ್ಷಗಳಿಂದ ಈ ಸಿನಿಮಾ ಸೆಟ್ಟೇರಿಸಲು ಪ್ರಯತ್ನಿಸುತ್ತಾ ಇದ್ದೀನಿ. ಆದರೆ ಯಾವುದೋ ಒಂದು ಕಾರಣದಿಂದ ಸಿನಿಮಾ ಮುಂದೆ ಹೋಗುತ್ತಿದೆ. ನನ್ನ ತಾಳ್ಮೆ ಪರೀಕ್ಷೆಯಾಗುತ್ತಿದೆ ಎಂದು ಫರ್ಹಾನ್ ಹೇಳಿದ್ದಾರೆ. ಈ ಸಿನಿಮಾದಲ್ಲಿ ಪ್ರಿಯಾಂಕ, ಆಲಿಯಾ ಹಾಗೂ ಕಟೀನಾ ಮುಖ್ಯ ಪಾತ್ರದಲ್ಲಿದ್ದಾರೆ. ಮೂರು ಜನರ ಡೇಟ್ಸ್ ಹೊಂದಾಣಿಕೆ ಇನ್ನಿತರ ಸಮಸ್ಯೆಗಳು ಎದುರಾಗಿರುವ ಸಾಧ್ಯತೆ ಇದೆ.

## ಗ್ಲಾಮರ್ ಲೋಕದಿಂದ ಅಧ್ಯಾತ್ಮದತ್ತ ಮಮತಾ

90ರ ದಶಕದಲ್ಲಿ ಬಾಲಿವುಡ್‌ನ ಟಾಪ್ ನಟಿಯಾಗಿ ಮೆರೆದವರು ಮಮತಾ ಕುಲಕರ್ಣಿ. ಸಲ್ಮಾನ್ ಖಾನ್, ಶಾರುಖ್ ಖಾನ್ ಅವರಂತಹ ಸ್ಟಾರ್ ನಟರ ಜೊತೆ ಸ್ಕ್ರೀನ್ ಹಂಚಿಕೊಂಡಿದ್ದ ಈ ನಟಿ, ತಮ್ಮ ಸೌಂದರ್ಯ ಮತ್ತು ಧೈರ್ಯವಂತ ನಿರ್ಧಾರಗಳಿಂದಲೇ ಸುದ್ದಿಯಲ್ಲಿದ್ದರು. ಆದರೆ, ಉತ್ತುಂಗದಲ್ಲಿದ್ದಾಗಲೇ ಚಿತ್ರರಂಗದಿಂದ ಮಾಯವಾದ ಮಮತಾ, ದಶಕಗಳ ಕಾಲ ವಿದೇಶದಲ್ಲಿ ನೆಲೆಸಿದ್ದರು. ಅಧ್ಯಾತ್ಮದ ಹಾದಿ ಮತ್ತು ಮಹಾಕುಂಭ **ಮೇಳದ ಸಂಚಲನ:** 2025ರಲ್ಲಿ ಭಾರತಕ್ಕೆ ಮರಳಿದ ಮಮತಾ ಕುಲಕರ್ಣಿ ಎಲ್ಲರನ್ನೂ ಅಚ್ಚರಿಗೊಳಿಸಿದ್ದು ತಮ್ಮ ಬದಲಾದ ಜೀವನಶೈಲಿಯಿಂದ. ಪ್ರಯಾಗ್‌ರಾಜ್‌ನಲ್ಲಿ ನಡೆದ ಮಹಾಕುಂಭ ಮೇಳದಲ್ಲಿ ಕಾಣಿಸಿಕೊಂಡ ಅವರು, ಅಧ್ಯಾತ್ಮದ ಹಾದಿ ಹಿಡಿದು 'ಕಿನ್ನರ್ ಅಖಾಡ'ದ ಮಹಾಮಂಡಲೇಶ್ವರಿಯಾಗಿ ನೇಮಕಗೊಂಡರು. ತಮ್ಮ ಹಳೆಯ ಜೀವನಕ್ಕೆ ವಿದಾಯ ಹೇಳಿ ಶ್ರೀ ಯಮಯಿ ಮಮತಾ ನಂದ ಗಿರಿ ಎಂಬ ಹೊಸ ಹೆಸರನ್ನು ಪಡೆದರು. ಆದರೆ, ಈ ಆಧ್ಯಾತ್ಮಿಕ ಪಯಣ ಸುಗಮವಾಗಿರಲಿಲ್ಲ; ಭೂಗತ ಲೋಕದೊಂದಿಗಿನ ಹಳೆಯ ಕೊಂಡಿಗಳ ಆರೋಪದ ಮೇಲೆ ಅವರನ್ನು ಅಖಾಡದಿಂದ ಉಚ್ಚಾಟಿಸಲಾಯಿತು.



**ವಿವಾದಗಳ ಸುಳಿ ಮತ್ತು ಡ್ರಗ್ಸ್ ಪ್ರಕರಣ:** ಮಮತಾ ಅವರ ಜೀವನ ತಿರುವು ಪಡೆದಿದ್ದು 2015ರಲ್ಲಿ. 2000 ಕೋಟಿ ರೂಪಾಯಿಗಳ ಬೃಹತ್ ಅಂತರಾಷ್ಟ್ರೀಯ ಡ್ರಗ್ಸ್ ಜಾಲದಲ್ಲಿ ಅವರ ಹೆಸರು ಕೇಳಿಬಂದಿತ್ತು. ಅವರ ಪಾಲುದಾರ ವಿಕ್ಕಿ ಗೋಸ್ವಾಮಿ ಈ ಪ್ರಕರಣದ ಕಿಂಗ್‌ಪಿನ್ ಎಂದು ಆರೋಪಿಸಲಾಗಿತ್ತು. ಆದರೆ, 2024ರಲ್ಲಿ ಬಾಂಬೆ ಹೈಕೋರ್ಟ್ ಈ ಎಲ್ಲಾ ಆರೋಪಗಳನ್ನು ವಜಾಗೊಳಿಸಿ, ಮಮತಾ ಅವರಿಗೆ ದೊಡ್ಡ ರಿಲೀಫ್ ನೀಡಿತು. ದಾವುದ್ ಇಬ್ರಾಹಿಂ ಕುರಿತು ವಿವಾದಾತ್ಮಕ ಹೇಳಿಕೆ: ಇತ್ತೀಚಿನ ಸಂದರ್ಶನವೊಂದರಲ್ಲಿ ಮಮತಾ ಕುಲಕರ್ಣಿ ಅವರು ಭೂಗತ ಪಾತಕಿ ದಾವುದ್ ಇಬ್ರಾಹಿಂ ಕುರಿತು ನೀಡಿದ ಹೇಳಿಕೆ ಭಾರಿ ವಿವಾದ ಸೃಷ್ಟಿಸಿತ್ತು. ದಾವುದ್ ಭಯೋತ್ಪಾದಕನಲ್ಲ'' ಎಂಬರ್ಥದಲ್ಲಿ ಮಾತನಾಡಿದ ಅವರು, ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಅಥವಾ ಬಾಂಬ್ ಸ್ಫೋಟಗಳಲ್ಲಿ ಆತನ ಪಾತ್ರವಿಲ್ಲ ಎಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದರು.

## ಡ್ರೆಸ್ಸಿಂಗ್ ರೂಮ್‌ನಲ್ಲೇ ವೇಪಿಂಗ್ ರಿಯಾನ್ ಪರಾಗ್‌ಗೆ ಪಂದ್ಯ ಶುಲ್ಕದ 25% ದಂಡ, 1 ಡೀಮೆರಿಟ್ ಪಾಯಿಂಟ್

ಡ್ರೆಸ್ಸಿಂಗ್ ರೂಮ್‌ನಲ್ಲಿ ಇ-ಸಿಗರೇಟ್ ಸೇವಿಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜಸ್ಥಾನ್ ರಾಯಲ್ಸ್ ತಂಡದ ನಾಯಕ ರಿಯಾನ್ ಪರಾಗ್ ಅವರಿಗೆ ಬಿಸಿಸಿಐ ಭಾರೀ ದಂಡ ವಿಧಿಸಿದೆ. ಮುಲ್ಲನ್‌ಪುರದ ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ನಡೆಯುತ್ತಿದ್ದ ಪಂದ್ಯದ ವೇಳೆ ರಿಯಾನ್ ಪರಾಗ್ ವೇಪಿಂಗ್ ಮಾಡಿದ್ದ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಐಪಿಎಲ್‌ನ ನೀತಿ ಸಂಹಿತೆಯ ಲೆವೆಲ್-1 ಉಲ್ಲಂಘನೆಯಾಗಿತ್ತು. ಇದು ದೊಡ್ಡಮಟ್ಟದ ವಿವಾದಕ್ಕೂ ಕಾರಣವಾಗುತ್ತಿದ್ದಂತೆ ಬಿಸಿಸಿಐ ಕ್ರಮ ಕೈಗೊಂಡಿದೆ. ರಿಯಾನ್ ಪರಾಗ್ ಅವರಿಗೆ ಅಂದಿನ ಪಂದ್ಯಶುಲ್ಕದ ಶೇ.25 ರಷ್ಟು ದಂಡ ವಿಧಿಸಿದೆ. 1 ಡೀಮೆರಿಟ್ ಪಾಯಿಂಟ್ ಕೂಡ ನೀಡಲಾಗಿದ್ದು, ಇನ್ನೂ ಕಠಿಣ ಕ್ರಮಕ್ಕೆ ಚಿಂತನೆ ನಡೆಸಿದೆ. 24 ವರ್ಷ ವಯಸ್ಸಿನ ರಿಯಾನ್ ಪರಾಗ್ ಕ್ರಿಕೆಟ್ ಆಟಕ್ಕೆ ಅಪಖ್ಯಾತಿ ತರುವ ನಡವಳಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಅವರು ಐಪಿಎಲ್‌ನ ನೀತಿ ಸಂಹಿತೆಯ ಆರ್ಟಿಕಲ್ 2.21 ಅನ್ನು ಉಲ್ಲಂಘಟನೆ ಮಾಡಿರುವುದು ಸ್ಪಷ್ಟವಾಗಿದೆ. ಅದಕ್ಕಾಗಿ ಇನ್ನೂ ಹೆಚ್ಚಿನ ಕ್ರಮ ಕೈಗೊಳ್ಳಲು ಬಿಸಿಸಿಐ ಎದುರುನೋಡುತ್ತಿದೆ ಎಂದು ಬಿಸಿಸಿಐ ಹೇಳಿದೆ.



ಏ.28 ರಂದು ಪಂಜಾಬ್ ಕಿಂಗ್ಸ್ ವಿರುದ್ಧದ ಪಂದ್ಯದಲ್ಲಿ ರಾಜಸ್ಥಾನ್ ತಂಡ 223 ರನ್‌ಗಳ ಗುರಿಯನ್ನು ಬೆನ್ನಟ್ಟುತ್ತಿದ್ದಾಗ, ಪಂದ್ಯದ 16ನೇ ಓವರ್‌ನಲ್ಲಿ ರಿಯಾನ್ ಪರಾಗ್ ಅವರು ಡ್ರೆಸ್ಸಿಂಗ್ ರೂಮ್‌ನಲ್ಲಿ ವೇಪಿಂಗ್ ಮಾಡುತ್ತಿರುವುದು ನೇರ ಪ್ರಸಾರದ ವೇಳೆ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಬಿಸಿಸಿಐ ನಿಯಮಗಳ ಪ್ರಕಾರ, ಸ್ಟೇಡಿಯಂನ ಆವರಣದಲ್ಲಿ ಮತ್ತು ಡ್ರೆಸ್ಸಿಂಗ್ ರೂಮ್‌ಗಳಲ್ಲಿ ಧೂಮಪಾನ ಅಥವಾ ವೇಪಿಂಗ್ ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. ಭಾರತದಲ್ಲಿ ಎಲೆಕ್ಟ್ರಾನಿಕ್ ಸಿಗರೇಟ್ ನಿಷೇಧ ಕಾಯ್ದೆ, 2019' ಅಡಿಯಲ್ಲಿ ಇ-ಸಿಗರೇಟ್‌ಗಳ ಉತ್ಪಾದನೆ, ಮಾರಾಟ ಮತ್ತು ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಇ-ಸಿಗರೇಟ್ ಮೇಲಿನ ನಿಷೇಧವನ್ನು ಉಲ್ಲಂಘಿಸಿರುವುದರಿಂದ, ಅವರಿಗೆ ಜೈಲು ಶಿಕ್ಷೆ ಅಥವಾ ದಂಡ ವಿಧಿಸುವ ಸಾಧ್ಯತೆಯೂ ಇದೆ. ಕೆಲ ದಿನಗಳ ಹಿಂದಷ್ಟೇ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರುದ್ಧ ಏಪ್ರಿಲ್ 10 ರಂದು ನಡೆದ ಪಂದ್ಯದ ವೇಳೆ ಆರ್‌ಆರ್ ಫ್ರಾಂಚೈಸಿ ವ್ಯವಸ್ಥಾಪಕ ರೋಮಿ ಭಿಂದರ್ ಡಗೌಟ್‌ನಲ್ಲಿ ಮೊಬೈಲ್ ಬಳಸಿ ಸಿಕ್ಕಿಬಿದ್ದಿದ್ದರು.

ಇದೀಗ ಭಾರತದಲ್ಲಿ ಬಳಕೆಯಲ್ಲಿ ನಿಷೇಧವಿರುವ ಇ-ಸಿಗರೇಟ್ ಬಳಸಿ ಫ್ರಾಂಚೈಸಿ ಮತ್ತೊಂದು ಯಡವಟ್ಟು ಮಾಡಿಕೊಂಡಿದೆ. ವೇಪ್ಸ್, ವೇಪ್ ಪೆನ್, ಹುಕ್ಕ ಪೆನ್ ಇ-ಸಿಗಾರ್, ಇ-ಪೈಪ್ ಎಂಬ ಹೆಸರುಗಳಿಂದ ಕರೆಯುತ್ತಾರೆ. ಈ ಸಾಧನಗಳು ಇ-ದ್ರವವನ್ನು ಉಪಯೋಗ ಮಾಡಿಕೊಂಡು ಏರಸಾಲ್‌ಗಳನ್ನ ಉತ್ಪತ್ತಿಮಾಡುತ್ತವೆ. ಇ-ದ್ರವದಲ್ಲಿ ಸಾಮಾನ್ಯವಾಗಿ ತಂಬಾಕಿನಿಂದ ಉತ್ಪತ್ತಿಯಾಗುವ ನಿಕೋಟಿನ್ ಅಂಶ, ಪ್ರೊಪಿಲೀನ್, ಗ್ಲೈಕಾಲ್, ಗ್ಲಿಸರೀನ್, ಪರಿಮಳ ಸೂಸುವಂತಹ ವಸ್ತುಗಳನ್ನು ಬಳಕೆ ಮಾಡಲಾಗುತ್ತದೆ.

## ಸೋಲಿನ ಬಳಿಕ ಮುಖ ಮುಚ್ಚಿಕೊಂಡ ರೋಹಿತ್ ಶರ್ಮಾ

ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಮುಂಬೈ ಇಂಡಿಯನ್ಸ್ ತಂಡ 6 ವಿಕೆಟ್‌ಗಳಿಂದ ಸೋಲು ಅನುಭವಿಸಿದ ಬಳಿಕ ಗಾಯದಿಂದ ಹೊರಗುಳಿದಿರುವ ಮಾಜಿ ನಾಯಕ ರೋಹಿತ್ ಶರ್ಮಾ ಡಗೌಟ್‌ನಲ್ಲಿ ಮುಖವನ್ನು ಕೈಯಿಂದ ಮುಚ್ಚಿಕೊಂಡ ಪ್ರಸಂಗ ನಡೆಯಿತು. ತಮ್ಮ ನಾಯಕತ್ವದಲ್ಲಿ ಐದು ಬಾರಿ ಚಾಂಪಿಯನ್ಸ್ ಮಾಡಿರುವ ತಮ್ಮ ತಂಡದ ಸತತ ಸೋಲುಗಳನ್ನು ನೋಡಲು ಸಾಧ್ಯವಾಗದೆ, ಅವರು ಈ ರೀತಿ ಬೇಸರ ಮಾಡಿಕೊಂಡರು. 243 ರನ್‌ಗಳ ಗುರಿಯನ್ನು ನೀಡಿದರೂ ಎದುರಾಳಿ ತಂಡವನ್ನು ಕಟ್ಟಿ ಹಾಕಲು ಸಾಧ್ಯವಾಗಲಿಲ್ಲವೆಂದು ಅವರು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ರೋಹಿತ್ ಶರ್ಮಾ ಗಾಯಕ್ಕೆ ತುತ್ತಾಗಿದ್ದಾರೆ ಹಾಗೂ ಹಲವು ಪಂದ್ಯಗಳಿಂದ ಬೆಂಚ್ ಕಾಯುತ್ತಿದ್ದಾರೆ. ಅವರು ಮುಂದಿನ ಪಂದ್ಯಗಳಲ್ಲಿ ಕಣಕ್ಕೆ ಇಳಿಯುವ ಸಾಧ್ಯತೆ ಇದೆ. ಅಂದ್ ಹಾಗೆ ರೋಹಿತ್ ಶರ್ಮಾ ಅವರ ಅನುಪಸ್ಥಿತಿಯಲ್ಲಿ ಮುಂಬೈ ಇಂಡಿಯನ್ಸ್ ತಂಡದ ಪರ ರಯಾನ್ ರಿಕೆಲ್ಟನ್ (123★ ರನ್) ಹಾಗೂ ವಿಲ್ ಜ್ಯಾಕ್ಸ್ (46 ರನ್) ಇನಿಂಗ್ಸ್ ಆರಂಭಿಸಿದರು. ಈ ಇಬ್ಬರೂ ಪವರ್‌ಪ್ಲೇನಲ್ಲಿ 78 ರನ್‌ಗಳನ್ನು ಕಲೆ ಹಾಕಿದ್ದರು. ಎಂಟನೇ ಓವರ್‌ನಲ್ಲಿ ವಿಲ್ ಜ್ಯಾಕ್ಸ್ ವಿಕೆಟ್ ಒಪ್ಪಿಸಿದ್ದರು. ನಮನ್ ಧೀರ್ 17 ಎಸೆತಗಳಲ್ಲಿ 22 ರನ್ ಗಳಿಸಿ ವಿಕೆಟ್ ಒಪ್ಪಿಸಿದರೆ, ನಾಯಕ ಹಾರ್ದಿಕ್ ಪಾಂಡ್ಯ 15 ಎಸೆತಗಳಲ್ಲಿ 31 ರನ್ ಗಳಿಸಿ ಔಟ್ ಆಗಿದ್ದರು. ಆದರೆ, ಒಂದು ತುದಿಯಲ್ಲಿ ಗಟ್ಟಿಯಾಗಿ ನಿಂತು 20 ಓವರ್‌ಗಳನ್ನು ಪೂರ್ಣಗೊಳಿಸಿದ ರಯಾಲ್ ರಿಕೆಲ್ಟನ್ ಅವರು 55 ಎಸೆತಗಳಲ್ಲಿ ಮುಂಬೈ ಇಂಡಿಯನ್ಸ್ ಪರ ವೇಗದ ಶತಕ ಸಿಡಿಸಿದ್ದರು. ಆ ಮೂಲಕ ಮುಂಬೈ 243 ರನ್‌ಗಳನ್ನು ಕಲೆ ಹಾಕಿತ್ತು. ಬಳಿಕ ಗುರಿ ಹಿಂಬಾಲಿಸಿದ ಸನ್‌ರೈಸರ್ಸ್ ಹೈದರಾಬಾದ್ ತಂಡದ ಪ್ರಮುಖ ಬ್ಯಾಟ್ಸ್‌ಮನ್‌ಗಳನ್ನು ಕಟ್ಟಿ ಹಾಕುವಲ್ಲಿ ಮುಂಬೈ ಬೌಲರ್‌ಗಳಿಂದ ಸಾಧ್ಯವಾಗಲಿಲ್ಲ. ಎಲ್ಲಾ ಬೌಲರ್‌ಗಳು 10.63ರ ಸರಾಸರಿಯಲ್ಲಿ ರನ್ ಬಿಟ್ಟುಕೊಟ್ಟರು. ಜಸ್‌ಪ್ರೀತ್ ಬುಮ್ರಾ ವಿಕೆಟ್ ಪಡೆಯದೆ 54 ರನ್‌ಗಳನ್ನು ನೀಡಿ ದುಬಾರಿ ಸ್ಪೆಲ್ ಬೌಲ್ ಮಾಡಿದರು. ಅಶ್ವಿನಿ ಕುಮಾರ್ ಎರಡು ಓವರ್‌ಗಳಿಗೆ 41 ರನ್‌ಗಳನ್ನು ಬಿಟ್ಟುಕೊಟ್ಟರು. ಘಝನ್‌ಫರ್ ಅವರು 51 ರನ್ ನೀಡಿದರೂ ಎರಡು ವಿಕೆಟ್ ಕಿತ್ತರು. ಟ್ರಾವಿಸ್ ಹೆಡ್ ಹಾಗೂ ಹೆನ್ರಿಕ್ ಕ್ಲಾಸೆನ್ ಅವರ ಸ್ಫೋಟಕ ಅರ್ಧಶತಕಗಳ ಬಲದಿಂದ ಸನ್‌ರೈಸರ್ಸ್ ತಂಡ 19ನೇ ಓವರ್‌ನಲ್ಲಿಯೇ ಗೆದ್ದು ಬೀಗಿತು.

ಪಂದ್ಯವನ್ನು ನೋಡುತ್ತಾ ಡಗೌಟ್‌ನಲ್ಲಿ ಕುಳಿತಿದ್ದ ರೋಹಿತ್ ಶರ್ಮಾ ಅಸಹಾಯಕರಾಗಿ ಕಾಣಿಸುತ್ತಿದ್ದರು. ನಾಯಕತ್ವದ ಗುಂಪಿನಲ್ಲಿ ಇಲ್ಲದ ಕಾರಣ ಅವರಿಂದ ಯಾವುದೇ ಸಲಹೆಗಳು ಹೊರಬರುತ್ತಿಲ್ಲ. ಈ ಸೀಸನ್‌ನಲ್ಲಿ ನಮ್ಮ ಬಳಿ ಹೆಚ್ಚು ಆಯ್ಕೆಗಳಿಲ್ಲ; ನಾವು ಯಾವ ಬದಲಾವಣೆಗಳನ್ನು ಮಾಡಬಹುದು ಎಂಬುದನ್ನು ನೋಡಬೇಕು. ನಾನು ನನ್ನ ಬೌಲರ್‌ಗಳನ್ನು ದೂರುವುದಿಲ್ಲ.



## ಏಷ್ಯಾದಲ್ಲಿ ಈ ಸಾಧನೆ ಮಾಡಿದ ಮೊದಲ ಬ್ಯಾಟರ್ ವಿರಾಟ್ ಕೊಹ್ಲಿ


ಗುಜರಾತ್ ಟೈಟಾನ್ಸ್ ಹಾಗೂ ಆರ್‌ಸಿಬಿ ನಡುವೆ ನಡೆದ ಐಪಿಎಲ್ 2026 ರ 42ನೇ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ಪರ ಮಾಜಿ ನಾಯಕ ವಿರಾಟ್ ಕೊಹ್ಲಿ ಉತ್ತಮ ಪ್ರದರ್ಶನ ನೀಡಿದರು, ಆದರೆ ಕೇವಲ 13 ಎಸೆತಗಳಲ್ಲಿ 28 ರನ್ ಗಳಿಸಿ ಔಟಾದರು. ಆದಾಗ್ಯೂ, ಈ ಪಂದ್ಯದಲ್ಲಿ ಕೊಹ್ಲಿ ಯಾವುದೇ ಬ್ಯಾಟ್ಸ್‌ಮನ್ ಮುರಿಯಲು ಅತ್ಯಂತ ಕಷ್ಟಕರವಾದ ಮಹತ್ವದ ದಾಖಲೆಯೊಂದನ್ನು ನಿರ್ಮಿಸಿದರು. ಗುಜರಾತ್ ವಿರುದ್ಧದ ಈ ಪಂದ್ಯದಲ್ಲಿ 28 ರನ್‌ಗಳ ಇನ್ನಿಂಗ್ಸ್ ಆಡಿದ ಕೊಹ್ಲಿ ಏಷ್ಯಾದ ನೆಲದಲ್ಲಿ 12,000 ಕ್ಕೂ ಹೆಚ್ಚು ಟಿ20 ರನ್ ಕಲೆಹಾಕಿದ್ದಾರೆ. ಈ ಮೂಲಕ ಈ ಸಾಧನೆ ಮಾಡಿದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಏಷ್ಯಾದಲ್ಲಿ 340 ಇನ್ನಿಂಗ್ಸ್‌ಗಳನ್ನಾಡಿರುವ ವಿರಾಟ್ ಕೊಹ್ಲಿ 12,012 ಟಿ20 ರನ್ ಗಳಿಸಿದ್ದಾರೆ. ಈ ಪಟ್ಟಿಯಲ್ಲಿ ವಿರಾಟ್ ಕೊಹ್ಲಿ ಅಕ್ಕಪಕ್ಕ ಪ್ರಸ್ತುತ ಯಾವ ಬ್ಯಾಟ್ಸ್‌ಮನ್ ಕೂಡ ಇಲ್ಲ. ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಶೋಯೆಬ್ ಮಲಿಕ್ ಏಷ್ಯಾದಲ್ಲಿ 10,252 ಟಿ20 ರನ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ. ರೋಹಿತ್ ಶರ್ಮಾ 10,023 ರನ್‌ಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ. ಒಟ್ಟಾರೆಯಾಗಿ ವಿರಾಟ್ ಕೊಹ್ಲಿ 422 ಟಿ20 ಪಂದ್ಯಗಳಲ್ಲಿ 13,894 ರನ್ ಗಳಿಸಿದ್ದಾರೆ. ಇದರಲ್ಲಿ ಒಂಬತ್ತು ಶತಕಗಳು ಮತ್ತು 108 ಅರ್ಧಶತಕಗಳು ಸೇರಿವೆ. ವಿರಾಟ್ ಕೊಹ್ಲಿ ಟಿ20 ಕ್ರಿಕೆಟ್‌ನಲ್ಲಿ 450 ಸಿಕ್ಸರ್‌ಗಳು ಮತ್ತು 1,250 ಕ್ಕೂ ಹೆಚ್ಚು ಬೌಂಡರಿಗಳನ್ನು ಬಾರಿಸಿದ್ದಾರೆ. ವಿರಾಟ್ ಕೊಹ್ಲಿ ಪ್ರಸ್ತುತ ಐಪಿಎಲ್ ಆವೃತ್ತಿಯಲ್ಲಿ ಆರ್‌ಸಿಬಿ ಪರ ಅತಿ ಹೆಚ್ಚು ರನ್ ಗಳಿಸಿದ ಆಟಗಾರರಾಗಿದ್ದಾರೆ. ಇದುವರೆಗೆ ಆಡಿರುವ ಒಂಬತ್ತು ಪಂದ್ಯಗಳಲ್ಲಿ 54 ಕ್ಕಿಂತ ಹೆಚ್ಚು ಬ್ಯಾಟಿಂಗ್ ಸರಾಸರಿಯೊಂದಿಗೆ 379 ರನ್ ಗಳಿಸಿದ್ದಾರೆ. ಇದರಲ್ಲಿ ಮೂರು ಐವತ್ತು ಪ್ಲಸ್ ಸ್ಕೋರ್‌ಗಳು ಸೇರಿವೆ. ಐಪಿಎಲ್‌ನಲ್ಲಿ ವಿವಾದಗಳು ಹೊಸದೇನಲ್ಲ. ಪ್ರತೀ ಪಂದ್ಯದಲ್ಲೂ, ಪ್ರತಿ ಆವೃತ್ತಿಯಲ್ಲೂ ಒಂದಿಲ್ಲೊಂದು ವಿವಾದಗಳನ್ನು ನೋಡುತ್ತಲೇ ಇರುತ್ತೇವೆ.



ಆದ್ರೆ ಕೆಲವೊಂದು ಪಂದ್ಯಗಳಲ್ಲಿ ನೀಡುವ ವಿವಾದಿತ ಔಟ್‌ಗಳು ಇಡೀ ಪಂದ್ಯದ ಗತಿಯನ್ನೇ ಬದಲಿಸಿಬಿಟ್ಟಿವೆ. ಇಂದಿನ ಆರ್‌ಸಿಬಿ ತ ಗುಜರಾತ್ ಟೈಟಾನ್ಸ್ ನಡುವಿನ ಪಂದ್ಯದಲ್ಲೂ ಅಂತಹದ್ದೇ ವಿವಾದವೊಂದು ಕಂಡುಬಂದಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಇಂದಿನ ಪಂದ್ಯದಲ್ಲಿ ಜೇಸನ್ ಹೋಲ್ಡರ್ ಅವರು ಹಿಡಿದ ಕ್ಯಾಚ್ ಈಗ ವಿವಾದಕ್ಕೆ ಕಾರಣವಾಗಿದೆ. ಸೋಷಿಯಲ್ ಮೀಡಿಯಾದಲ್ಲೂ ಭಾರೀ ಚರ್ಚೆಗೆ ಗ್ರಾಸವಾಗಿದ್ದು, ಅಂಪೈರ್ ತೀರ್ಪಿನ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ.

## ವರ್ಕ್ ಆಗುತ್ತಿಲ್ಲ ಬುಮ್ರಾ ಮ್ಯಾಜಿಕ್

ಐಪಿಎಲ್ 2026ರ 41ನೇ ಪಂದ್ಯದಲ್ಲಿ, ಮುಂಬೈ ಇಂಡಿಯನ್ಸ್ ತಂಡವು ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಹೀನಾಯ ಸೋಲು ಅನುಭವಿಸಿತು. ಮೊದಲು ಬ್ಯಾಟ್ ಮಾಡಿದ ಮುಂಬೈ ತಂಡವು 243 ರನ್ ಗಳಿಸಿತು. ವಿಶ್ವಶ್ರೇಷ್ಠ ಬೌಲರ್‌ಗಳನ್ನು ಹೊಂದಿರುವ ಮುಂಬೈಗೆ ಈ ಪಂದ್ಯದಲ್ಲಿ ಗೆಲುವು ಖಚಿತ ಎಂದೇ ನಂಬಲಾಗಿತ್ತು. ಆದರೆ, ಹೈದರಾಬಾದ್ ತಂಡವು ಎಂಟು ಎಸೆತಗಳು ಬಾಕಿ ಇರುವಾಗಲೇ ಗುರಿಯನ್ನು ಬೆನ್ನಟ್ಟಿತು. ಈ ಪಂದ್ಯದಲ್ಲಿ, ಮುಂಬೈ ಇಂಡಿಯನ್ಸ್‌ನ ಪ್ರಮುಖ ವೇಗಿ ಜಸ್ಪ್ರೀತ್ ಬುಮ್ರಾ ತೀವ್ರ ಮುಜುಗರಕ್ಕೆ ಒಳಗಾದರು. ಬುಮ್ರಾ ಅವರನ್ನು ವಿಶ್ವದ ಅತ್ಯುತ್ತಮ ವೇಗಿಗಳಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ, ಆದರೆ ಅವರು ಐಪಿಎಲ್ 2026ರಲ್ಲಿ ಕಷ್ಟಪಡುತ್ತಿದ್ದಾರೆ. ಜಸ್ಪ್ರೀತ್ ಬುಮ್ರಾ ತಮ್ಮ ನಾಲ್ಕು ಓವರ್ ಸ್ಪೆಲ್ ನಲ್ಲಿ 54 ರನ್ ಬಿಟ್ಟುಕೊಟ್ಟರು. ಅವರು ತಮ್ಮ ಮೊದಲ ಓವರ್ ನಲ್ಲಿ 14 ರನ್ ಬಿಟ್ಟುಕೊಟ್ಟರು, ಅದರಲ್ಲಿ ನಾಲ್ಕು ಲೆಗ್ ಬೈಗಳು, ಆದರೆ ಅವುಗಳು ಅವರ ಖಾತೆಗೆ ಸೇರಲಿಲ್ಲ. ಬುಮ್ರಾ ತಮ್ಮ ಎರಡನೇ ಓವರ್ ನಲ್ಲಿ ಎರಡು ಸಿಕ್ಸರ್ ಮತ್ತು ಒಂದು ಬೌಂಡರಿ ಸೇರಿದಂತೆ 18 ರನ್ ಬಿಟ್ಟುಕೊಟ್ಟರು.



## ಟಿ20 ವಿಶ್ವಕಪ್‌ಗೆ ನ್ಯೂಝಿಲೆಂಡ್ ತಂಡ ಪ್ರಕಟ

2026ರ ಜೂನ್ 12ರಿಂದ ಇಂಗ್ಲೆಂಡ್‌ನಲ್ಲಿ ಆರಂಭವಾಗಲಿರುವ ಐಸಿಸಿ ಮಹಿಳಾ ಟಿ20 ವಿಶ್ವಕಪ್ ಪಂದ್ಯಾವಳಿಗಾಗಿ ನ್ಯೂಝಿಲೆಂಡ್ ಕ್ರಿಕೆಟ್ ಮಂಡಳಿಯು 15 ಸದಸ್ಯರ ಬಲಿಷ್ಠ ತಂಡವನ್ನು ಪ್ರಕಟಿಸಿದೆ. ಹಾಲಿ ಚಾಂಪಿಯನ್ ಆಗಿರುವ ನ್ಯೂಝಿಲೆಂಡ್ ತಂಡವನ್ನು ಈ ಬಾರಿ ಸ್ಟಾರ್ ಆಲ್-ರೌಂಡರ್ ಅಮೆಲಿಯಾ ಕೆರ್ ಮುನ್ನಡೆಸಲಿದ್ದಾರೆ. ಇನ್ನು ತಂಡದಲ್ಲಿ ಅನುಭವಿ ಆಟಗಾರ್ತಿಯರಾದ ಸೂಝಿ ಬೆಟ್ಸ್, ಸೋಫಿ ಡಿವೈನ್, ಲಿಯಾ ತಹುಹು ಕಾಣಿಸಿಕೊಂಡಿದ್ದಾರೆ. ಇವರೊಂದಿಗೆ ನೆನ್ಸಿ ಪಟೇಲ್ ಮತ್ತು ಇಸಿ ಶಾರ್ಪ್ ಕೂಡ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಅದರಂತೆ ಟಿ20 ವಿಶ್ವಕಪ್‌ಗೆ ನ್ಯೂಝಿಲೆಂಡ್ ತಂಡ ಈ ಕೆಳಗಿನಂತಿದೆ.

ಅಮೆಲಿಯಾ ಕೆರ್ (ನಾಯಕಿ) ಸೂಝಿ ಬೇಟ್ಸ್ ಸೋಫಿ ಡಿವೈನ್, ಲಿಯಾ ತಹುಹು, ಮ್ಯಾಡಿ ಗ್ರೀನ್, ಬ್ರೂಕ್ ಹಾಲಿಡೇ, ಇಸಿ ಗೇಝ್ (ವಿಕೆಟ್ ಕೀಪರ್) ಪಾಲಿ ಇಂಗ್ಲಿಸ್ (ವಿಕೆಟ್ ಕೀಪರ್) ಜೆಸ್ ಕೆರ್, ರೋಸ್ಮೇರಿ ಮೇರ್, ಜಾರ್ಜಿಯಾ ಪ್ಲಿಮ್ಮರ್, ಫ್ಲೋರಾ ಡೆವೊನ್‌ಶೈರ್, ಬ್ರೀ ಇಲ್ಲಿಂಗ್ ನೆನ್ಸಿ ಪಟೇಲ್ ಇಸಿ ಶಾರ್ಪ್ ಈ ಬಾರಿಯ ಟಿ20 ವಿಶ್ವಕಪ್‌ನೊಂದಿಗೆ ನ್ಯೂಝಿಲೆಂಡ್‌ನ ದಿಗ್ಗಜ ಆಟಗಾರ್ತಿಯರಾದ ಸೋಫಿ ಡಿವೈನ್, ಸೂಝಿ ಬೇಟ್ಸ್ ಮತ್ತು ಲಿಯಾ ತಹುಹು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಲಿದ್ದಾರೆ. ಅಂದರೆ ಈ ಮೂವರು ಅನುಭವಿ ಆಟಗಾರ್ತಿಯರಿಗೆ ಇದು ಕೊನೆಯ ವಿಶ್ವಕಪ್. ಈ ವರ್ಲ್ಡ್‌ಕಪ್‌ನೊಂದಿಗೆ ಕಿವೀಸ್ ಪಡೆಯ ತ್ರಿಮೂರ್ತಿಗಳು ಕೆರಿಯರ್ ಅಂತ್ಯಗೊಳಿಸಲಿದ್ದಾರೆ. 2024ರಲ್ಲಿ ವಿಶ್ವಕಪ್ ಗೆದ್ದಿದ್ದ ನ್ಯೂಝಿಲೆಂಡ್ ತಂಡದ 10 ಆಟಗಾರ್ತಿಯರನ್ನು ಈ ಬಾರಿಯೂ ಉಳಿಸಿಕೊಳ್ಳಲಾಗಿದೆ. ಇವರ ಜೊತೆ ಇಬ್ಬರು ಯುವ ಪ್ರತಿಭೆಗಳು ಕೂಡ ಆಯ್ಕೆಯಾಗಿದ್ದಾರೆ. ಅದರಂತೆ ನೆನ್ಸಿ ಪಟೇಲ್ ಮತ್ತು ಇಸಿ ಶಾರ್ಪ್ ಚೊಚ್ಚಲ ಬಾರಿ ವಿಶ್ವಕಪ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ. ಇನ್ನು ತಂಡದ ಪ್ರಮುಖ ಸ್ಪಿನ್ನರ್ ಎಡೆನ್ ಕಾರ್ಸನ್ ಅವರು ಮೊಣಕೈ ಗಾಯದ ಸಮಸೆಯಿಂದಾಗಿ ಈ ಬಾರಿಯ ವಿಶ್ವಕಪ್‌ನಿಂದ ಹೊರಗುಳಿದಿದ್ದಾರೆ. ನ್ಯೂಝಿಲೆಂಡ್ ತಂಡವು ಬಿ ಗುಂಪಿನಲ್ಲಿ ಸ್ಥಾನ ಪಡೆದಿದ್ದು, ಇಂಗ್ಲೆಂಡ್, ವೆಸ್ಟ್ ಇಂಡೀಸ್, ಶ್ರೀಲಂಕಾ, ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ತಂಡಗಳೊಂದಿಗೆ ಸೆಣಸಲಿದೆ. ಜೂನ್ 13 ರಂದು ವೆಸ್ಟ್ ಇಂಡೀಸ್ ವಿರುದ್ಧದ ಪಂದ್ಯದೊಂದಿಗೆ ನ್ಯೂಝಿಲೆಂಡ್ ತನ್ನ ಅಭಿಯಾನವನ್ನು ಆರಂಭಿಸಲಿದೆ.




ಎಡೆನ್ ಕಾರ್ಸನ್ ಅವರು ಮೊಣಕೈ ಗಾಯ

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966